ಶುಕ್ರವಾರ, ಜೂನ್ 7, 2024 | ₹ 7.00

ಪ್ರಜಾವಾ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

AVANTRA

One of India's Largest Saree and Ethnic Wear Brand

ನಿಮ್ಮ ಸಂಭ್ರಮದ
ವಾರ್ಡ್‌ರೋಬ್ ಅನ್ನು ರಿಫ್ರೆಶ್ ಮಾಡಿ

ಸಾರ್ವಕಾಲಿಕ
ಅತಿದೊಡ್ಡ ಸೇಲ್

**No Cost EMI Available

*T&C Apply

ಬೆಂಗಳೂರು | ಬಳ್ಳಾರಿ | ಬೆಳಗಾವಿ | ಬಿಜಾಪುರ | ದಾವಣಗೆರೆ |
ಮಂಗಳೂರು | ಶಿವಮೊಗ್ಗ | ಉಡುಪಿ | ಮಂಡ್ಯ

ಸೀರೆಗಳು | ಲೆಹೆಂಗಾಗಳು | ಕುರ್ತಾಗಳು | ಬ್ಲೌಸ್‌ಗಳು | ಟೈಲರಿಂಗ್ ಸೇವೆಗಳು

HDFC BANK

Get up to ₹1,000 Instant Discount* with
EASYEMI** on HDFC Bank Debit / Credit Cards

ಲೋಕಸಭಾ ಚುನಾವಣೆ: ಕಮಲ ಪಡೆಗೆ 92 ಸ್ಥಾನಗಳು ನಷ್ಟ

ಬಿಜೆಪಿ ಗಳಿಸಿದ್ದು, ಕಳೆದುಕೊಂಡಿದ್ದು

• ಮಂಜುನಾಥ ಹೆಬ್ಬಾರ್

ನವದೆಹಲಿ: 2019ರ ಲೋಕಸಭಾ ಚುನಾವಣೆಯಲ್ಲಿ ಗೆದ್ದ 303 ಕ್ಷೇತ್ರಗಳಲ್ಲಿ 208 ಕ್ಷೇತ್ರಗಳನ್ನು ಬಿಜೆಪಿ ಉಳಿಸಿಕೊಂಡಿದೆ ಹಾಗೂ 92 ಕ್ಷೇತ್ರಗಳಲ್ಲಿ ಸೋತಿದೆ. ಕಳೆದ ಬಾರಿ ಗೆದ್ದ ಮೂರು ಕ್ಷೇತ್ರಗಳನ್ನು ಮಿತ್ರ ಪಕ್ಷಗಳಾದ ಜೆಡಿಎಸ್, ಜೆಡಿಯು ಹಾಗೂ ರಾಷ್ಟ್ರೀಯ ಲೋಕದಳಕ್ಕೆ ಬಿಟ್ಟುಕೊಟ್ಟಿದೆ. ಹೊಸದಾಗಿ 32 ಕಡೆಗಳಲ್ಲಿ ಗೆದ್ದಿದೆ.

ಪಕ್ಷವು ಮೂರನೇ ಬಾರಿ ಅಧಿಕಾರದ ಚುಕ್ಕಾಣಿ ಹಿಡಿದ ಬಳಿಕ ಸಂವಿಧಾನದ ತಿದ್ದುಪಡಿ ಮಾಡಲಿದೆ ಎಂದು ಬಿಜೆಪಿಯ ಅನಂತಕುಮಾರ್ ಹೆಗಡೆ ಅವರು ಚುನಾವಣಾ ಪೂರ್ವದಲ್ಲಿ ಹೇಳಿಕೆ ನೀಡಿದ್ದರು. ಕಮಲ ಪಾಳಯದ ಹಲವು ನಾಯಕರು ಇದೇ ರೀತಿಯ ಹೇಳಿಕೆಗಳನ್ನು ನೀಡಿದ್ದರು. ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ ಸಂವಿಧಾನ ಬದಲಾವಣೆ ಮಾಡಲಿದೆ ಹಾಗೂ ಮೀಸಲಾತಿ ಕಿತ್ತುಕೊಳ್ಳಲಿದೆ ಎಂದು ಕಾಂಗ್ರೆಸ್ ಪ್ರಚಾರ ನಡೆಸಿತ್ತು. ಪರಿಣಾಮವಾಗಿ, ಬಿಜೆಪಿಯು ಕಳೆದ ಬಾರಿ ಗೆದ್ದಿದ್ದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ 29 ಕ್ಷೇತ್ರಗಳನ್ನು ಕಳೆದುಕೊಂಡಿದೆ. ಸೋತ 92 ಕ್ಷೇತ್ರಗಳಲ್ಲಿ ಬಹುತೇಕ ಗ್ರಾಮೀಣ ಭಾರತದಲ್ಲಿವೆ. ಈ ಪೈಕಿ, 42 ಕ್ಷೇತ್ರಗಳು ಕಾಂಗ್ರೆಸ್ ಪಾಲಾಗಿವೆ. ಇದರಲ್ಲಿ ಮಹಾರಾಷ್ಟ್ರದ ಒಂಬತ್ತು, ಕರ್ನಾಟಕ ಹಾಗೂ ರಾಜಸ್ಥಾನದ ಎಂಟು ಹಾಗೂ ಉತ್ತರ ಪ್ರದೇಶದ 4 ಕ್ಷೇತ್ರಗಳು ಸೇರಿವೆ.

ಉತ್ತರ ಪ್ರದೇಶದಲ್ಲಿ ಬಿಜೆಪಿಗೆ ಈ ಸಲ ಬಹುದೊಡ್ಡ ನಷ್ಟವಾಗಿದೆ. ಈ ರಾಜ್ಯದಲ್ಲಿ 29 ಕ್ಷೇತ್ರಗಳನ್ನು ಕಳೆದುಕೊಂಡಿದೆ. ಬಿಜೆಪಿ ಕೈಯಲ್ಲಿದ್ದ 25 ಕ್ಷೇತ್ರಗಳನ್ನು ಸಮಾಜವಾದಿ ಪಕ್ಷ ಕಿತ್ತುಕೊಂಡಿದೆ. ರಾಜ್ಯದ 16 ಲೋಕಸಭಾ ಕ್ಷೇತ್ರಗಳಲ್ಲಿ ಬಹುಜನ ಸಮಾಜ ಪಕ್ಷವು (ಬಿಎಸ್‌ಪಿ) ವಿಜೇತ ಅಭ್ಯರ್ಥಿಯ ಗೆಲುವಿನ ಅಂತರಕ್ಕಿಂತ ಹೆಚ್ಚಿನ ಮತಗಳನ್ನು ಗಳಿಸಿದೆ. ಈ ಎಲ್ಲ ಕ್ಷೇತ್ರಗಳಲ್ಲಿ ಕಮಲ ಪಾಳಯ ಗೆದ್ದಿದೆ. ಈ ಎಲ್ಲ ಕ್ಷೇತ್ರಗಳಲ್ಲಿ ಸಮಾಜವಾದಿ ಅಥವಾ ಕಾಂಗ್ರೆಸ್ ದ್ವಿತೀಯ ಸ್ಥಾನ ಗಳಿಸಿವೆ. ಬಿಎಸ್‌ಪಿಯ 'ಪರೋಕ್ಷ ಸಹಕಾರ' ಇಲ್ಲದಿದ್ದರೆ ಕೇಸರಿ ಪಡೆಯು ರಾಜ್ಯದಲ್ಲಿ ಇನ್ನಷ್ಟು ಹೀನಾಯ ಸೋಲು ಕಾಣುತ್ತಿತ್ತು ಎಂದು ರಾಜಕೀಯ ತಜ್ಞರು ವಿಶ್ಲೇಷಿಸುತ್ತಾರೆ. ಬಿಎಸ್‌ಪಿಯು ಕಳೆದ ಚುನಾವಣೆಯಲ್ಲಿ 10 ಸ್ಥಾನಗಳನ್ನು ಗೆದ್ದುಕೊಂಡಿತ್ತು. ಈ ಸಲ ಸೊನ್ನೆ ಸುತ್ತಿದೆ. 34 ವರ್ಷಗಳ ಚುನಾವಣಾ ರಾಜಕಾರಣದ ಇತಿಹಾಸದಲ್ಲಿ ಪಕ್ಷವು ರಾಜ್ಯದಲ್ಲಿ ಸಂಸದರು, ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರನ್ನು ಹೊಂದಿಲ್ಲ.

ಇನ್ನೊಂದೆಡೆ, ಮಹಾರಾಷ್ಟ್ರದಲ್ಲಿ ಪ್ರಕಾಶ್ ಅಂಬೇಡ್ಕರ್ ನೇತೃತ್ವದ ವಂಚಿತ್ ಬಹುಜನ ಅಘಾಡಿ ಪಕ್ಷದ ಸ್ಪರ್ಧೆಯಿಂದ ಮತ ವಿಭಜನೆಯಾಗಿ ರುವುದು ಸ್ಪಷ್ಟವಾಗಿದೆ. ಈ ಪಕ್ಷವು ಯಾವುದೇ ಕ್ಷೇತ್ರವನ್ನು ಗೆದ್ದಿಲ್ಲ. ಆದರೆ, ನಾಲ್ಕು ಕ್ಷೇತ್ರಗಳಲ್ಲಿ ವಿಜೇತ ಅಭ್ಯರ್ಥಿಯ ಗೆಲುವಿನ ಅಂತರಕ್ಕಿಂತ ಹೆಚ್ಚಿನ ಮತಗಳನ್ನು ಪಡೆದಿದೆ. ಮೂರರಲ್ಲಿ ಶಿವಸೇನಾ ಹಾಗೂ ಒಂದರಲ್ಲಿ ಬಿಜೆಪಿ ಗೆದ್ದಿವೆ. ಪ್ರಕಾಶ್ ಅಂಬೇಡ್ಕರ್ ಅವರು ಅಕೋಲಾದಲ್ಲಿ ಸ್ಪರ್ಧಿಸಿ 2.76 ಲಕ್ಷ ಮತಗಳನ್ನು ಪಡೆದಿದ್ದರು. ಇಲ್ಲಿ ಬಿಜೆಪಿ ಅಭ್ಯರ್ಥಿಯ ಗೆಲುವಿನ ಅಂತರ 49,626 ಮತಗಳು. ಮುಂಬೈ ವಾಯವ್ಯ ಕ್ಷೇತ್ರದಲ್ಲಿ ಶಿವಸೇನಾದ ಅಭ್ಯರ್ಥಿ 48 ಮತಗಳ ಅಂತರದಿಂದ ಗೆದ್ದಿದ್ದಾರೆ. ಇಲ್ಲಿ ವಿಬಿಎ ಅಭ್ಯರ್ಥಿಗೆ 10,052 ಮತಗಳು ಸಿಕ್ಕಿವೆ.

2019ರಲ್ಲಿ ಗೆದ್ದ 303 ಕ್ಷೇತ್ರಗಳ ಪೈಕಿ 77 ಕ್ಷೇತ್ರಗಳು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಕ್ಷೇತ್ರಗಳು. ಈ ಸಲ ಬಿಜೆಪಿಯು 48 ಕ್ಷೇತ್ರಗಳನ್ನಷ್ಟೇ ಉಳಿಸಿಕೊಂಡಿದೆ.

2024ರಲ್ಲಿ ಬಿಜೆಪಿ ಕಳೆದುಕೊಂಡಿದ್ದು ಎಲ್ಲಿ, ಎಷ್ಟು?



ಹೊಸದಾಗಿ ಗಳಿಸಿದ್ದು ಎಲ್ಲಿ

ಒಡಿಶಾ	12
ತೆಲಂಗಾಣ	4
ಮಹಾರಾಷ್ಟ್ರ	3
ಆಂಧ್ರ ಪ್ರದೇಶ	3
ಪಶ್ಚಿಮ ಬಂಗಾಳ	2
ಬಿಹಾರ, ದಾದ್ರಾ ಮತ್ತು ನಗರ್‌ಹವೇಲಿ, ಛತ್ತೀಸಗಢ, ಅಂಡಮಾನ್ ಮತ್ತು ನಿಕೋಬಾರ್, ಉತ್ತರ ಪ್ರದೇಶ, ಮಧ್ಯಪ್ರದೇಶ, ಕರ್ನಾಟಕ ಮತ್ತು ಕೇರಳ	ತಲಾ 1

ಸೂಚ್ಯಂಕ ಕುಸಿತಕ್ಕೆ ಸಂಬಂಧಿಸಿ ರಾಹುಲ್ ಗಾಂಧಿ ಆರೋಪ

'ಷೇರು ಹಗರಣ: ಮೋದಿ, ಶಾ ನೇರ ಭಾಗಿ'

ನವದೆಹಲಿ (ರಾಯಿಟರ್ಸ್/ಪಿಟಿಐ): ಲೋಕಸಭಾ ಚುನಾವಣೆಯ ಮತದಾನೋತ್ತರ ಸಮೀಕ್ಷೆಗಳು ಹಾಗೂ ಚುನಾವಣಾ ಫಲಿತಾಂಶ ಪ್ರಕಟವಾದ ನಂತರ ದೇಶದ ಷೇರುಪೇಟೆ ಸೂಚ್ಯಂಕಗಳು ಕಂಡ ಭಾರಿ ಏರಿಳಿತಗಳ ಬಗ್ಗೆ ಸಂಸದೀಯ ಸಮಿತಿಯಿಂದ (ಜೆಪಿಸಿ) ತನಿಖೆ ಆಗಬೇಕು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆಗ್ರಹಿಸಿದ್ದಾರೆ.

ಸಣ್ಣ ಹೂಡಿಕೆದಾರರು ₹30 ಲಕ್ಷ ಕೋಟಿ ಕಳೆದುಕೊಂಡಿದ್ದಾರೆ. ಇದು ಷೇರುಪೇಟೆಯ ಅತಿದೊಡ್ಡ ಹಗರಣ. ಇದರಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ನೇರವಾಗಿ ಭಾಗಿಯಾಗಿದ್ದಾರೆ ಎಂದು ರಾಹುಲ್ ಆರೋಪಿಸಿದ್ದಾರೆ.

ಮೋದಿ ಮತ್ತು ಶಾ ಅವರು ಮಾತ್ರವಲ್ಲದೆ, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರೂ ಚುನಾವಣಾ ಫಲಿತಾಂಶಕ್ಕೆ ಮೊದಲು ಷೇರುಪೇಟೆಗಳ ಬಗ್ಗೆ ಮಾತನಾಡಿದ್ದರು. ಇಂಥದ್ದು ಈ ಹಿಂದೆ ಯಾವತ್ತೂ ಆಗಿರಲಿಲ್ಲ ಎಂದು ರಾಹುಲ್ ಹೇಳಿದ್ದಾರೆ.

'ನಕಲಿ' ಮತದಾನೋತ್ತರ ಸಮೀಕ್ಷೆಗಳ ಫಲಿತಾಂಶ ಪ್ರಕಟವಾದ ನಂತರ ಷೇರುಪೇಟೆ ಸೂಚ್ಯಂಕಗಳು ಏರಿಕೆ ಕಂಡವು. ಮತ ಎಣಿಕೆಯ ದಿನ ಅವು ಕುಸಿದವು. ಸಣ್ಣ ಹೂಡಿಕೆದಾರರು ಹೂಡಿಕೆಯ ಹಣ ಕಳೆದುಕೊಂಡರು. ದೇಶದ ಸಾಮಾನ್ಯ ಜನರು ಜೂನ್ 4ರಂದು ಷೇರುಪೇಟೆಗಳಲ್ಲಿ ₹30 ಲಕ್ಷ ಕೋಟಿ ಕಳೆದುಕೊಂಡರು. ಈ ಅತಿದೊಡ್ಡ ಷೇರುಪೇಟೆ ಹಗರಣದ ಬಗ್ಗೆ ಜೆಪಿಸಿ ತನಿಖೆ ಆಗಬೇಕು' ಎಂದಿದ್ದಾರೆ.

ಮತದಾನೋತ್ತರ ಸಮೀಕ್ಷೆಗಳ ಫಲಿತಾಂಶವು ಶನಿವಾರ ಸಂಜೆ ಪ್ರಕಟವಾದವು. ಸೋಮವಾರದ ವಹಿವಾಟಿನಲ್ಲಿ ದೇಶದ ಷೇರುಪೇಟೆ ಸೂಚ್ಯಂಕಗಳು ಭಾರಿ ಜಿಗಿತ ದಾಖಲಿಸಿದವು.

ಮೋದಿ ಮತ್ತು ಅವರ ಸಂಪುಟದ ಕೆಲವು ಸಚಿವರು ಚುನಾವಣಾ ಪ್ರಚಾರದ ಸಂದರ್ಭದಲ್ಲಿ, ಜೂನ್ 4ರಂದು ಫಲಿತಾಂಶ ಪ್ರಕಟವಾದಾಗ ಷೇರುಪೇಟೆಗಳು ಏರಿಕೆ ಕಾಣಲಿವೆ ಎಂದು ಹೇಳಿದ್ದರು. ಗೃಹ ಸಚಿವ ಅಮಿತ್ ಶಾ ಅವರು ಟಿ.ವಿ. ಸಂದರ್ಶನವೊಂದರಲ್ಲಿ, 'ಜೂನ್ 4ಕ್ಕೂ ಮೊದಲು ಖರೀದಿಸಿ, ಅವು ಜಿಗಿಯಲಿವೆ' ಎಂದು ಹೇಳಿದ್ದರು.

ಆದರೆ, ಫಲಿತಾಂಶ ಪ್ರಕವಾದ ದಿನ ಸೂಚ್ಯಂಕಗಳು ಸರಿಸುಮಾರು ಶೇ 6ರಷ್ಟು ಕುಸಿದಿದ್ದವು. ಚುನಾವಣೆಯ ಸಂದರ್ಭದಲ್ಲಿ ಪ್ರಧಾನಿ, ಗೃಹ ಸಚಿವ ಹಾಗೂ ಹಣಕಾಸು ಸಚಿವೆ ಷೇರುಪೇಟೆಯ ಬಗ್ಗೆ ಮಾತನಾಡಿದ್ದು ಇದೇ ಮೊದಲು ಎಂದು ರಾಹುಲ್ ಹೇಳಿದ್ದಾರೆ. ಮತದಾನೋತ್ತರ ಸಮೀಕ್ಷೆಗಳು ಸುಳ್ಳು ಹೇಳುತ್ತಿವೆ ಎಂಬ ಮಾಹಿತಿ ಬಿಜೆಪಿ ನಾಯಕರಿಗೆ ಇತ್ತು ಎಂದಿದ್ದಾರೆ.

ಮತದಾನೋತ್ತರ ಸಮೀಕ್ಷೆಗಳ ಫಲಿತಾಂಶ ಹಾಗೂ ಚುನಾವಣಾ ಫಲಿತಾಂಶ ಪ್ರಕಟವಾಗುವ ಮೊದಲು ನಡೆದ ಷೇರು ವಹಿವಾಟುಗಳ ಬಗ್ಗೆ ಸೆಬಿ ಪರಿಶೀಲನೆ ನಡೆಸುತ್ತಿದೆ ಎಂದು ಮೂಲವೊಂದು ತಿಳಿಸಿದೆ.

ರಾಹುಲ್ ಪ್ರಶ್ನೆಗಳು

- ಷೇರು ಪೇಟೆಗಳಲ್ಲಿ ಹೂಡಿಕೆ ಮಾಡುವ ಐದು ಕೋಟಿ ಕುಟುಂಬಗಳಿಗೆ ಪ್ರಧಾನಿ ಮತ್ತು ಗೃಹ ಸಚಿವರು ನಿರ್ದಿಷ್ಟವಾದ ಹೂಡಿಕೆ ಸಲಹೆಗಳನ್ನು ನೀಡಿದ್ದು ಏಕೆ? ಜನರಿಗೆ ಹೂಡಿಕೆ ಸಲಹೆ ನೀಡುವುದು ಅವರ ಕೆಲಸವೇ?
- ಷೇರು ಮೌಲ್ಯದ ಮೇಲೆ ಕೃತಕವಾಗಿ ಪ್ರಭಾವ ಬೀರಿದ ವಿಚಾರವಾಗಿ ಸೆಬಿ ತನಿಖೆ ಎದುರಿಸುತ್ತಿರುವ ಒಂದೇ ಉದ್ಯಮ ಸಮೂಹದ ಕೈಯಲ್ಲಿರುವ ಒಂದೇ ಮಾಧ್ಯಮ ಸಂಸ್ಥೆಗೆ ಎರಡು ಸಂದರ್ಶನಗಳನ್ನು ನೀಡಿದ್ದು ಏಕೆ?
- ಬಿಜೆಪಿ, ನಕಲಿ ಮತದಾನೋತ್ತರ ಸಮೀಕ್ಷೆ ನಡೆಸಿದವರು ಹಾಗೂ ಸಮೀಕ್ಷೆಗಳ ಫಲಿತಾಂಶ ಪ್ರಕಟವಾಗುವ ಒಂದು ದಿನ ಮೊದಲು ಹೂಡಿಕೆ ಮಾಡಿ, ಐದು ಕೋಟಿ ಕುಟುಂಬಗಳಿಗೆ ನಷ್ಟವಾದ ಹೊತ್ತಿನಲ್ಲಿ ತಾವು ಲಾಭ ಮಾಡಿಕೊಂಡ, ನಂಬಿಕೆಗೆ ಅರ್ಹವಲ್ಲದ ವಿದೇಶಿ ಹೂಡಿಕೆದಾರರ ನಡುವಿನ ಸಂಬಂಧ ಏನು?

'ನಿರಾಧಾರ ಆರೋಪ'

ಪ್ರಧಾನಿ ಹಾಗೂ ಗೃಹ ಸಚಿವರ ವಿರುದ್ಧ ರಾಹುಲ್ ಮಾಡಿರುವ ಆರೋಪಗಳು ನಿರಾಧಾರ ಎಂದು ಬಿಜೆಪಿ ಪ್ರತಿಕ್ರಿಯೆ ನೀಡಿದೆ.

ರಾಹುಲ್ ಅವರು ಹತಾಶೆಯಿಂದ ಇಂತಹ ಆರೋಪಗಳನ್ನು ಮಾಡುತ್ತಿದ್ದಾರೆ ಎಂದು ಬಿಜೆಪಿ ನಾಯಕ ಪೀಯೂಷ್ ಗೋಯಲ್ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

'ಸೋಲಿನ ನಂತರ ರಾಹುಲ್ ಅವರು ಹತಾಶೆಯಿಂದ, ಹೂಡಿಕೆದಾರರನ್ನು ತಪ್ಪುದಾರಿಗೆ ಎಳೆಯಲು ಪಿತೂರಿ ನಡೆಸಿದ್ದಾರೆ' ಎಂದು ಗೋಯಲ್ ಆರೋಪಿಸಿದ್ದಾರೆ.

ಜೀವ ಜಲ ನವದೆಹಲಿಯ ಚಾಣಕ್ಯಪುರಿಯಲ್ಲಿ ನೀರಿನ ಅಭಾವ ಉಂಟಾಗಿರುವ ಕಾರಣ ನಿವಾಸಿಗಳಿಗೆ ಟ್ಯಾಂಕರ್‌ನಲ್ಲಿ ನೀರು ಪೂರೈಸಲಾಯಿತು – ಪಿಟಿಐ ಚಿತ್ರ

ದೇವಾಲಯಗಳ ರಕ್ಷಣೆಗೆ ಕಾನೂನು ಹೋರಾಟ

ಬೆಳಗಾವಿ: 'ಮಸೀದಿಗಳಾಗಿ ಮಾರ್ಪಾಡು ಮಾಡಲಾದ ಕಾಶಿ ಮತ್ತು ಮಥುರಾ ದೇಗುಲಗಳನ್ನು ಮರಳಿ ಪಡೆಯಲು ಕಾನೂನು ಹೋರಾಟ ಪ್ರಗತಿಯಲ್ಲಿದೆ' ಎಂದು ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಹೇಳಿದರು.

'ಬೀದಿಯಲ್ಲಿ ಹೋರಾಡುವುದಕ್ಕಿಂತ ಕಾನೂನು ಹೋರಾಟ ಉತ್ತಮ ಎಂದು ಕೋರ್ಟ್‌ಗಳು ಹೇಳಿರುವ ಕಾರಣ ಅದನ್ನು ಅನುಸರಿಸಿದ್ದೇವೆ. ದೇವಾಲಯಗಳನ್ನು ಹಿಂಪಡೆಯುವ ನಮ್ಮ ಹೋರಾಟ ಸಮರ್ಥನೀಯ' ಎಂದು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

ರಾಜೀನಾಮೆ ಪಡೆಯುವಂತೆ ರಾಜ್ಯಪಾಲರಿಗೆ ಮನವಿ

ಹಗರಣದಲ್ಲಿ ಸಿ.ಎಂ ಭಾಗಿ: ಬಿಜೆಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ₹187 ಕೋಟಿ ಹಣ ವರ್ಗಾವಣೆ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ನೇರವಾಗಿ ಶಾಮೀಲಾಗಿರುವುದರಿಂದ ಅವರಿಂದ ರಾಜೀನಾಮೆ ಪಡೆಯಬೇಕು' ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಬಿಜೆಪಿ ಮನವಿ ಮಾಡಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರ ನೇತೃತ್ವದ ನಿಯೋಗ ಗುರುವಾರ ವಿಧಾನಸೌಧದಿಂದ ರಾಜಭವನಕ್ಕೆ ಕಾಲ್ನಡಿಗೆಯಲ್ಲಿ ತೆರಳಿ ಮನವಿಯನ್ನು ಅರ್ಪಿಸಿತು.

ಆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಈ ಹಗರಣದಲ್ಲಿ ಸಚಿವ ನಾಗೇಂದ್ರ ಮಾತ್ರವಲ್ಲ, ಸಿದ್ದರಾಮಯ್ಯ ಅವರು ಶಾಮೀಲಾಗಿರುವುದರಿಂದ ಅವರು ಕೂಡ ರಾಜೀನಾಮೆ ನೀಡಬೇಕು ಆಗ್ರಹಿಸಿದರು.

'ಬಡವರಿಗೆ ಸೇರಬೇಕಾಗಿದ್ದ ಹಣ ಸಿದ್ದರಾಮಯ್ಯ ಜೇಬಿಗೆ ಹೋಗಿದೆ. ಪರಿಶಿಷ್ಟ ಜಾತಿ, ಪಂಗಡದ ಹಣವನ್ನೂ ನುಂಗುತ್ತಾರೆ ಎನ್ನುವುದು ರಾಜ್ಯ ರಾಜಕೀಯದ ದುರಂತ. 14 ಬಾರಿ ಬಜೆಟ್ ಮಂಡಿಸಿದ್ದೇನೆ ಎಂದು ಸಿದ್ದರಾಮಯ್ಯ ಹೇಳಿಕೊಳುತ್ತಾರೆ. ಈಗ ಅವರ ಕಣ್ಣೆದುರಿನಲ್ಲೇ ಹಗರಣ ನಡೆದಿದೆ. ಒಂದು ವರ್ಷದಿಂದ ಕಾಂಗ್ರೆಸ್ ಸರ್ಕಾರ ಲೂಟಿ ಗ್ಯಾರಂಟಿ ನೀಡಿದೆ' ಎಂದರು.

'ನಾಗೇಂದ್ರ ಅವರು ಈ ಪ್ರಕರಣದಲ್ಲಿ ಸಣ್ಣ ಆರೋಪಿ. ಇನ್ನೂ ದೊಡ್ಡ ಆರೋಪಿಗಳು ಇದರ ಹಿಂದೆ ಇದ್ದಾರೆ. ಅಕ್ರಮ ಹಣವನ್ನು ಸಚಿವರೊಬ್ಬರೇ ನುಂಗಿಲ್ಲ. ಇಡೀ ಸಚಿವ ಸಂಪುಟ ಶಾಮೀಲಾಗಿದ್ದು, ಹಣ ಹೈದರಾಬಾದ್‌ಗೆ ಹೋಗಿ ಆ ಬಳಿಕ ದೆಹಲಿಯನ್ನು ತಲುಪಿದೆ. ಆ ಕಾರಣಕ್ಕೆ ಸಿದ್ದರಾಮಯ್ಯ ಸಿಬಿಐ ತನಿಖೆ ಒಪ್ಪುತ್ತಿಲ್ಲ. ಈ ಎಲ್ಲ ಸತ್ಯ ಹೊರಬರಲು ಪ್ರಕರಣವನ್ನು ಸಿಬಿಐಗೆ ನೀಡಬೇಕು. ಈ ಹಗರಣದ ಬಗ್ಗೆ ರಾಹುಲ್ ಗಾಂಧಿ ಮತ್ತು ರಣದೀಪ್ ಸಿಂಗ್ ಸುರ್ಜೇವಾಲಾ ಅವರೂ ಉತ್ತರ ನೀಡಬೇಕು' ಎಂದು ಆಗ್ರಹಿಸಿದರು.

ಬಿ.ವೈ ವಿಜಯೇಂದ್ರ ಮಾತನಾಡಿ, ಹೈದರಾಬಾದ್‌ನಲ್ಲಿ 18ಕ್ಕೂ ಹೆಚ್ಚು ಬ್ಯಾಂಕ್ ಖಾತೆಗಳನ್ನು ತೆರೆದು ಆ ಖಾತೆಗಳಿಗೆ ಹಣವನ್ನು ಅಕ್ರಮವಾಗಿ ವರ್ಗಾಯಿಸಿದ್ದಾರೆ. ಮುಖ್ಯಮಂತ್ರಿಯವರ ಸುಪರ್ದಿಯಲ್ಲಿರುವ ಹಣಕಾಸು ಇಲಾಖೆಯ ಅನುಮತಿ ಇಲ್ಲದೇ ಹಣದ ವರ್ಗಾವಣೆ ಮಾಡಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಆರ್.ನಾಗೇಂದ್ರ ಅವರ ರಾಜೀನಾಮೆಗೆ ಒತ್ತಾಯಿಸಿ ಬಿಜೆಪಿ ನಾಯಕರು ವಿಧಾನಸೌಧದಿಂದ ರಾಜಭವನಕ್ಕೆ ಕಾಲ್ನಡಿಗೆಯಲ್ಲಿ ತೆರಳಿದರು. ಶಾಸಕ ಅರವಿಂದ ಬೆಲ್ಲದ, ವಿರೋಧಪಕ್ಷದ ನಾಯಕ ಆರ್.ಅಶೋಕ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಶಾಸಕರಾದ ಭೈರತಿ ಬಸವರಾಜು, ವಿ.ಸುನಿಲ್‌ಕುಮಾರ್, ಯಶಪಾಲ್ ಸುವರ್ಣ, ಮಾಜಿ ಶಾಸಕ ಮಾನಪ್ಪ ವಜ್ಜಲ್, ವಿಧಾನಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ ಇದ್ದರು.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಚರಣೆ
ವಟ ಸಾವಿತ್ರಿ ಪೂಜೆಯ ಅಂಗವಾಗಿ ಜಾರ್ಖಂಡ್‌ನ ರಾಂಚಿಯಲ್ಲಿ ಮಹಿಳೆಯರು ಆಲದ ಮರಕ್ಕೆ ದಾರವನ್ನು ಸುತ್ತಿದರು

SHAHEEN
GROUP OF INSTITUTIONS

35 Years Of Excellence

SUCCESS IS NOT A MATTER OF FAITH ALONE. THAT IS WHY WE
CELEBRATE THE HARD WORK AND SUCCESS
OF OUR ASPIRANTS WITH PRIDE.

Congratulations NEET 2024 Toppers **(BIDAR)**

Marks **705**
Khan Safwan Md Asif
240411294494

Marks **705**
Mohd Ibrahim Altaf
240411289922

Marks	Name	Roll No.
701	Rumaisa Ali Khan	240410437643
700	Rohit	240410932051
700	Maniyar Md Bashar	240410400384
700	Rishikesh Kamtikar	240410566144
700	Khan Habibullah Mansoor	240411290257
695	Syed Sayeed Hasan	240410179861
692	Sabir Ali S Shikaripur	240410062509
692	Shubhangi	240410530025
691	Khalida Zeenat	240411011316
690	Mohammed Hanif T	240411101666
690	Mirza Awad Hassan Ali Baig	240410717895
690	Farhan	240411242978
688	Soundarya	240410540083
686	Rafiya Ameen	240410258168
685	Khan Ubaidullah Mansoor	240411303741
682	Faisal Saleh	240411118343
682	Choudhari Asiya Ajmal	240410541399
681	Shattari Samreen Fatema	240410288975
680	Shadman Alam	240411025946
680	Muhammed Arsalan Sharief	240411357601
680	Md Rehan	240410977524
680	Arpita Biradar	240410064985
680	Mriedul Hoque	240410786395
680	Mohammed Rehan Mallik	240411367399
679	Aseena Fatima Naaz	240410358965
676	Shabina Asgar Ali	240411002209
676	Battini Gayathri	240411439708
676	Mohammed Saif	240411726623
675	Pradeep	240410067381
675	Mohammed Nawaluddin Rayyan	240411207539
675	Md Homam Ashraf	240410499102
672	Hajera Ashraf	240410875570
671	Md Sahil Sk	240410925029
671	Amatur Rehman	240411846449
671	Syeda Nida Nausheen	240410123914
670	Mohammed Thalha	240411557775
670	Abdul Qayyum	240411682644
670	Anas Shaik	240410138563
670	Abdus Samad (Hafiz)	240410991006
670	Sumit	240410460987
670	Md Sadik Hussain (Hafiz)	240411004621
670	Vivekanand	240410125836
669	Shreya	240410680709
668	Jonathan David Karne	240410031980
667	Parvez Akhter	240411340045

Shaheen's NEET-2024 Result Analysis

705+ Marks	700+ Marks	680+ Marks	650+ Marks	600+ Marks	575+ Marks
03 Students	08 Students	38 Students	156 Students	431 Students	666 Students

ADMISSIONS OPEN
NEET Long Term Batch
hurry up

Excellent Performance
SHAHEENIANS
NEET - 2024 Result

Head Office: Shaheen Nagar, BIDAR-585403.
www.shaheengroup.org
Toll Free: 1800 121 6235

ಪ್ರಮುಖ ಖಾತೆಗಳಿಗೆ ಜೆಡಿಯು, ಟಿಡಿಪಿ ಪಟ್ಟು: ಆರಂಭ ಘಟ್ಟದಲ್ಲೇ ಬಿಜೆಪಿಗೆ ತಲೆನೋವು

‘ಅಗ್ನಿಪಥ ಮರುಪರಿಶೀಲಿಸಿ’

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಸಶಸ್ತ್ರ ಪಡೆಗಳಲ್ಲಿ ನೇಮಕಾತಿಗೆ ಅವಕಾಶ ಕಲ್ಪಿಸಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಜಾರಿಗೆ ತಂದಿದ್ದ ‘ಅಗ್ನಿಪಥ’ ಯೋಜನೆ ಮರು ಪರಿಶೀಲನೆಗೆ ಬಿಜೆಪಿಯ ಮಿತ್ರಪಕ್ಷಗಳಾದ ಜೆಡಿಯು ಮತ್ತು ಎಲ್‌ಜೆಪಿ (ರಾಮ್‌ವಿಲಾಸ್) ಒತ್ತಾಯಿಸಿವೆ. ನೂತನ ಸರ್ಕಾರದಲ್ಲಿ ಪ್ರಮುಖ ಖಾತೆಗಳಿಗೆ ಟಿಡಿಪಿ ಹಾಗೂ ಜೆಡಿಯು ಪಟ್ಟುಹಿಡಿದಿರುವುದು, ಬಿಜೆಪಿಗೆ ತಲೆನೋವಾಗಿ ಪರಿಣಮಿಸಿದೆ.

‘ಅಗ್ನಿಪಥ ಯೋಜನೆ ಬಗ್ಗೆ ಮತದಾರರಿಗೆ ಅಸಮಾಧಾನವಿದೆ. ನಮ್ಮ ಪಕ್ಷವು ಈ ಯೋಜನೆಯ ಮರುಪರಿಶೀಲನೆ ಮಾಡಲು ಮತ್ತು ಕೆಲವೊಂದು ವಿವಾದಾತ್ಮಕ ಮಾನದಂಡಗಳನ್ನು ಕೈಬಿಡಲು ಬಯಸುತ್ತದೆ’ ಎಂದು ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ ಅವರ ಆಪ್ತ, ಪಕ್ಷದ ಮುಖಂಡ ಕೆ.ಸಿ.ತ್ಯಾಗಿ ಗುರುವಾರ ಹೇಳಿದ್ದಾರೆ. ‘ಈ ಯೋಜನೆಯನ್ನು ನಾವು ವಿರೋಧಿಸುತ್ತಿಲ್ಲ. ಆದರೆ ಯೋಜನೆ ಬಗ್ಗೆ ಹಲವರಿಂದ ಅಪಸ್ವರ ಎದ್ದಿರುವ ಕಾರಣ ಮರುಪರಿಶೀಲನೆಗೆ ಕೋರುತ್ತೇವೆ’ ಎಂದು ಸ್ಪಷ್ಟಪಡಿಸಿದ್ದಾರೆ.

ಯೋಜನೆಯ ಮರುಪರಿಶೀಲನೆ ಅಗತ್ಯ ಎಂದು ಲೋಕ ಜನಶಕ್ತಿ ಪಾರ್ಟಿ (ರಾಮ್‌ವಿಲಾಸ್) ನಾಯಕ ಚಿರಾಗ್ ಪಾಸ್ವಾನ್ ಅವರೂ ಆಗ್ರಹಿಸಿದ್ದಾರೆ. ಆದರೆ, ಈ ವಿಚಾರದಲ್ಲಿ ಯಾವುದೇ ಆತುರ ಇಲ್ಲ. ಸರ್ಕಾರ ರಚನೆಯಾದ ಬಳಿಕ ಯೋಜನೆ ಮರುಪರಿಶೀಲನೆ ವಿಚಾರ ಕೈಗೆತ್ತಿಕೊಳ್ಳಬೇಕು ಎಂದಿದ್ದಾರೆ.

ಮುಖ್ಯಾಂಶಗಳು

- ಪ್ರಮಾಣವಚನ ಸಮಾರಂಭ ಭಾನುವಾರ ಸಾಧ್ಯತೆ
- ಸಂಪುಟದಲ್ಲಿ ‘ಗೌರವಾರ್ಹ ಪ್ರಾತಿನಿಧ್ಯ’ಕ್ಕೆ ಜೆಡಿಯು ಆಗ್ರಹ
- ಸರ್ಕಾರ ರಚನೆ: ಬಿಜೆಪಿ ನಾಯಕರ ಸಭೆ

ಸಶಸ್ತ್ರ ಪಡೆಗಳಲ್ಲಿ ಸೇವೆ ಸಲ್ಲಿಸಲು ಯುವಜನರಿಗೆ ಅವಕಾಶ ಕಲ್ಪಿಸುವ ‘ಅಗ್ನಿಪಥ’ ನೇಮಕಾತಿ ಯೋಜನೆಯನ್ನು ಕೇಂದ್ರ ಸರ್ಕಾರ 2022ರ ಜೂನ್‌ನಲ್ಲಿ ಜಾರಿಗೆ ತಂದಿತ್ತು. ಈ ಯೋಜನೆಯಡಿ ಆಯ್ಕೆಯಾದ ಯುವಕರನ್ನು ‘ಅಗ್ನಿವೀರ’ ಎಂದು ಕರೆಯಲಾಗುತ್ತದೆ. ಇದುವರೆಗೆ ದೇಶದಾದ್ಯಂತ ಸುಮಾರು 50 ಸಾವಿರದಷ್ಟು ಯುವಕರು ಮತ್ತು ಯುವತಿಯರು ಈ ಯೋಜನೆಯಡಿ ಸೇನೆಗೆ ಸೇರ್ಪಡೆಯಾಗಿದ್ದಾರೆ.

ಯುಸಿಸಿ ವಿರೋಧಿಸಿಲ್ಲ: ‘ನಮ್ಮ ಪಕ್ಷ ಏಕರೂಪದ ನಾಗರಿಕ ಸಂಹಿತೆಯನ್ನು (ಯುಸಿಸಿ) ವಿರೋಧಿಸಿಲ್ಲ. ಆದರೆ ಈ ವಿಚಾರದಲ್ಲಿ ಸಂಬಂಧಪಟ್ಟ ಎಲ್ಲ ಭಾಗೀದಾರರ ಜತೆ ಸಮಾಲೋಚನೆ ನಡೆಸಬೇಕು’ ಎಂದು ತ್ಯಾಗಿ ಹೇಳಿದ್ದಾರೆ.

ದೇಶದಾದ್ಯಂತ ಜಾತಿಗಣತಿಗೆ ಜೆಡಿಯು ಆಗ್ರಹಿಸಲಿದೆಯೇ ಎಂಬ ಪ್ರಶ್ನೆಗೆ, ‘ಯಾವುದೇ ರಾಜಕೀಯ ಪಕ್ಷವು ಜಾತಿ ಗಣತಿಯನ್ನು ವಿರೋಧಿಸಿಲ್ಲ. ಬಿಹಾರ ಈ ವಿಚಾರದಲ್ಲಿ ಇತರರಿಗೆ ಮಾದರಿಯಾಗಿದೆ. ಜಾತಿಗಣತಿ ಇಂದಿನ ಅಗತ್ಯವಾಗಿದ್ದು, ಅದಕ್ಕಾಗಿ ಒತ್ತಾಯಿಸುತ್ತೇವೆ’ ಎಂದಿದ್ದಾರೆ.

ಎನ್‌ಡಿಎ ಸಂಸದರ ಸಭೆ ಇಂದು

ನವದೆಹಲಿ: ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟದ (ಎನ್‌ಡಿಎ) ಸಂಸದರು ನರೇಂದ್ರ ಮೋದಿ ಅವರನ್ನು ತಮ್ಮ ನಾಯಕರನ್ನಾಗಿ ಆಯ್ಕೆ ಮಾಡಲು ಶುಕ್ರವಾರ ಸಭೆ ಸೇರಲಿದ್ದು, ಮೂರನೇ ಅವಧಿಗೆ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಲು ಅನುವು ಮಾಡಿಕೊಡಲಿದ್ದಾರೆ. ಜೂನ್ 9 ರಂದು (ಭಾನುವಾರ) ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆಯಿದೆ.

ಎನ್‌ಡಿಎ ಸಂಸದರ ನಾಯಕರಾಗಿ ಮೋದಿ ಅವರು ಆಯ್ಕೆಯಾದ ನಂತರ, ಮೈತ್ರಿಕೂಟದ ಇತರ ಮುಖಂಡರಾದ ಟಿಡಿಪಿ ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಮತ್ತು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಜತೆಗೂಡಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿಯಾಗಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಭೆ: ಕೇಂದ್ರ ಸಚಿವರಾದ ಅಮಿತ್ ಶಾ ಮತ್ತು ರಾಜನಾಥ್ ಸಿಂಗ್ ಸೇರಿದಂತೆ ಬಿಜೆಪಿಯ ಹಿರಿಯ ನಾಯಕರು ಸರ್ಕಾರ ರಚನೆಗೆ ಸಂಬಂಧಿಸಿದಂತೆ ಗುರುವಾರ ದಿನವಿಡೀ ಸಮಾಲೋಚನೆ ನಡೆಸಿದರು. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ನಿವಾಸದಲ್ಲಿ ಸಭೆ ಸೇರಿ, ಮೈತ್ರಿಪಕ್ಷಗಳ ಜತೆ ಖಾತೆ ಹಂಚಿಕೆ ಮತ್ತು ತಮ್ಮ ಪಕ್ಷದಲ್ಲಿ ಯಾರಿಗೆಲ್ಲಾ ಸಚಿವ ಸ್ಥಾನ ನೀಡಬೇಕು ಎಂಬ ಕುರಿತು ಚರ್ಚಿಸಿದ್ದಾರೆ.

ನಾಯ್ಡು ಸೂಚನೆ: ಅಮರಾವತಿ: ನವದೆಹಲಿಯಲ್ಲಿ ಶುಕ್ರವಾರ ನಡೆಯಲಿರುವ ಸಭೆಯಲ್ಲಿ ಪಾಲ್ಗೊಳ್ಳುವಂತೆ ಟಿಡಿಪಿ ಮುಖ್ಯಸ್ಥ ಎನ್.ಚಂದ್ರಬಾಬು ನಾಯ್ಡು ಅವರು ಪಕ್ಷದ ಸಂಸದರಿಗೆ ಸೂಚಿಸಿದ್ದಾರೆ.

ನೆರೆ ರಾಷ್ಟ್ರಗಳ ಗಣ್ಯರಿಗೆ ಆಹ್ವಾನ

ನವದೆಹಲಿ (ಪಿಟಿಐ): ನರೇಂದ್ರ ಮೋದಿ ಅವರು ಪ್ರಧಾನಿಯಾಗಿ ಮೂರನೇ ಬಾರಿ ಪ್ರಮಾಣ ವಚನ ಸ್ವೀಕರಿಸುವ ಸಮಾರಂಭಕ್ಕೆ ನೆರೆಯ ಶ್ರೀಲಂಕಾ, ಬಾಂಗ್ಲಾದೇಶ, ನೇಪಾಳ ದೇಶಗಳ ಪ್ರಮುಖ ನಾಯಕರನ್ನು ಭಾರತ ಆಹ್ವಾನಿಸಿದೆ ಎಂದು ಮೂಲಗಳು ತಿಳಿಸಿವೆ.

ಈಗಾಗಲೇ ಶ್ರೀಲಂಕಾ ಅಧ್ಯಕ್ಷರಾದ ರಾನಿಲ್ ವಿಕ್ರಮಸಿಂಘೆ, ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ, ನೇಪಾಳದ ಪ್ರಧಾನಿ ಪುಷ್ಪ ಕಮಲ್ ದಹಲ್ ‘ಪ್ರಚಂಡ’ ಅವರು ಮೋದಿ ಅವರಿಗೆ ದೂರವಾಣಿ ಮೂಲಕ ಅಭಿನಂದನೆ ಸಲ್ಲಿಸಿದ್ದಾರೆ. ಈ ವೇಳೆ ಮೋದಿ ಅವರು ಈ ನಾಯಕರಿಗೆ ತಮ್ಮ ಪ್ರಮಾಣ ವಚನ ಸಮಾರಂಭದಲ್ಲಿ ಭಾಗಿಯಾಗುವಂತೆ ಆಹ್ವಾನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

3 ಖಾತೆಗೆ ಜೆಡಿಯು ಬೇಡಿಕೆ ಸಾಧ್ಯತೆ

ಪಟ್ನಾ (ಪಿಟಿಐ): ನಿತೀಶ್ ಕುಮಾರ್ ನೇತೃತ್ವದ ಜೆಡಿಯು, ನೂತನ ಸರ್ಕಾರದಲ್ಲಿ ಮೂರು ಸಂಪುಟ ದರ್ಜೆ ಖಾತೆಗಳಿಗೆ ಪಟ್ಟು ಹಿಡಿಯುವ ಸಾಧ್ಯತೆಯಿದೆ ಎಂದು ಪಕ್ಷದ ನಾಯಕರೊಬ್ಬರು ತಿಳಿಸಿದರು.

12 ಸಂಸದರನ್ನು ಹೊಂದಿರುವ ಜೆಡಿಯು, ಟಿಡಿಪಿ (16 ಸಂಸದರು) ಬಳಿಕ ಬಿಜೆಪಿಯ ಎರಡನೇ ಅತಿದೊಡ್ಡ ಮಿತ್ರಪಕ್ಷ ಎನಿಸಿಕೊಂಡಿದೆ. ಸ್ವಂತ ಬಲದಿಂದ ‘ಮ್ಯಾಜಿಕ್ ಸಂಖ್ಯೆ’ ತಲುಪಲು ಸಾಧ್ಯವಾಗದ ಕಾರಣ ಸರ್ಕಾರ ರಚಿಸಲು ಬಿಜೆಪಿಗೆ ಜೆಡಿಯು ಮತ್ತು ಟಿಡಿಪಿ ಪಕ್ಷಗಳ ಬೆಂಬಲ ನಿರ್ಣಾಯಕವಾಗಿದೆ.

ರೈಲ್ವೆ, ಗ್ರಾಮೀಣಾಭಿವೃದ್ಧಿ, ಕೃಷಿ, ಜಲಸಂಪನ್ಮೂಲ ಮತ್ತು ಬೃಹತ್ ಕೈಗಾರಿಕೆಯಂತಹ ಖಾತೆಗಳನ್ನು ತನ್ನದಾಗಿಸಿ ಕೊಳ್ಳಲು ಜೆಡಿಯು ಬಯಸಿದೆ ಎಂದು ಮೂಲಗಳು ಹೇಳಿವೆ. ರಾಜ್ಯಸಭಾ ಸದಸ್ಯ ಸಂಜಯ್ ಝಾ, ರಾಜೀವ್ ರಂಜನ್ ಸಿಂಗ್, ಕೌಶಲೇಂದ್ರ ಕುಮಾರ್, ರಾಮಪ್ರೀತ್ ಮಂಡಲ್ ಮತ್ತು ಲವ್ಲಿ ಆನಂದ್ ಅವರು ಸಚಿವ ಸ್ಥಾನದ ಆಕಾಂಕ್ಷಿಗಳಾಗಿದ್ದಾರೆ.

ನೇಗಿಲ ಯೋಗಿ ಧಾರವಾಡ ತಾಲ್ಲೂಕಿನ ಲಕಮಾಪುರ ಸಮೀಪ ಗುರುವಾರ ಜಮೀನಿನಲ್ಲಿ ಉಳುಮೆಯಲ್ಲಿ ತೊಡಗಿದ್ದ ರೈತ ಕಂಡಿದ್ದು ಹೀಗೆ – ಪ್ರಜಾವಾಣಿ ಚಿತ್ರ ಬಿ.ಎಂ.ಕೇದಾರನಾಥ

ಕಂಗನಾ ಮುಖಕ್ಕೆ ಗುದ್ದಿದ ಯೋಧೆ

ಪ್ರಜಾವಾಣಿ ವಾರ್ತೆ/ಪಿಟಿಐ

ಚಂಡೀಗಢ: ‘ಚಂಡೀಗಢದ ವಿಮಾನ ನಿಲ್ದಾಣದಲ್ಲಿ ಗುರುವಾರ ಭದ್ರತಾ ಪರಿಶೀಲನೆ ವೇಳೆ, ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯ (ಸಿಐಎಸ್‌ಎಫ್) ಮಹಿಳಾ ಸಿಬ್ಬಂದಿ ಯೊಬ್ಬರು ನನ್ನ ಮುಖಕ್ಕೆ ಗುದ್ದಿ, ನಿಂದಿಸಿದರು’ ಎಂದು ನಟಿ ಹಾಗೂ ಬಿಜೆಪಿ ಸಂಸದೆ ಕಂಗನಾ ರನೌತ್ ಹೇಳಿದ್ದಾರೆ.

ಈ ಘಟನೆಗೆ ಸಂಬಂಧಿಸಿ, ಕಂಗನಾ ಅವರು ನೀಡಿರುವ ದೂರಿನನ್ವಯ, ಸಿಐಎಸ್‌ಎಫ್ ಮಹಿಳಾ ಕಾನ್‌ಸ್ಟೆಬಲ್ ವಿರುದ್ಧ ಎಫ್‌ಐಆರ್ ದಾಖಲಿಸಿ, ಅವರನ್ನು ಅಮಾನತುಗೊಳಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸಿಐಎಸ್‌ಎಫ್ ಕಾನ್‌ಸ್ಟೆಬಲ್ ಕುಲ್ವಿಂದರ್ ಕೌರ್, ಕಂಗನಾ ಮುಖಕ್ಕೆ ಗುದ್ದಿದ್ದಾರೆ ಎಂದು ಹೇಳಲಾಗಿದೆ. ಆದರೆ, ಅವರ ಹೆಸರನ್ನು ಅಧಿಕೃತವಾಗಿ ಬಹಿರಂಗಪಡಿಸಿಲ್ಲ.

ಘಟನೆ ಕುರಿತು ಸಿಐಎಸ್‌ಎಫ್ ತನಿಖೆಗೆ ಆದೇಶಿಸಿದೆ. ದೇಶದ ವಿಮಾನ

ಕಂಗನಾ

ಕುಲ್ವಿಂದರ್

ನಿಲ್ದಾಣಗಳಲ್ಲಿ ಭದ್ರತೆ ಒದಗಿಸುವ ಹೊಣೆಯನ್ನು ಸಿಐಎಸ್‌ಎಫ್‌ಗೆ ವಹಿಸಲಾಗಿದೆ.

ನಟಿ ಕಂಗನಾ ಅವರು ಹಿಮಾಚಲ ಪ್ರದೇಶದ ಮಂಡಿ ಲೋಕಸಭಾ ಕ್ಷೇತ್ರದಿಂದ ಗೆದ್ದಿದ್ದಾರೆ.

ಈ ಘಟನೆ ಬೆನ್ನಲ್ಲೇ, ವಿಡಿಯೊ ಮೂಲಕ ಹೇಳಿಕೆಯೊಂದನ್ನು ಕಂಗನಾ ಬಿಡುಗಡೆ ಮಾಡಿದ್ದಾರೆ. ‘ಪಂಜಾಬ್‌ನಲ್ಲಿ ಆಘಾತಕಾರಿ ಎಂಬಂತೆ ಭಯೋತ್ಪಾದನೆ ಮತ್ತು ಹಿಂಸಾಚಾರ ಹೆಚ್ಚಾಗಿದೆ’ ಎಂದು ಅವರು ‘ಎಕ್ಸ್‌’ನಲ್ಲಿ ಹಂಚಿಕೊಂಡಿರುವ ವಿಡಿಯೊದಲ್ಲಿ ಹೇಳಿರುವ ಅವರು, ‘ನಾನು ಸುರಕ್ಷಿತವಾಗಿರುವೆ’ ಎಂದೂ ತಿಳಿಸಿದ್ದಾರೆ.

ಗಂಭೀರ ವಿಷಯ: ಮಹಿಳಾ ಆಯೋಗ

ನಟಿ ಕಂಗನಾ ರನೌತ್ ಅವರ ಮುಖಕ್ಕೆ ಹೊಡೆದು, ಅವರನ್ನು ನಿಂದಿಸಲಾಗಿದೆ ಎಂಬ ವಿಷಯ ಗಂಭೀರವಾದುದು ಎಂದು ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ರೇಖಾ ಶರ್ಮಾ ಹೇಳಿದ್ದಾರೆ. ‘ಈ ವಿಷಯವನ್ನು ಸಿಐಎಸ್‌ಎಫ್ ಗಮನಕ್ಕೆ ತಂದಿದ್ದು, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಲಾಗಿದೆ.

ವಿಮಾನನಿಲ್ದಾಣಗಳಲ್ಲಿ ಭದ್ರತೆ ಒದಗಿಸಲು ನಿಯೋಜನೆ ಗೊಂಡವರಿಂದಲೇ ಭದ್ರತೆಯ ಉಲ್ಲಂಘನೆ ಯಾಗುತ್ತಿದೆ’ ಎಂದು ಅವರು ‘ಎಕ್ಸ್‌’ನಲ್ಲಿ ಮಾಡಿರುವ ಪೋಸ್ಟ್‌ನಲ್ಲಿ ಹೇಳಿದ್ದಾರೆ.

ರಾಜ್ಯಕ್ಕೆ ಮರಳಿದ 13 ಚಾರಣಿಗರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರಾಖಂಡದ ಸಹಸ್ರ ತಾಲ್‌ಗೆ ಚಾರಣಕ್ಕೆ ತೆರಳಿ ಹವಾಮಾನ ವೈಪರೀತ್ಯದಿಂದ ಅಪಾಯಕ್ಕೆ ಸಿಲುಕಿದ್ದವರ ಪೈಕಿ ರಕ್ಷಣೆಗೆ ಒಳಗಾದ 13 ಮಂದಿಯನ್ನು ಒಳಗೊಂಡ ತಂಡವು ಗುರುವಾರ ರಾತ್ರಿ 9.30ರ ಸುಮಾರಿಗೆ ವಿಮಾನದ ಮೂಲಕ ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಬಂದಿಳಿಯಿತು.

ರಕ್ಷಣಾ ಕಾರ್ಯಾಚರಣೆ ಉಸ್ತುವಾರಿಗೆ ತೆರಳಿದ್ದ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರೂ ಈ ಚಾರಣಿಗರ ಜತೆಗೆ ಬಂದರು. ಅವರು ರಕ್ಷಣಾ ಕಾರ್ಯಾಚರಣೆ ಉಸ್ತುವಾರಿಗೆಂದು ಡೆಹ್ರಾಡೂನ್‌ಗೆ ಬುಧವಾರ ತೆರಳಿದ್ದರು. ವಿಮಾನ ನಿಲ್ದಾಣದ ಬಳಿ ಕಾದಿದ್ದ ಅವರ ಕುಟುಂಬಸ್ಥರು ಸುರಕ್ಷಿತವಾಗಿ ಬಂದ ಚಾರಣಿಗರನ್ನು ಸ್ವಾಗತಿಸಿದರು.

ಚಾರಣದ ವೇಳೆ ಹವಾಮಾನ ವೈಪರೀತ್ಯದಿಂದ ಮೃತಪಟ್ಟವರ ಸಂಖ್ಯೆ 9ಕ್ಕೆ ಏರಿಕೆಯಾಗಿದೆ. ಬುಧವಾರ ಐದು ಮೃತದೇಹ ಸಿಕ್ಕಿದ್ದವು. ನಾಪತ್ತೆಯಾದ ನಾಲ್ವರ ಪತ್ತೆಗೆ ಪ್ರತಿಕೂಲ ಪರಿಸ್ಥಿತಿಯಿಂದ ಬುಧವಾರ ಸಂಜೆ ಕಾರ್ಯಾಚರಣೆ ಮುಂದುವರಿಸಲು ಸಾಧ್ಯವಾಗಿರಲಿಲ್ಲ.

ಗುರುವಾರ ಮತ್ತೆ ಕಾರ್ಯಾಚರಣೆ ಆರಂಭಿಸಿ ನಾಲ್ವರ ಮೃತದೇಹಗ ಳನ್ನು ಪತ್ತೆ ಹಚ್ಚಲಾಗಿದೆ. ಕೆ.ಪಿ.ಪದ್ಮನಾಭ, ಕೆ.ವೆಂಕಟೇಶ್ ಪ್ರಸಾದ್,

ರಕ್ಷಣೆಗೆ ಒಳಗಾದ ಚಾರಣಿಗರ ಜೊತೆಗೆ ಸಚಿವ ಕಂದಾಯ ಸಚಿವ ಕೃಷ್ಣ ಬೈರೇಗೌಡ.

ಅನಿತಾ ರಂಗಪ್ಪ, ಪದ್ಮಿನಿ ಹೆಗ್ಡೆ ಮೃತಪಟ್ಟವರು ಎಂದು ಗುರುತಿಸಲಾಗಿದೆ. ನಾಲ್ಕು ಮೃತದೇಹಗಳನ್ನು ದುರಂತ ಸ್ಥಳದ ಬಳಿಯಿಂದ ಸೇನಾ ಹೆಲಿಕಾಪ್ಟರ್‌ನಲ್ಲಿ ಉತ್ತರಕಾಶಿಗೆ ಸ್ಥಳಾಂತರಿಸಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

ಚಾರಣಿಗರ ಪೈಕಿ ರಕ್ಷಣೆ ಮಾಡಲಾದ ಸೌಮ್ಯಾ ಕೆನಾಲೆ, ಸ್ಮೃತಿ ಡೋಲಾಸ್, ಶೀನಾ ಲಕ್ಷ್ಮಿ, ಎಸ್.ಶಿವಜ್ಯೋತಿ, ಅನಿಲ್ ಜಮತಿಗೆ ಅರುಣಾಚಲ ಭಟ್, ಭರತ್ ಬೊಮ್ಮನಗೌಡರ್, ಮಧುಕಿರಣ್ ರೆಡ್ಡಿ, ಬಿ.ಎಸ್.ಜೈಪ್ರಕಾಶ್ ಅವರನ್ನು ಬುಧವಾರ ಸಂಜೆಯೇ ಡೆಹ್ರಾಡೂನ್‌ಗೆ ಸ್ಥಳಾಂತರಿಸಲಾಗಿತ್ತು. ಎಸ್.ಸುಧಾಕರ್, ಎಂ.ಕೆ.ವಿನಯ್, ವಿವೇಕ್ ಶ್ರೀಧರ್, ಎಂ.ನವೀನ್, ರಿತಿಕಾ ಜಿಂದಾಲ್ ಅವರನ್ನು ಗುರುವಾರ ಬೆಳಿಗ್ಗೆ ಸುರಕ್ಷಿತ ಸ್ಥಳಕ್ಕೆ ಕರೆತಂದ ರಕ್ಷಣಾ ತಂಡಗಳು, ಡೆಹ್ರಾಡೂನ್‌ಗೆ ಹೆಲಿಕಾಪ್ಟರ್‌ನಲ್ಲಿ ಸ್ಥಳಾಂತರಿಸಿದವು. ನಂತರ, ವಿಮಾನದ ಮೂಲಕ ಬೆಂಗಳೂರಿಗೆ ಕರೆತರಲಾಯಿತು.

9 ಮೃತದೇಹಗಳ ಮರಣೋತ್ತರ ಪರೀಕ್ಷೆ ನಡೆಸಲಾಗಿದ್ದು, ಮೃತದೇಹ ರವಾನಿಸುವ ಸಂಬಂಧ ಉತ್ತರಾಖಂಡ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಜತೆಗೆ ಸಚಿವ ಕೃಷ್ಣ ಬೈರೇಗೌಡ ಚರ್ಚಿಸಿದ್ದಾರೆ. ಉತ್ತರಕಾಶಿಯಿಂದ ಮೃತದೇಹಗಳನ್ನು ನೇರವಾಗಿ ಬೆಂಗಳೂರಿಗೆ ರವಾನೆ ಮಾಡಲು ಸಾಧ್ಯವಾಗಿಲ್ಲ. ರಸ್ತೆ ಮಾರ್ಗದ ಮೂಲಕ ದೇಹಗಳನ್ನು ದೆಹಲಿಗೆ ತಂದು ವಿಮಾನದ ಮೂಲಕ ಬೆಂಗಳೂರಿಗೆ ತರಲಾಗುವುದು. ಶುಕ್ರವಾರ ಮಧ್ಯಾಹ್ನ ಎಲ್ಲ ಬೆಂಗಳೂರಿಗೆ ತಲುಪಲಿವೆ ಎಂದು ಸಚಿವರು ತಿಳಿಸಿದರು.

ಕೋಟ ಶ್ರೀನಿವಾಸ ಪೂಜಾರಿ ವಿರುದ್ಧ ಗೂಳಿಹಟ್ಟಿ ಆರೋಪ: ಬಿಜೆಪಿ ಅವಧಿಯ ಉಲ್ಲೇಖ

‘ಬೋವಿ ನಿಗಮದಲ್ಲಿ ₹100 ಕೋಟಿ ಅಕ್ರಮ’

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ‘ಬಿಜೆಪಿ ಅಧಿಕಾರದ ಅವಧಿಯಲ್ಲಿ ರಾಜ್ಯ ಬೋವಿ ಅಭಿವೃದ್ಧಿ ನಿಗಮದಲ್ಲಿ ₹ 100 ಕೋಟಿಗೂ ಹೆಚ್ಚು ಅವ್ಯವಹಾರ ನಡೆದಿದೆ. ಸಮಾಜ ಕಲ್ಯಾಣ ಖಾತೆ ಸಚಿವರಾಗಿದ್ದ ಕೋಟ ಶ್ರೀನಿವಾಸ ಪೂಜಾರಿ ಅವರಿಗೂ ಪಾಲು ಸಂದಾಯವಾಗಿದೆ’ ಎಂದು ಹೊಸದುರ್ಗ ಕ್ಷೇತ್ರದ ಮಾಜಿ ಶಾಸಕ ಗೂಳಿಹಟ್ಟಿ ಡಿ. ಶೇಖರ್ ಗಂಭೀರ ಆರೋಪ ಮಾಡಿದ್ದಾರೆ.

ಈ ಕುರಿತ ಆಡಿಯೊ ಹೇಳಿಕೆಯನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡಿರುವ ಗೂಳಿಹಟ್ಟಿ, ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದ್ದಾರೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ಅವ್ಯವಹಾರ ಕುರಿತಂತೆ ಪರಿಶಿಷ್ಟ ಪಂಗಡ ಕಲ್ಯಾಣ ಸಚಿವ ಬಿ.ನಾಗೇಂದ್ರ ರಾಜೀನಾಮೆಗೆ ಬಿಜೆಪಿ ಪಟ್ಟುಹಿಡಿದಿರುವ ಸಂದರ್ಭದಲ್ಲಿ ಅವರು ಈ ಆರೋಪ ಮಾಡಿದ್ದಾರೆ.

‘ಕೋಟ ಶ್ರೀನಿವಾಸ ಪೂಜಾರಿ ಅವರನ್ನು ಅತ್ಯಂತ ಪ್ರಾಮಾಣಿಕ ರಾಜಕಾರಣಿ ಎಂದು ಬಿಂಬಿಸಲಾಗಿದೆ. ಚುನಾವಣೆ ಸಂದರ್ಭದಲ್ಲಿ ಅವರಿಗೆ

ಗೂಳಿಹಟ್ಟಿ ಡಿ.ಶೇಖರ್

₹50 ಕೋಟಿಯಿಂದ ₹60 ಕೋಟಿ ಹಣ ಎಲ್ಲಿಂದ ಬಂತು ಎಂಬುದಕ್ಕೆ ಉತ್ತರ ಸಿಗಬೇಕಿದೆ. ಫಲಾನುಭವಿಗಳಿಗೆ ಒಂದು ರೂಪಾಯಿ ಕೂಡಾ ತಲುಪಿಲ್ಲ. ಈ ಪ್ರಕರಣದ ತನಿಖೆಯನ್ನು ಸಿಬಿಐ ಅಥವಾ ಸಿಐಡಿಗೆ ನೀಡುವುದರಿಂದ ಪ್ರಯೋಜನವಿಲ್ಲ’ ಎಂದು ಹೇಳಿದ್ದಾರೆ.

‘ಕೋಟ ಶ್ರೀನಿವಾಸ ಪೂಜಾರಿ ಅವರ ಹೆಸರು, ಪತ್ರವನ್ನು ದುರ್ಬಳಕೆ ಮಾಡಿಕೊಂಡು ಭಾರಿ ಅವ್ಯವಹಾರ ನಡೆಸಲಾಗಿದೆ. ಇದರಲ್ಲಿ ಶ್ರೀನಿವಾಸ್ ಪೂಜಾರಿ ಅವರಿಗೆ ಸಂದಾಯವಾಗಿದ್ದು ಅಲ್ಪವೇ ಇರಬಹುದು. ಬೋವಿ ಸಮಾಜವನ್ನು ಪ್ರತಿನಿಧಿಸುವ ಪರಿಷತ್ ಸದಸ್ಯರೊಬ್ಬರ ಕುಟುಂಬದ ಹಸ್ತಕ್ಷೇಪ ಇದೆ. ನಿಷ್ಪಕ್ಷಪಾತ ತನಿಖೆಯಿಂದ ಸತ್ಯಾಂಶ ಬೆಳಕಿಗೆ ಬರಲಿದೆ’ ಎಂದು ತಿಳಿಸಿದ್ದಾರೆ.

‘ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ನಾನು ಬೋವಿ ಅಭಿವೃದ್ಧಿ ನಿಗಮ ಅಧ್ಯಕ್ಷನಾಗಿದ್ದೆ. ಕೋಟ್ಯಂತರ ರೂಪಾಯಿ ಅವ್ಯವಹಾರ ನಡೆದಿರುವುದು ಗಮನಕ್ಕೆ ಬಂದ ತಕ್ಷಣ ತನಿಖೆಗೆ ಶಿಫಾರಸು ಮಾಡಿದೆ. ತನಿಖೆಯನ್ನು ಸಿಐಡಿಗೆ ವಹಿಸಲಾಗಿತ್ತು. ಸರ್ಕಾರ ಬದಲಾಗಿ ಎಚ್.ಸಿ.ಮಹದೇವಪ್ಪ ಸಮಾಜ ಕಲ್ಯಾಣ ಸಚಿವರಾದ ಬಳಿಕ ತನಿಖೆ ಸ್ಥಗಿತಗೊಂಡಿದೆ’ ಎಂದು ಆರೋಪಿಸಿದ್ದಾರೆ.

‘ಮಾಜಿ ಸಂಸದ, ಹಾಸನದ ಪ್ರಜ್ವಲ್ ರೇವಣ್ಣ ಅವರ ಲೈಂಗಿಕ ಹಗರಣದ ಬಗ್ಗೆ ತನಿಖೆ ನಡೆಯುತ್ತಿದೆ. ಇಂತಹದೇ ಆರೋಪ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ವಿರುದ್ಧವೂ ಕೇಳಿಬಂದಿದೆ. ದೂರು ನೀಡಿದ ಮಹಿಳೆಯ ಸಾವಿನ ಬಗ್ಗೆ ಅನುಮಾನಗಳಿವೆ. ಈ ಬಗ್ಗೆ ಏಕೆ ತನಿಖೆ ನಡೆಯುತ್ತಿಲ್ಲ’ ಎಂದೂ ಅವರು ಪ್ರಶ್ನಿಸಿದ್ದಾರೆ.

> **ಗೂಳಿಹಟ್ಟಿ ಶೇಖರ್ ತಮ್ಮ ಆರೋಪಗಳಿಗೆ ಪೂರಕವಾಗಿ ದೂರು ನೀಡಿದರೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಿದ್ದಾರೆ**
> **ಜಿ.ಪರಮೇಶ್ವರ,** ಗೃಹ ಸಚಿವ

> **ಬಿಜೆಪಿಯವರ ಮೇಲೂ ಅವ್ಯವಹಾರ ಆರೋಪಗಳಿವೆ. ಗೂಳಿಹಟ್ಟಿ ಶೇಖರ್ ಅವರು ಕೋಟ ಶ್ರೀನಿವಾಸ ಪೂಜಾರಿ, ಗೋವಿಂದ ಕಾರಜೋಳ ಮೇಲೆ ಆರೋಪಿಸಿದ್ದಾರೆ**
> **ಬಿ.ನಾಗೇಂದ್ರ,** ರಾಜೀನಾಮೆ ನೀಡಿರುವ ಸಚಿವ

> **ಬಿಜೆಪಿ ಅಧಿಕಾರದ ಅವಧಿಯಲ್ಲಿ ವಿವಿಧ ನಿಗಮಗಳಲ್ಲಿನ ಹಣ ಅಕ್ರಮವಾಗಿ ವರ್ಗಾವಣೆಯಾಗಿರುವ ಬಗ್ಗೆ ದಾಖಲೆಗಳು ಸಿಕ್ಕಿವೆ**
> **ಡಿ.ಕೆ. ಶಿವಕುಮಾರ್** ಉಪ ಮುಖ್ಯಮಂತ್ರಿ

ಮಾನನಷ್ಟ ಮೊಕದ್ದಮೆ: ಕೋಟ ಹೇಳಿಕೆ

ಉಡುಪಿ: ‘ಗೂಳಿಹಟ್ಟಿ ಶೇಖರ್ ಯಾರನ್ನೋ ತೃಪ್ತಿಪಡಿಸಲು ನನ್ನ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿದ್ದಾರೆ. ಅವರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುತ್ತೇನೆ’ ನೂತನ ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

‘ನಾನು ಸಮಾಜ ಕಲ್ಯಾಣ ಖಾತೆಯ ಸಚಿವನಾಗುವ ಮುನ್ನವೇ ಭ್ರಷ್ಟಾಚಾರ ನಡೆದಿತ್ತು. ಸಚಿವನಾದ ಕೂಡಲೇ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಸಿಒಡಿ ತನಿಖೆಗೆ ವಹಿಸಿದ್ದೆ. ವಿರೋಧಗಳನ್ನು ಲೆಕ್ಕಿಸದೆ ಅನುದಾನ ಸೋರಿಕೆಯನ್ನು ತಡೆಗಟ್ಟಿದೆ. ಇದಕ್ಕೆ ಪ್ರತಿಯಾಗಿ ಸುಳ್ಳು ಆರೋಪ ಮಾಡಲಾಗುತ್ತಿದೆ’ ಎಂದರು.

ಗೂಳಿಹಟ್ಟಿ ಗೊಂದಲ: ‘₹60 ಕೋಟಿ ಸಂಪತ್ತು ಎಲ್ಲಿಂದ ಬಂತು ಎಂದು ಗೂಳಿಹಟ್ಟಿ ಶೇಖರ್ ಪ್ರಶ್ನಿಸಿದ್ದಾರೆ. ಚುನಾವಣೆ ವೇಳೆ ಖಾಸಗಿ ಟಿವಿ ಮಾಧ್ಯಮವೊಂದು ನನ್ನ ಆಸ್ತಿಯ ಮೌಲ್ಯವನ್ನು ₹ 3.6 ಕೋಟಿ ಬದಲಾಗಿ ಕಣ್ತಪ್ಪಿನಿಂದ ₹ 63 ಕೋಟಿ ಎಂದು ಪ್ರಸಾರ ಮಾಡಿತ್ತು. ಬಹುಶಃ ಸುದ್ದಿಯನ್ನು ನೋಡಿ ಗೂಳಿಹಟ್ಟಿ ಶೇಖರ್ ಗೊಂದಲ ಮಾಡಿಕೊಂಡಿರಬಹುದು’ ಎಂದು ಕೋಟ ವ್ಯಂಗ್ಯವಾಡಿದರು.

ಶೇ 15 ಶುಲ್ಕ ಹೆಚ್ಚಳಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿ ವಿವಿಧ ವೃತ್ತಿಪರ ಕೋರ್ಸ್‌ಗಳ ಶುಲ್ಕವನ್ನು ಶೇ 15ರಷ್ಟು ಹೆಚ್ಚಳ ಮಾಡುವಂತೆ ಖಾಸಗಿ ವೃತ್ತಿಪರ ಕಾಲೇಜುಗಳ ಆಡಳಿತ ಮಂಡಳಿ ಸರ್ಕಾರವನ್ನು ಒತ್ತಾಯಿಸಿದೆ.

ಈಗಾಗಲೇ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸಲಾಗಿದ್ದ ಬಹುತೇಕ ಪ್ರವೇಶ ಪರೀಕ್ಷೆಗಳ ಫಲಿತಾಂಶ ಪ್ರಕಟವಾಗಿವೆ. ಆದರೆ, ರಾಜ್ಯದಲ್ಲಿ ಶುಲ್ಕ ನಿಗದಿ ಕುರಿತು ಸರ್ಕಾರ ಯಾವುದೇ ಸ್ಪಷ್ಟ ನಿರ್ಧಾರ ಕೈಗೊಂಡಿಲ್ಲ. ಕರ್ನಾಟಕ ಅನುದಾನರಹಿತ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳ ಸಂಘ ಹಿಂದೆ ಸಲ್ಲಿಸಿದ್ದ ಬೇಡಿಕೆಗೂ ಸ್ಪಂದನೆ ದೊರೆತಿಲ್ಲ. ಬಿಜೆಪಿ ಅವಧಿಯಲ್ಲಿ ಹೊರಡಿಸಿದ್ದ ಶೇ 10ರಷ್ಟು ಶುಲ್ಕ ಹೆಚ್ಚಳದ ಆದೇಶವನ್ನೂ ಕಳೆದ ವರ್ಷ ಅಧಿಕಾರಕ್ಕೆ ಬಂದ ಕಾಂಗ್ರೆಸ್ ತಡೆ ಹಿಡಿದು, ಶೇ 7ರಷ್ಟು ಹೆಚ್ಚಳಕ್ಕೆ ಅನುಮತಿ ನೀಡಿತ್ತು.

2022-23ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ ಹಾಗೂ ಅನುದಾನಿತ ಎಂಜಿನಿಯರಿಂಗ್ ಕಾಲೇಜುಗಳ ಶುಲ್ಕ ₹38,200, ಅಲ್ಪಸಂಖ್ಯಾತ ಕಾಲೇಜುಗಳು ಸೇರಿದಂತೆ ಅನುದಾನ ರಹಿತ ಕಾಲೇಜುಗಳಲ್ಲಿ ₹98,984, ಖಾಸಗಿ ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿ ₹91,796 ಇತ್ತು.

ವಿಚಾರಣೆಗೆ ಸಹಕರಿಸದ ಮಾಜಿ ಸಂಸದ: ಪ್ರಾಸಿಕ್ಯೂಷನ್

ಪ್ರಜ್ವಲ್ ಮತ್ತೆ ನಾಲ್ಕು ದಿನ ಕಸ್ಟಡಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಹಾಗೂ ಅತ್ಯಾಚಾರ ಎಸಗಿದ ಆರೋಪಿಯಾಗಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣ; ತನಿಖಾಧಿಕಾರಿಗಳು ಕೇಳುವ ಪ್ರಶ್ನೆಗಳಿಗೆ, ನಾನು ಏನೂ ಮಾಡಿಲ್ಲ ಎಂದು ಪುನರುಚ್ಚರಿಸುತ್ತಿದ್ದಾರೆ. ಸರಿಯಾದ ಉತ್ತರ ಕೊಡುತ್ತಿಲ್ಲ. ಹೀಗಾಗಿ, ವಿಚಾರಣೆ ಮುಂದುವರಿಸಲು ಮತ್ತಷ್ಟು ಸಮಯ ನೀಡಬೇಕು’ ಎಂಬ ಪ್ರಾಸಿಕ್ಯೂಷನ್ ಮನವಿಯನ್ನು ಜನಪ್ರತಿನಿಧಿಗಳ ನ್ಯಾಯಾಲಯ ಮನ್ನಿಸಿದೆ. ಅಂತೆಯೇ, ಪೊಲೀಸ್ ಕಸ್ಟಡಿ ಅವಧಿಯನ್ನು ನಾಲ್ಕು ದಿನಗಳ ಕಾಲ ವಿಸ್ತರಿಸಿದೆ.

ಈ ಮೊದಲು ನೀಡಿದ್ದ ಆರು ದಿನಗಳ ಪೊಲೀಸ್ ಕಸ್ಟಡಿ ಅವಧಿ ಮುಕ್ತಾಯಗೊಂಡ ಕಾರಣ ಆರೋಪಿ ಪ್ರಜ್ವಲ್ ಅವರನ್ನು ಗುರುವಾರ ಮಧ್ಯಾಹ್ನ 3 ಗಂಟೆಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ (42ನೇ ಎಸಿಎಂಎಂ) ನ್ಯಾಯಾಧೀಶ ಕೆ.ಎನ್. ಶಿವಕುಮಾರ್ ಅವರ ಮುಂದೆ ಹಾಜರುಪಡಿಸಲಾಯಿತು.

ವಿಚಾರಣೆ ವೇಳೆ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಅಶೋಕ್ ನಾಯಕ್, ‘ಆರೋಪಿಯು ಮಹಿಳೆಯರ ಜೊತೆ ನಡೆಸಿದ ಕಾಮಕೇಳಿಯ ದೃಶ್ಯಗಳನ್ನು ಚಿತ್ರೀಕರಿಸಿಕೊಂಡಿರುವ ಮೊಬೈಲ್‌ನ ಮಾಹಿತಿ ಇನ್ನೂ ದೊರೆತಿಲ್ಲ. ಪ್ರಕರಣ ದಾಖಲಾದ ನಂತರ ತಲೆಮರೆಸಿಕೊಂಡಿದ್ದರು. ಕೆಲವು ಸಂತ್ರಸ್ತೆಯರು ಹಾಗೂ ಸಾಕ್ಷಿಗಳನ್ನು ಮುಖಾಮುಖಿ ವಿಚಾರಣೆ ನಡೆಬೇಕಿದೆ. ಆದ್ದರಿಂದ, ಕಸ್ಟಡಿ ಅವಧಿ ವಿಸ್ತರಿಸಬೇಕು’ ಎಂದು ಕೋರಿದರು.

ಅಪರಾಧ ಹಿನ್ನೆಲೆಯುಳ್ಳ ಜನಪ್ರತಿನಿಧಿಗಳು ಶೇಕಡಾ 46

ಕಡಿಮೆ ಶಿಕ್ಷಣ ಪಡೆದ 105 ಸಂಸದರು

ಪ್ರಜಾವಾಣಿ ವಾರ್ತೆ

ನವದೆಹಲಿ: 18ನೇ ಲೋಕಸಭೆಗೆ ನೂತನ ಆಯ್ಕೆಯಾದವರಲ್ಲಿ ಶೇ 46 ಮಂದಿ (251 ಸಂಸದರು) ಅಪರಾಧ ಹಿನ್ನೆಲೆ ಹೊಂದಿದ್ದಾರೆ. ಅದರಲ್ಲಿ ಶೇ 31 ಮಂದಿ (170 ಸಂಸದರು) ಗಂಭೀರ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ. ಶೇ 93 ಮಂದಿ ಕೋಟ್ಯಾಧಿಪತಿಗಳು ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ತಿಳಿಸಿದೆ.

ನೂತನ ಸಂಸದರ ಅಪರಾಧ ಹಿನ್ನೆಲೆ, ಹಣಕಾಸು, ಶಿಕ್ಷಣ, ಲಿಂಗ ಹಾಗೂ ಇತರ ವಿಷಯಗಳ ಬಗ್ಗೆ ವಿಶ್ಲೇಷಣೆ ನಡೆಸಿ ಎಡಿಆರ್ ಗುರುವಾರ ವರದಿ ಪ್ರಕಟಿಸಿದೆ. 105 ವಿಜೇತ ಅಭ್ಯರ್ಥಿಗಳ (ಶೇ 19) ಶೈಕ್ಷಣಿಕ ಅರ್ಹತೆ ಪಿಯುಸಿಗಿಂತ ಕಡಿಮೆ. 420 ವಿಜೇತರು ಪದವಿ ಅಥವಾ ಅದಕ್ಕಿಂತ ಹೆಚ್ಚಿನ ಶೈಕ್ಷಣಿಕ ಅರ್ಹತೆ ಹೊಂದಿದ್ದಾರೆ ಎಂದು ವರದಿ ತಿಳಿಸಿದೆ.

ಅಪರಾಧ ಪ್ರಕರಣಗಳನ್ನು ಹೊಂದಿರುವ ಅಭ್ಯರ್ಥಿ ಗೆಲ್ಲುವ ಸಾಧ್ಯತೆ ಶೇ 15.3 ಆಗಿದ್ದರೆ, ಶುದ್ಧ ಚಾರಿತ್ರ್ಯ ಹೊಂದಿರುವ ಅಭ್ಯರ್ಥಿಯ ವಿಜೇತರಾಗುವ ಸಾಧ್ಯತೆ ಕೇವಲ 4.4ರಷ್ಟು. ಅದೇ ರೀತಿ, ಕೋಟ್ಯಾಧಿಪತಿ ಅಭ್ಯರ್ಥಿ ಗೆಲ್ಲುವ ಸಾಧ್ಯತೆ ಶೇ 19.6 ಆಗಿದ್ದರೆ, ಒಂದು ಕೋಟಿಗಿಂತ ಕಡಿಮೆ ಆಸ್ತಿ ಹೊಂದಿರುವವರ ಗೆಲ್ಲುವ ಅವಕಾಶ ಶೇ 0.7ರಷ್ಟು ಎಂದು ಎಡಿಆರ್ ವಿಶ್ಲೇಷಿಸಿದೆ.





ಅಂತರರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ ವಿದ್ಯಾರ್ಥಿಗಳಿಂದ ಅಭಿವೃದ್ಧಿ

ಅಂಧ ವಿದ್ಯಾರ್ಥಿಗಳ ಕಲಿಕೆಗೆ ವಿಶಿಷ್ಟ ಸಾಧನ

• ವರುಣ ಹೆಗಡೆ

ಬೆಂಗಳೂರು: ಅಂಧ ವಿದ್ಯಾರ್ಥಿಗಳು ತರಗತಿಗಳಲ್ಲಿ ಎಲ್ಲ ಮಕ್ಕಳೊಂದಿಗೆ ಕುಳಿತು, ಶೈಕ್ಷಣಿಕವಾಗಿ ಪ್ರಗತಿ ಹೊಂದಲು ಇಲ್ಲಿನ ಅಂತರ ರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯ (ಐಐಐಟಿಬಿ) ವಿದ್ಯಾರ್ಥಿಗಳು ವಿಶಿಷ್ಟ ಸಾಧನ ಅಭಿವೃದ್ಧಿಪಡಿಸಿದ್ದಾರೆ. ಈ ಸಾಧನದ ನೆರವಿನಿಂದ ಅಂಧ ಮಕ್ಕಳು ಸಹ ಬರವಣಿಗೆಯನ್ನು ಸುಲಭವಾಗಿ ಗ್ರಹಿಸಬಹುದಾಗಿದೆ.

‘ಸಿಸ್ಟಮ್ ಆ್ಯಂಡ್ ಮೆಥಡ್ ಫಾರ್ ಅಸಿಸ್ಟಿಂಗ್ ವಿಶುವಲಿ ಇಂಪೇರ್ಡ್’ ಶೀರ್ಷಿಕೆಯಡಿ ಈ ಸಾಧನವನ್ನು ಸಿದ್ಧಪಡಿಸಲಾಗಿದೆ. ಐಐಐಟಿಬಿಯ ಎಂ.ಟೆಕ್ ಅಂತಿಮ ವರ್ಷದ ವಿದ್ಯಾರ್ಥಿ ಮಯಾಂಕ್ ಕಾಬ್ರಾ ನೇತೃತ್ವದಲ್ಲಿ ಈ ಸಾಧನವನ್ನು ಅಭಿವೃದ್ಧಿಪಡಿಸಲಾಗಿದ್ದು, ಈ ಸಾಧನದ ಹಕ್ಕುಸ್ವಾಮ್ಯವನ್ನು ಅವರು ಹೊಂದಿದ್ದಾರೆ. ಇದು ಅಂಧರ ಕೈ ಬೆರಳುಗಳಿಗೆ ಅಳವಡಿಸುವ ಸಾಧನವಾಗಿದ್ದು, ಇದಕ್ಕೆ ‘ಹ್ಯಾಪ್ಟಿಕ್ ತಂತ್ರಜ್ಞಾನ’ ಬಳಸಿಕೊಳ್ಳಲಾಗಿದೆ. ಇದರಿಂದಾಗಿ ಕಂಪನದ ಮೂಲಕ ಅಕ್ಷರಗಳ ಸ್ಪರ್ಶದ ಅನುಭವ ದೊರೆಯುತ್ತದೆ. ಇದು ಕಾರ್ಯ ನಿರ್ವಹಿಸಲು ಸ್ಮಾರ್ಟ್ ಬೋರ್ಡ್ ಹಾಗೂ ಸುಸಜ್ಜಿತ ಕೊಠಡಿ ಅಗತ್ಯ. ಇಂಟರ್ನೆಟ್ ಅಥವಾ ವೈಫೈ ಮೂಲಕ ಸ್ಮಾರ್ಟ್ ಬೋರ್ಡ್ ಹಾಗೂ ಬೆರಳಿಗೆ ಅಳವಡಿಸಿರುವ ಸಾಧನದ ನಡುವೆ ಸಂಪರ್ಕ ಸಾಧ್ಯವಾಗಲಿದೆ.



ಐಐಐಟಿಬಿ ವಿದ್ಯಾರ್ಥಿಗಳು ಅಭಿವೃದ್ಧಿಪಡಿಸಿದ ಸಾಧನ

ಈ ಸಾಧನದ ಒಳಗಡೆ ಅಂಧ ವಿದ್ಯಾರ್ಥಿಯ ಬೆರಳನ್ನು ಇರಿಸಿ, ಇಂಟರ್ನೆಟ್ ಸಂಪರ್ಕದೊಂದಿಗೆ ಕಾರ್ಯಾಚರಣೆ ಪ್ರಾರಂಭಿಸಿದಲ್ಲಿ ಸ್ಮಾರ್ಟ್ ಬೋರ್ಡ್ ಮೇಲಿನ ಬರಹವನ್ನು ಅವರಿಗೆ ಗ್ರಹಿಸಲು ಸಾಧ್ಯ ಆಗುತ್ತದೆ.



ಮಯಾಂಕ್ ಕಾಬ್ರಾ

ಈ ಸಾಧನವು ‘ಬ್ರೈಲ್ ಡಾಟ್’ ಹೊಂದಿದೆ. ಇದು ಸ್ಮಾರ್ಟ್ ಬೋರ್ಡ್‌ನಲ್ಲಿನ ಪಠ್ಯ ಅರ್ಥ ಮಾಡಿಕೊಳ್ಳಲು ನೆರವಾಗುತ್ತದೆ. ಶಿಕ್ಷಕರು ಸ್ಮಾರ್ಟ್ ಬೋರ್ಡ್ ಮೇಲೆ ಬರೆದಂತೆ ಸಾಧನದ ಒಳಗಡೆ ಕಂಪನವಾಗಲಿದ್ದು, ವಿದ್ಯಾರ್ಥಿಯ ಬೆರಳಿಗೆ ಮಾರ್ಗದರ್ಶನ ಮಾಡುತ್ತದೆ. ಇದರಿಂದಾಗಿ ನೈಜ ಸಮಯದಲ್ಲಿ ಶಿಕ್ಷಕರ ಬರಹವನ್ನು ಅನುಸರಿಸಲು ಸಾಧ್ಯವಾಗುತ್ತದೆ.

ಪ್ರಜಾವಾಣಿ ವಿಶೇಷ

ತಡೆ ರಹಿತ ಕಲಿಕೆ: ಈ ಸಾಧನವು ಆರು ಚುಕ್ಕೆಗಳ ಬ್ರೈಲ್ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತದೆ. ಇವುಗಳನ್ನು ನಿಯಂತ್ರಿಸಲು ಚಿಕ್ಕ ಮೋಟಾರ್ ಮತ್ತು ನಿರ್ದೇಶನಕ್ಕೆ ‘ಮೈಕ್ರೊ ಕಂಟ್ರೋಲರ್’ ಅಳವಡಿಸಲಾಗಿದೆ. ಇದರಿಂದಾಗಿ ಅಂಧರು ಕೂಡ ಎಲ್ಲ ಮಕ್ಕಳಂತೆ ಸ್ಮಾರ್ಟ್ ಬೋರ್ಡ್ ಮೇಲಿನ ಬರಹಗಳನ್ನು ಯಾವುದೇ ಅಡೆತಡೆ ಇಲ್ಲದೆಯೇ ಕಲಿಯಬಹುದಾಗಿದೆ.

‘ಆನುವಂಶಿಕ ಸಮಸ್ಯೆ, ಜೀವಸತ್ವದ ಕೊರತೆ ಸೇರಿ ವಿವಿಧ ಕಾರಣಗಳಿಂದ ಅಂಧತ್ವ ಸಮಸ್ಯೆಗೆ ಒಳಗಾಗುವ ಮಕ್ಕಳ ಸಂಖ್ಯೆ ಹೆಚ್ಚುತ್ತಿದೆ. ಅಂಧತ್ವ ಸಮಸ್ಯೆಯಿಂದ ಕಲಿಕೆಯಲ್ಲಿಯೂ ಹಿನ್ನಡೆ ಅನುಭವಿಸುತ್ತಾರೆ. ಶಾಲಾ ಪರಿಸರದಲ್ಲಿ ಇತರ ಸಹಪಾಠಿಗಳೊಂದಿಗೆ ಶಿಕ್ಷಣವನ್ನು ಮುಂದುವರಿಸಲು ಕೆಲವರಿಗೆ ಸಾಧ್ಯವಾಗುತ್ತಿಲ್ಲ. ಕಲಿಕೆಗೆ ಮಾರುಕಟ್ಟೆಯಲ್ಲಿ ಲಭ್ಯವಿರುವ ಸಾಧನಗಳು ದುಬಾರಿ ಆಗಿರುವುದರಿಂದ ಎಲ್ಲರಿಗೂ ಖರೀದಿಸುವ ಶಕ್ತಿ ಇರುವುದಿಲ್ಲ. ಆದ್ದರಿಂದ ಈ ಸಾಧನವನ್ನು ಅಭಿವೃದ್ಧಿಪಡಿಸಿ, ವಿವಿಧ ಶೈಕ್ಷಣಿಕ ಸಂಸ್ಥೆಗಳಲ್ಲಿ ಇದರ ಪ್ರಾಯೋಗಿಕ ಅಧ್ಯಯನ ನಡೆಸಲಾಗಿದೆ’ ಎಂದು ಮಯಾಂಕ್ ಕಾಬ್ರಾ ತಿಳಿಸಿದರು.

ಡಿಜಿಟಲ್ ದತ್ತಾಂಶ ಸೆರೆ

ಸಾಧನವು ನೈಜ ಸಮಯದಲ್ಲಿ ಬೋರ್ಡ್ ಮೇಲಿನ ದತ್ತಾಂಶವನ್ನು ಸೆರೆಹಿಡಿದು ರವಾನಿಸುತ್ತದೆ. ಬೆರಳಿನ ಮೇಲೆ ಬರೆದ ಅಕ್ಷರಗಳು ಹಾಗೂ ರೇಖೆಗಳ ಸಂವೇದನೆ ಒದಗಿಸಲು ‘ಹ್ಯಾಪ್ಟಿಕ್ ತಂತ್ರಜ್ಞಾನ’ ನೆರವಾಗಲಿದೆ. ಬೋರ್ಡ್ ಮೇಲೆ ಬರೆದ ಪಠ್ಯವು ಬ್ರೈಲ್ ಲಿಪಿಯಾಗಿ ಪರಿವರ್ತನೆಯಾಗಲಿದೆ. ಸ್ಪರ್ಶಾನುಭವದಿಂದ ಪಠ್ಯವನ್ನು ಅರ್ಥೈಸಿಕೊಳ್ಳಬಹುದಾಗಿದೆ. ವಿದ್ಯಾರ್ಥಿಗಳ ತಂಡವು ಈ ಸಾಧನವನ್ನು ಉತ್ಪಾದಿಸಿ, ವಿತರಿಸಲು ಪಾಲುದಾರರ ಹುಡುಕಾಟದಲ್ಲಿದೆ.

‘ಈ ಸಾಧನವು ಮಿದುಳಿನಂತೆ ಕಾರ್ಯನಿರ್ವಹಿಸಲಿದೆ. ಸಂಸ್ಥೆಯ ಪ್ರಾಧ್ಯಾಪಕ ಮಾಧವ್ ಅವರು ಈ ಸಾಧನದ ಅಭಿವೃದ್ಧಿಗೆ ಮಾರ್ಗದರ್ಶನ ನೀಡಿದರು. ಇತರ ಬ್ರೈಲ್ ಸಾಧನಗಳಿಗೆ ಹೋಲಿಸಿದರೆ ಇದರ ತಯಾರಿಕಾ ವೆಚ್ಚವು ಕಡಿಮೆಯಿದೆ. ಬ್ರೈಲ್ ಚುಕ್ಕೆಗಳ ವಿನ್ಯಾಸ ಮತ್ತು ಸಾಧನವನ್ನು ಜೋಡಿಸುವುದು ಸವಾಲಾಗಿತ್ತು. ಚುಕ್ಕೆಗಳ ನಡುವೆ ಒಂದು ಮಿಲಿ ಮೀಟರ್ ವ್ಯತ್ಯಾಸವಾದರೂ ಮೋಟಾರ್‌ಗೆ ಹೊಂದಾಣಿಕೆ ಆಗುವುದಿಲ್ಲ’ ಎಂದು ಮಯಾಂಕ್ ಕಾಬ್ರಾ ವಿವರಿಸಿದರು.

ಶುಕ್ರವಾರ, ಜೂನ್ 7, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 158 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

ಮುಂದಿನ ವರ್ಷಕ್ಕೆ 'ಕಾಂತಾರ' ಪ್ರೀಕ್ವೆಲ್ – ಬಹುನಿರೀಕ್ಷಿತ ಚಿತ್ರದ ಕುರಿತು ಮಹತ್ವದ ಅಪ್‌ಡೇಟ್ ನೀಡಿರುವ ರಿಷಬ್ ಶೆಟ್ಟಿ

ಆಳ–ಅಗಲ

ಸಹಸ್ರ ಸರೋವರದ ಹಾದಿಯ ಸಾವಿನ ಚಾರಣ

'ಜೀವಕ್ಕೆ ಕುತ್ತು ತರುವ ಸಮಸ್ಯೆ ಇದ್ದಂತಿಲ್ಲ' 9

ಯಾರಿಗೆಲ್ಲ ಸಚಿವ ಸ್ಥಾನ? 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
75,074	22,821	₹75,260 (ಬೆಂಗಳೂರು)	₹93,300 (ಬೆಂಗಳೂರು)	83.53

ಸಚಿವ ನಾಗೇಂದ್ರ ರಾಜೀನಾಮೆ

ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ₹94.73 ಕೋಟಿ ಅಕ್ರಮ ವರ್ಗಾವಣೆ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ₹94.73 ಕೋಟಿಯನ್ನು ಅಕ್ರಮವಾಗಿ ವರ್ಗಾವಣೆ ಮಾಡಲಾದ ಪ್ರಕರಣದ ಬಿಸಿ ಏರುತ್ತಿದ್ದು, ಪರಿಶಿಷ್ಟ ಪಂಗಡಗಳ ಕಲ್ಯಾಣ, ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವ ಬಿ. ನಾಗೇಂದ್ರ ಗುರುವಾರ ರಾಜೀನಾಮೆ ನೀಡಿದ್ದಾರೆ.

ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರದ ವಿರುದ್ಧ ಭ್ರಷ್ಟಾಚಾರ, ಶೇ 40ರ ಕಮಿಷನ್ ಆರೋಪ ಹೊರಿಸಿ 'ಪೇ ಸಿಎಂ' ಅಭಿಯಾನವನ್ನೇ ಕಾಂಗ್ರೆಸ್ ಪಕ್ಷ ನಡೆಸಿತ್ತು. ಅದನ್ನು ಆಧರಿಸಿಯೇ ಚುನಾವಣೆಯಲ್ಲಿ ಗೆದ್ದಿತ್ತು. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಒಂದು ವರ್ಷದ ಸಂಭ್ರಮದಲ್ಲಿ ಇರುವ ಹೊತ್ತಿನಲ್ಲೇ ಸಚಿವರ ರಾಜೀನಾಮೆಯ ವಿದ್ಯಮಾನ ನಡೆದಿದೆ.

ಏನಿದು ಹಣ ವರ್ಗಾವಣೆ ಪ್ರಕರಣ?

ವಾಲ್ಮೀಕಿ ಅಭಿವೃದ್ಧಿ ನಿಗಮದ ₹94.73 ಕೋಟಿ ಹಣವನ್ನು ನಕಲಿ ದಾಖಲೆ ಸೃಷ್ಟಿಸಿ ಬೇರೆ ಬೇರೆ ಖಾತೆಗಳಿಗೆ ವರ್ಗಾವಣೆ ಮಾಡಿಕೊಂಡಿರುವ ಆರೋಪದ ಮೇಲೆ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಸಿಇಒ ಸೇರಿದಂತೆ ಬ್ಯಾಂಕಿನ ಆರು ಮಂದಿ ವಿರುದ್ಧ ಬೆಂಗಳೂರಿನ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಮೇ 29ರಂದು ಪ್ರಕರಣ ದಾಖಲಾಗಿತ್ತು. ನಂತರ ಈ ಪ್ರಕರಣವನ್ನು ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ವಹಿಸಿತ್ತು. ಪ್ರಕರಣದಲ್ಲಿ ಭಾಗಿಯಾದ ಆರೋಪದಲ್ಲಿ ನಿಗಮದ ಹಿಂದಿನ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ಜೆ.ಜಿ. ಪದ್ಮನಾಭ್ ಮತ್ತು ಲೆಕ್ಕಾಧಿಕಾರಿಯಾಗಿದ್ದ ಪರಶುರಾಮ್ ಜಿ. ದುರ್ಗಣ್ಣನವರ ಅವರನ್ನು ಎಸ್‌ಐಟಿ ಬಂಧಿಸಿದೆ

ಹೈದರಾಬಾದ್‌ನ ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ(ಎಫ್‌ಎಫ್‌ಸಿಸಿಎಸ್‌ಎಲ್) 18 ಖಾತೆಗಳಿಗೆ ₹94.73 ಕೋಟಿ ಜಮೆ ಆಗಿರುವ ಸಂಗತಿಯನ್ನು ಎಸ್‌ಐಟಿ ಪತ್ತೆ ಹಚ್ಚಿದೆ. ಹೀಗಾಗಿ, ಎಫ್‌ಎಫ್‌ಸಿಸಿಎಸ್‌ಎಲ್ ಅಧ್ಯಕ್ಷ ಸತ್ಯನಾರಾಯಣ್ ಅವರನ್ನು ಎಸ್‌ಐಟಿ ಬಂಧಿಸಿದೆ. ಲಭ್ಯ ಸಾಕ್ಷ್ಯಾಧಾರಗಳನ್ನು ಆಧರಿಸಿ ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪದಡಿ ಸಚಿವ ನಾಗೇಂದ್ರ ಅವರ ಆಪ್ತರು ಎನ್ನಲಾದ ನೆಕ್ಕಂಟಿ ನಾಗರಾಜ್ ಹಾಗೂ ಅವರ ಬಾಮೈದ ನಾಗೇಶ್ವರರಾವ್ ಅವರನ್ನು ಬಂಧಿಸಲಾಗಿದೆ. 'ನೆಕ್ಕಂಟಿ ನಾಗರಾಜ್, ಈ ಮೊದಲು ಮಾಜಿ ಸಚಿವ, ಬಿಜೆಪಿಯ ಬಿ. ಶ್ರೀರಾಮುಲು ಜೊತೆ ಗುರುತಿಸಿಕೊಂಡಿದ್ದ' ಎನ್ನಲಾಗಿದೆ.

ವಾಲ್ಮೀಕಿ ನಿಗಮದ ಅಧೀಕ್ಷಕ ಚಂದ್ರಶೇಖರನ್ ಅವರು ಶಿವಮೊಗ್ಗದ ತಮ್ಮ ಮನೆಯಲ್ಲಿ ಮೇ 26ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು. ಆತ್ಮಹತ್ಯೆಗೆ ಮುನ್ನ ಅವರು ಬರೆದಿಟ್ಟಿದ್ದ ಪತ್ರದಲ್ಲಿ, 'ನನ್ನ ಮೇಲೆ ಒತ್ತಡ ಹಾಕಿದ್ದ ಮೇಲಧಿಕಾರಿಗಳು ನಿಗಮದ ₹187 ಕೋಟಿಯನ್ನು ವರ್ಗಾವಣೆ ಮಾಡಿಸಿದ್ದರು. ಹಣ ವರ್ಗಾವಣೆ ಮಾಡಲು ಸಚಿವರ ಸೂಚನೆಯಿದೆ ಎಂದು ಮೇಲಧಿಕಾರಿಗಳು ನನಗೆ ಹೇಳಿದ್ದರು' ಎಂದೂ ಬರೆದಿದ್ದರು. ಈ ಪ್ರಕರಣ ರಾಜ್ಯದಾದ್ಯಂತ ಕೋಲಾಹಲ ಎಬ್ಬಿಸಿದ್ದರಿಂದ, ಪ್ರಕರಣದ ತನಿಖೆಗೆ ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿತ್ತು. ಎಸ್‌ಐಟಿಯು ನಾಗೇಂದ್ರ ಆಪ್ತರಿಬ್ಬರನ್ನು ಬುಧವಾರ ಬಂಧಿಸಿತ್ತು.

ಈ ಬೆನ್ನಲ್ಲೇ, ತಮ್ಮ ನಿವಾಸ 'ಕಾವೇರಿ'ಗೆ ನಾಗೇಂದ್ರ ಅವರನ್ನು ಬುಧವಾರ ರಾತ್ರಿ ಕರೆಸಿಕೊಂಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಪ್ರಕರಣದ ಕುರಿತಂತೆ ಮಾಹಿತಿ ಪಡೆದಿದ್ದರು. ಈ ವೇಳೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಗೃಹ ಸಚಿವ ಜಿ. ಪರಮೇಶ್ವರ ಕೂಡಾ ಇದ್ದರು.

> ಸಿಬಿಐ ಸೇರಿದಂತೆ ಯಾವುದೇ ತನಿಖೆ ಎದುರಿಸಲು ಸಿದ್ಧನಿದ್ದೇನೆ ಎಂದು ನಾಗೇಂದ್ರ ಹೇಳಿದ್ದಾರೆ. ರಾಜೀನಾಮೆ ನೀಡುವಂತೆ ನಾವು ಅವರಿಗೆ ಹೇಳಿರಲಿಲ್ಲ
> **ಡಿ.ಕೆ. ಶಿವಕುಮಾರ್,** ಉಪಮುಖ್ಯಮಂತ್ರಿ

> ಕಳೆದ ಮಾರ್ಚ್ ತಿಂಗಳಲ್ಲೆ ಹಗರಣ ನಡೆದಿದೆ. ಸಿ.ಎಂ, ಡಿ.ಸಿ.ಎಂ ಸೇರಿ ಇದನ್ನು ಮುಚ್ಚಿಟ್ಟಿದ್ದಾರೆ. ಈಗ ಹೊರಬರದೇ ಇದ್ದಿದ್ದರೆ ಮುಚ್ಚಿ ಹಾಕುತ್ತಿದ್ದರು
> **ಎಚ್.ಡಿ.ಕುಮಾರಸ್ವಾಮಿ**
> ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ

> ಭ್ರಷ್ಟ ಸಚಿವ ನಾಗೇಂದ್ರ ಅವರನ್ನು ರಕ್ಷಣೆ ಮಾಡುವ ಭಂಡತನ ಪ್ರದರ್ಶಿಸಿದ್ದ ಸಿ.ಎಂ, ಡಿ.ಸಿ.ಎಂ, ಒತ್ತಡಕ್ಕೆ ಮಣಿದು ವಿಧಿ ಇಲ್ಲದೇ ರಾಜೀನಾಮೆ ಪಡೆದಿದ್ದಾರೆ
> **ಆರ್.ಅಶೋಕ**
> ವಿಧಾನಸಭೆ ವಿರೋಧ ಪಕ್ಷದ ನಾಯಕ

8ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ವಿಧಾನ ಪರಿಷತ್ ಚುನಾವಣೆ: ಎರಡು ಕ್ಷೇತ್ರಗಳ ಫಲಿತಾಂಶ ಬಾಕಿ

ಜೆಡಿಎಸ್ 2, ಬಿಜೆಪಿ, ಕಾಂಗ್ರೆಸ್‌ಗೆ ತಲಾ 1

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವೀಧರರ ಹಾಗೂ ಶಿಕ್ಷಕರ ತಲಾ ಮೂರು ಕ್ಷೇತ್ರಗಳಿಂದ ವಿಧಾನ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಹಿಂದೆ ಗೆದ್ದಿದ್ದ ಎರಡು ಕ್ಷೇತ್ರಗಳನ್ನು ಉಳಿಸಿಕೊಳ್ಳುವಲ್ಲಿ ಜೆಡಿಎಸ್ ಸಫಲವಾಗಿದ್ದು ಕಾಂಗ್ರೆಸ್ ಹಾಗೂ ಬಿಜೆಪಿ ತಲಾ ಒಂದು ಸ್ಥಾನ ಪಡೆದಿವೆ.

ಎರಡು ಕ್ಷೇತ್ರಗಳ ಮತ ಎಣಿಕೆ ಪತ್ರಿಕೆ ಮುದ್ರಣಕ್ಕೆ ಹೋಗುವವರೆಗೆ ಮುಂದುವರಿದಿದ್ದು ತಲಾ ಒಂದು ಕ್ಷೇತ್ರಗಳಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಅಭ್ಯರ್ಥಿಗಳು ಮುನ್ನಡೆ ಸಾಧಿಸಿದ್ದಾರೆ.

ಕೆ.ವಿವೇಕಾನಂದ (ಜೆಡಿಎಸ್)

ಭೋಜೇಗೌಡ (ಜೆಡಿಎಸ್)

ರಾಮೋಜಿ ಗೌಡ (ಕಾಂಗ್ರೆಸ್)

ಧನಂಜಯ ಸರ್ಜಿ (ಬಿಜೆಪಿ)

ಬೆಂಗಳೂರು ಪದವೀಧರ ಕ್ಷೇತ್ರದಿಂದ ಕಾಂಗ್ರೆಸ್‌ನ ರಾಮೋಜಿ ಗೌಡ ಅವರು 36,729 ಮತಗಳನ್ನು ಪಡೆಯುವ ಮೂಲಕ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿ ಅ.ದೇವೇಗೌಡ ಅವರನ್ನು ಸೋಲಿಸಿದರು. ದೇವೇಗೌಡ 24,888 ಮತಗಳನ್ನು ಪಡೆದರು.

ನೈರುತ್ಯ ಪದವೀಧರರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಡಾ. ಧನಂಜಯ ಸರ್ಜಿ ಅವರು ಭಾರಿ ಅಂತರದಿಂದ ಜಯಗಳಿಸಿದ್ದಾರೆ. ಸರ್ಜಿ ಅವರು ಅಂತಿಮ ಸುತ್ತಿನ ವೇಳೆಗೆ 37,627 ಮತಗಳನ್ನು ಪಡೆದು ಕಾಂಗ್ರೆಸ್ ಅಭ್ಯರ್ಥಿ ಆಯನೂರು ಮಂಜುನಾಥ್ ಅವರನ್ನು 24,111 ಮತಗಳ ಅಂತರದಿಂದ ಸೋಲಿಸಿದರು. ಮಂಜುನಾಥ್ 13,516 ಮತ ಪಡೆದರು. ಬಿಜೆಪಿ ಬಂಡಾಯ ಅಭ್ಯರ್ಥಿ ಕೆ.ರಘುಪತಿ ಭಟ್ 7039 ಮತ ಗಳಿಸಿದರು.

ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಕೆ.ವಿವೇಕಾನಂದ ಮೊದಲ ಪ್ರಾಶಸ್ತ್ಯದ ಮತಗಳಲ್ಲೇ ಗೆಲುವಿನ ನಗೆ ಬೀರಿದ್ದಾರೆ. 4,622 ಮತಗಳ ಅಂತರದಿಂದ ಗೆದ್ದಿದ್ದಾರೆ. ಸತತ 5ನೇ ಬಾರಿಗೆ ಆಯ್ಕೆ ಬಯಸಿದ್ದ ಕಾಂಗ್ರೆಸ್‌ನ ಮರಿತಿಬ್ಬೇಗೌಡ ಸೋತಿದ್ದಾರೆ.

9ನೇ ಪುಟ ನೋಡಿ

ವಸತಿನಿಲಯಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಬಡಗನಾಡು ಬ್ರಾಹ್ಮಣ ಮಹಾಸಭಾ ವತಿಯಿಂದ ವಸತಿನಿಲಯ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಪಿಯುಸಿ, ಪದವಿ, ಡಿಪ್ಲೊಮಾ, ಎಂಜಿನಿಯರಿಂಗ್ ಮತ್ತು ಮೆಡಿಕಲ್ ಓದುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಆಸಕ್ತ ವಿದ್ಯಾರ್ಥಿಗಳು ಇದೇ 15ರೊಳಗೆ ಅರ್ಜಿ ಸಲ್ಲಿಸಬಹುದು. **ಹೆಚ್ಚಿನ ಮಾಹಿತಿಗಾಗಿ:** 080-2344 5944 ಮತ್ತು 080-23445945 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಬದಲಾದ ಜೀವನಶೈಲಿಯಿಂದ ಅನಾರೋಗ್ಯ: ಸಿದ್ದರಾಮಯ್ಯ

ನಿಯಮಿತ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಲು ಮುಖ್ಯಮಂತ್ರಿ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬದಲಾದ ಜೀವನಶೈಲಿ ಮತ್ತು ಆಹಾರ ಪದ್ಧತಿಯಿಂದ ಅನಾರೋಗ್ಯ ಸಮಸ್ಯೆ ಹೆಚ್ಚಾಗುತ್ತಿದೆ. ಆದ್ದರಿಂದ ದೈಹಿಕ ಮತ್ತು ಮಾನಸಿಕ ಚಟುವಟಿಕೆಗೆ ಆದ್ಯತೆ ನೀಡಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಆರೋಗ್ಯ ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಕರ್ನಾಟಕ ಸರ್ಕಾರ ಸಚಿವಾಲಯದ ನೌಕರರ ಸಂಘ ಜಂಟಿಯಾಗಿ ಸಚಿವಾಲಯದ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ನಗರದಲ್ಲಿ ಗುರುವಾರ ಹಮ್ಮಿಕೊಂಡ ಉಚಿತ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ ಶಿಬಿರ ಉದ್ಘಾಟಿಸಿ, ಮಾತನಾಡಿದರು.

'ಎಲ್ಲ ವರ್ಗಕ್ಕೂ ಆರೋಗ್ಯ ಮತ್ತು ಅಗತ್ಯ ಚಿಕಿತ್ಸೆಗಳನ್ನು ಒದಗಿಸಲು ರಾಜ್ಯ ಸರ್ಕಾರವು ಕಾರ್ಯಕ್ರಮಗಳನ್ನು ನಿರಂತರವಾಗಿ ರೂಪಿಸಿ, ಜಾರಿ ಮಾಡುತ್ತಿದೆ. ಕ್ಯಾನ್ಸರ್‌ನಂತಹ ಮಾರಕ ರೋಗವನ್ನೂ ಗುಣಪಡಿಸಲು ಸಾಧ್ಯವಿದೆ. ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಂಡಲ್ಲಿ ಗಂಭೀರ ಅನಾರೋಗ್ಯ ಸಮಸ್ಯೆ ತಡೆಯಬಹುದು. ಹಿಂದಿನ ಕಾಲದಲ್ಲಿ ಆಹಾರ ಪದ್ಧತಿ ಮತ್ತು ಶ್ರಮಾಧಾರಿತ ಜೀವನ ಶೈಲಿಯಿಂದ ಜನರು ಸದೃಢವಾಗಿದ್ದರು' ಎಂದು ಹೇಳಿದರು.

ಶಿಬಿರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ದಿನೇಶ್ ಗುಂಡೂರಾವ್ ಹಾಜರಿದ್ದರು —ಪ್ರಜಾವಾಣಿ ಚಿತ್ರ

ಆಹಾರ ಪದ್ಧತಿ ಬಗ್ಗೆ ಕಾರ್ಯಕ್ರಮ: ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, 'ನಾವು ಸೇವಿಸುವ ಆಹಾರದ ಮೇಲೆ ಉತ್ತಮ ಆರೋಗ್ಯ ಅವಲಂಬಿತವಾಗಿದೆ. ಆದ್ದರಿಂದ ಶಾಲಾ ಹಂತದಲ್ಲಿಯೇ ಆಹಾರ ಪದ್ಧತಿಯ ಬಗ್ಗೆ ಅರಿವು ಮೂಡಿಸಬೇಕು. ಇತ್ತೀಚೆಗೆ ಸಾಂಕ್ರಾಮಿಕ ರೋಗಗಳಿಗಿಂತ ಸಾಂಕ್ರಾಮಿಕವಲ್ಲದ ರೋಗಗಳು ಜನರ ಆರೋಗ್ಯದ ಮೇಲೆ ತೀವ್ರ ದುಷ್ಪರಿಣಾಮ ಬೀರುತ್ತಿವೆ. ಇದಕ್ಕೆ ನಮ್ಮ ಜೀವನಶೈಲಿ, ನಾವು ಸೇವಿಸುವ ಆಹಾರವೇ ಮುಖ್ಯ ಕಾರಣ' ಎಂದು ತಿಳಿಸಿದರು.

'ಸಮತೋಲಿತ ಆಹಾರ ಸೇವನೆಯು ಆರೋಗ್ಯ ಕಾಪಾಡಿಕೊಳ್ಳುವಲ್ಲಿ ಮಹತ್ವದ್ದಾಗಿದೆ. ಸಮಾಜದಲ್ಲಿ ಈ ಬಗ್ಗೆ ಹೆಚ್ಚು ಜಾಗೃತಿ ಮೂಡಿಸಲು ಇಲಾಖೆಯು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ' ಎಂದು ಹೇಳಿದರು.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ.ರೇವಣ್ಣ, ಮುಖ್ಯ ಸಚೇತಕ ಅಶೋಕ್ ಪಟ್ಟಣ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಉಪಸ್ಥಿತರಿದ್ದರು.

'1987ರಲ್ಲಿ ಸಿಗರೇಟ್ ತ್ಯಜಿಸಿದೆ'

'ಸಹವಾಸ ದೋಷದಿಂದಲೂ ಅನಾರೋಗ್ಯಕ್ಕೆ ಕಾರಣವಾಗುವ ವ್ಯಸನಗಳು ಅಂಟಿಕೊಳ್ಳುತ್ತವೆ. ಹಾಗಾಗಿ, ಎಚ್ಚರದಿಂದ ನಮ್ಮನ್ನು ನಾವು ಕಾಪಾಡಿಕೊಳ್ಳಬೇಕು. ನಾನೂ ಮೊದಲು ಸಿಗರೇಟ್ ಸೇದುತ್ತಿದ್ದೆ. ಒಮ್ಮೆ ವಿದೇಶಕ್ಕೆ ಹೋದಾಗ ಸ್ನೇಹಿತರು ಸಿಗರೇಟ್ ಪ್ಯಾಕ್ ತಂದಿದ್ದರು. ಆಗ ಕಡಿಮೆ ಅವಧಿಯಲ್ಲಿ ಹೆಚ್ಚು ಸಿಗರೇಟ್‌ಗಳನ್ನು ಸೇದಿದೆ. ಅವತ್ತೇ ನನಗೆ ಇದರ ದುಷ್ಪರಿಣಾಮದ ಬಗ್ಗೆ ಮನವರಿಕೆ ಆಯಿತು. 1987ರ ಆ.27ರಿಂದ ಸಿಗರೇಟ್ ಸೇದುವುದನ್ನು ಸಂಪೂರ್ಣ ನಿಲ್ಲಿಸಿದೆ' ಎಂದು ಸಿದ್ದರಾಮಯ್ಯ ಸ್ಮರಿಸಿಕೊಂಡರು.

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ,
ನಿರ್ಮಾಣ ಮತ್ತು ನಿರ್ವಹಣೆ ಸಮೂಹ, ಇಸ್ರೋ ಟೆಲಿಮೆಟ್ರಿ ಟ್ರ್ಯಾಕಿಂಗ್ ಮತ್ತು ಕಮಾಂಡ್ ನೆಟ್‌ವರ್ಕ್(ಐಎಸ್‌ಟಿಆರ್‌ಎಸಿ)
ಪ್ಲಾಟ್ ನಂ. 12 ಮತ್ತು 13 3ನೇ ಮೈನ್, 2ನೇ ಫೇಸ್, ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು-560 058
ಫ್ಯಾಕ್ಸ್:080-28094180, ದೂರವಾಣಿ:080-28094196, 4184, 4541

ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಈ ಕೆಳಕಂಡ ಕಾಮಗಾರಿಗಳಿಗೆ ಸೂಕ್ತ ದರ್ಜೆಯ ಗುತ್ತಿಗೆದಾರರಿಂದ ಐಟಂ ದರದ ಇ-ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಎನ್‌ಐಟಿ ಸಂ.:	ಐಎಸ್‌ಟಿಆರ್‌ಎಸಿ/ಸಿಎಂಜಿ/ಎಂಎಐಎನ್‌ಟಿ/ಸಿ/ಇಟಿಎನ್-16/2024-25 ದಿನಾಂಕ: 04.06.2024	ಐಎಸ್‌ಟಿಆರ್‌ಎಸಿ/ಸಿಎಂಜಿ/ಎಂಎಐಎನ್‌ಟಿ/ಸಿ/ಇಟಿಎನ್-18/2024-25 ದಿನಾಂಕ: 04.06.2024	ಐಎಸ್‌ಟಿಆರ್‌ಎಸಿ/ಸಿಎಂಜಿ/ಎಂಎಐಎನ್‌ಟಿ/ಸಿ/ಇಟಿಎನ್-17/2024-25 ದಿನಾಂಕ: 04.06.2024
ಕಾಮಗಾರಿಯ ಹೆಸರು	ಬೆಂಗಳೂರು, ಮಲ್ಲೇಶ್ವರಂ (16 ಸಂಖ್ಯೆಗಳ ಕ್ವಾರ್ಟರ್ಸ್‌ಗಳು) ಇಲ್ಲಿನ ಅಂತರಿಕ್ಷ ಅಪಾರ್ಟ್‌ಮೆಂಟ್, ಡಿಓಎಸ್ ಹೌಸಿಂಗ್ ಕಾಲೋನಿಯಲ್ಲಿ ಹಾಳಾಗಿರುವ ಎಲ್ಲಾ ಕಿಟಕಿಗಳನ್ನು ಬದಲಾಯಿಸುವುದು.	ಬೆಂಗಳೂರು, ಜಾಲಹಳ್ಳಿ, ಡಿಓಎಸ್ ಹೌಸಿಂಗ್ ಕಾಲೋನಿಯಲ್ಲಿ 7 ಬ್ಲಾಕ್ (ಮಾದರಿ 1C, 2C, 3C, 1D, 2D, 3D ಮತ್ತು 2E) ಕ್ವಾರ್ಟರ್ಸ್‌ಗಳಿಗೆ ಹೆಚ್ಚುವರಿ ಫ್ಲಶಿಂಗ್ ಸಿಸ್ಟಮ್ ಒದಗಿಸುವುದು.	ಬೆಂಗಳೂರು, ಐಎಸ್‌ಟಿಆರ್‌ಎಸಿ, ಎಸ್‌ಸಿಸಿ ಕ್ಯಾಂಪಸ್‌ನಲ್ಲಿ ಎರಡು ಟ್ರಾನ್ಸ್‌ಪೋರ್ಟಬಲ್ ಟರ್ಮಿನಲ್ ಸ್ಥಳಾವಕಾಶಕ್ಕಾಗಿ ಕಾಂಕ್ರೀಟ್ ಪ್ಲಾಟ್‌ಫಾರಂನ ವಿಸ್ತರಣೆ. (ಸಿವಿಲ್ ಕಾಮಗಾರಿಗಳು)
ಟೆಂಡರ್‌ಗಿಟ್ಟ ಅಂದಾಜು ಮೊತ್ತ	ರೂ. 23.19 ಲಕ್ಷಗಳು	ರೂ. 23.14 ಲಕ್ಷಗಳು	ರೂ.6.41ಲಕ್ಷಗಳು
ಟೆಂಡರ್ ದಸ್ತಾವೇಜು ವಿವರ	ಇ-ಟೆಂಡರ್	ಇ-ಟೆಂಡರ್	ಇ-ಟೆಂಡರ್
ಪೂರ್ಣಗೊಳಿಸುವ ಅವಧಿ	02 (ಎರಡು) ತಿಂಗಳು	01 (ಒಂದು) ತಿಂಗಳು	01 (ಒಂದು) ತಿಂಗಳು
ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ	07.06.2024 ರಿಂದ 20.06.2024ರವರೆಗೆ		07.06.2024 ರಿಂದ 18.06.2024ರವರೆಗೆ
ಬಿಡ್ ಸ್ಪಷ್ಟೀಕರಣ	07.06.2024 ರಿಂದ 21.06.2024ರವರೆಗೆ		07.06.2024 ರಿಂದ 19.06.2024ರವರೆಗೆ
ಬಿಡ್ ಸ್ಪಷ್ಟೀಕರಣಗಳಿಗೆ ಪ್ರತಿಕ್ರಿಯೆ ನೀಡಲು ಕಡೆಯ ದಿನಾಂಕ ಮತ್ತು ಸಮಯ	24.06.2024, 16.30 ಗಂಟೆಯವರೆಗೆ		20.06.2024, 16.30 ಗಂಟೆಯವರೆಗೆ
ಟೆಂಡರ್ ಸ್ವೀಕರಿಸುವ ಕಡೆಯ ದಿನಾಂಕ ಮತ್ತು ಸಮಯ	25.06.2024, 14.30 ಗಂಟೆಯವರೆಗೆ		21.06.2024, 14.30 ಗಂಟೆಯವರೆಗೆ
ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	26.06.2024, 11.30 ಗಂಟೆಯ ನಂತರ		24.06.2024, 11.30 ಗಂಟೆಯ ನಂತರ
ಇಎಂಡಿ	ರೂ. 46,380/-	ರೂ. 46,280/-	ರೂ. 12,820/-

ಆಸಕ್ತಿಯುಳ್ಳ ಟೆಂಡರ್‌ದಾರರು ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳಿಗೆ ಟೆಂಡರ್ ಪ್ರಕಟಣೆಯನ್ನು ಪರಿವೀಕ್ಷಿಸಲು ವೆಬ್‌ಸೈಟ್: www.isro.gov.in ಗೆ ಭೇಟಿ ನೀಡಿ ಮತ್ತು ಟೆಂಡರ್ ದಸ್ತಾವೇಜುಗಳನ್ನು www.tenderwizard.com/ISRO ರಿಂದ ಡೌನ್‌ಲೋಡ್ ಮಾಡಿಕೊಳ್ಳಿ.

ಸಹಿ/- ಸಮೂಹ ಮುಖ್ಯಸ್ಥರು, ಸಿಎಂಜಿ.

ಅಧ್ಯಕ್ಷರಾಗಿ ಆಯ್ಕೆ

ಯಲಹಂಕ: ರಾಜಾನುಕುಂಟೆ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ಚನ್ನಮ್ಮ ಪಟಾಲಪ್ಪ ಆಯ್ಕೆಯಾಗಿದ್ದಾರೆ.

ನಗರದಲ್ಲಿ ಇಂದು

'ಕರ್ನಾಟಕ ಸಂಗೀತದಲ್ಲಿ ವಾದ್ಯಗಳ ಪಾತ್ರ' ಕುರಿತು ಉಪನ್ಯಾಸ: ಸುಮಾ ಸುಧೀಂದ್ರ, ಆಯೋಜನೆ ಮತ್ತು ಸ್ಥಳ: ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ, ಮಲ್ಲತ್ತಹಳ್ಳಿ, ಸಂಜೆ 4.30

ಕಥಕ್ ರಂಗಪ್ರವೇಶ: ಪ್ರಸ್ತುತಿ: ವಿಭಾ ಭಟ್, ಆಯೋಜನೆ: ನಾದಂ, ಸ್ಥಳ: ಎಂಎಲ್‌ಆರ್ ಸಭಾಂಗಣ, ಕಾಸಿಯಾ ಬ್ಲಾಕ್‌ನ ಆವರಣ, ಜೆ.ಪಿ. ನಗರ, 7ನೇ ಹಂತ, ಸಂಜೆ 6



ವಿಶ್ವ ಪರಿಸರ ದಿನಾಚರಣೆ: 'ಮಹಾನಗರಗಳಲ್ಲಿ ನೀರಿನ ಸಮಸ್ಯೆಗಳು ಮತ್ತು ಸುಸ್ಥಿರ ಪರಿಹಾರಗಳು' ಕುರಿತು ಸಂವಾದ: ಭಾಗವಹಿಸುವವರು: ಟಿ.ವಿ. ರಾಮಚಂದ್ರ, ಎಚ್.ಕೆ. ರಾಮರಾಜು, ಎಂ.ಎ. ಖಾನ್, ಪ್ರಕಾಶ್ ಎಂ. ಕುಲಕರ್ಣಿ, ಅನ್ನಪೂರ್ಣ ಕಾಮತ್, ಸ್ಥಳ: ಗೋಲ್ಡನ್ ಜೂಬ್ಲಿ ಹಾಲ್, ಐಐಎಸ್‌ಸಿ, ಸಂಜೆ 5

ರಂಗ ರಂಗೋಲಿ ನಾಟಕೋತ್ಸವ: 'ಸುಯೋಧನ' ನಾಟಕ ಪ್ರದರ್ಶನ: ರಚನೆ ಮತ್ತು ನಿರ್ದೇಶನ: ಎಸ್. ವಿ. ಕೃಷ್ಣ ಶರ್ಮ, ಪ್ರಸ್ತುತಿ: ಸಂಧ್ಯಾ ಕಲಾವಿದರು, ಆಯೋಜನೆ: ಅಕಾಡೆಮಿ ಆಫ್ ಮ್ಯೂಸಿಕ್, ಸ್ಥಳ: ಚೌಡಯ್ಯ ಸ್ಮಾರಕ ಭವನ, ವಯ್ಯಾಲಿ ಕಾವಲ್, ಸಂಜೆ 6.30

ಹರಿನಾಮ ಸಂಕೀರ್ತನೆ: ಗಾಯನ: ಸಿ.ಆರ್. ವೈಷ್ಣವಿ, ಮೃದಂಗ: ಜಿ. ಲೋಕಪ್ರಿಯ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಬಾಲಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ, 10ನೇ ಮುಖ್ಯರಸ್ತೆ, ಡಿ ಬ್ಲಾಕ್, 2ನೇ ಹಂತ, ರಾಜಾಜಿನಗರ, ಸಂಜೆ 6.30

'ಪರಸಂಗದ ಗೆಂಡೆತಿಮ್ಮ' ನಾಟಕ ಪ್ರದರ್ಶನ: ರಂಗರೂಪ: ಎಂ. ಬೈರೇಗೌಡ, ಸಂಗೀತ: ದೇಸಿ ಮೋಹನ್, ನಿರ್ವಹಣೆ: ರಾಜು ರೂಪಾಂತರ, ನಿರ್ಮಾಣ ವಿನ್ಯಾಸ: ವಿ. ಗಂಗಾಧರ್, ಸಹ ನಿರ್ದೇಶನ: ಎನ್. ರಾಮಚಂದ್ರ, ನಿರ್ದೇಶನ: ಕೆ.ಎಸ್.ಡಿ.ಎಲ್. ಚಂದ್ರು, ಆಯೋಜನೆ: ರೂಪಾಂತರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ7

ಸಂಕ್ಷಿಪ್ತ ಸುದ್ದಿ

'ಸಂಘರ್ಷ ಸಮಾನತೆ'ಯ ದಿನ ಇದೇ 9ಕ್ಕೆ

ಬೆಂಗಳೂರು: ಕರ್ನಾಟಕ ದಲಿತ ಸಂಘರ್ಷ ಸಮಿತಿಯಿಂದ (ಅಂಬೇಡ್ಕರ್ ವಾದ) ಇದೇ 9ರಂದು ಬಿ. ಕೃಷ್ಣಪ್ಪ ಅವರ ಜನ್ಮ ದಿನವನ್ನು 'ಸಂಘರ್ಷ ಸಮಾನತೆಯ ದಿನ'ವನ್ನಾಗಿ ಆಚರಿಸಲಾಗುವುದು ಎಂದು ಸಮಿತಿಯ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಾರ್ಯಕ್ರಮವು ಜೆ.ಸಿ. ರಸ್ತೆಯ ಸರ್ ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ನಡೆಯಲಿದೆ. ಬಿ. ಕೃಷ್ಣಪ್ಪ ಅವರು ಶೋಷಿತ ಸಮುದಾಯಗಳ ಸ್ವಾಭಿಮಾನ ಮತ್ತು ಸಾಮಾಜಿಕ ಸಬಲೀಕರಣಕ್ಕೆ ದುಡಿಯುತ್ತಿದ್ದರು. ಸಮಸಮಾಜ ನಿರ್ಮಿಸುವುದಕ್ಕಾಗಿ ತಮ್ಮ ಇಡೀ ಜೀವನ ಸವೆಸಿದ್ದಾರೆ. ಇಂತಹ ನಾಯಕನ ಜನ್ಮದಿನವನ್ನು 'ಸಂಘರ್ಷ ಸಮಾನತೆಯ ದಿನ'ವನ್ನಾಗಿ ಆಚರಿಸಲಾಗುವುದು' ಎಂದರು.

ಸಚಿವರಾದ ಸತೀಶ್ ಜಾರಕಿಹೊಳಿ, ಎಚ್.ಸಿ. ಮಹದೇವಪ್ಪ, ಬಿ. ಕೃಷ್ಣಪ್ಪ ಟ್ರಸ್ಟ್‌ನ ಇಂದಿರಾ ಕೃಷ್ಣಪ್ಪ, ದಲಿತ ಮುಖಂಡ ರುದ್ರಪ್ಪ ಹನಗವಾಡಿ, ಉಪನ್ಯಾಸಕ ಸಿ.ಜಿ. ಲಕ್ಷ್ಮಿಪತಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಇಂದಿನಿಂದ ನೀರು ಪೂರೈಕೆ

ಬೆಂಗಳೂರು: ಕಾವೇರಿ 5ನೇ ಹಂತದ ಕಾಮಗಾರಿ ಕೊನೆ ಹಂತ ತಲುಪಿದ್ದು, ಜೂನ್ 7ರ ಮಧ್ಯಾಹ್ನದ ಬಳಿಕ ನೀರು ಪೂರೈಕೆಯಾಗಲಿದೆ ಎಂದು ಜಲಮಂಡಳಿ ತಿಳಿಸಿದೆ.

ಕಾವೇರಿ ನೀರು ಸರಬರಾಜು 5ನೇ ಹಂತದ ಯೋಜನೆಯ ಅನುಷ್ಠಾನಕ್ಕೆ ಸಂಪರ್ಕ ಸೇರಿ ಹಲವು ಕಾಮಗಾರಿಗಳನ್ನು ಗುರುವಾರ ಜಲಮಂಡಳಿ ವತಿಯಿಂದ ಕೈಗೊಳ್ಳಲಾಯಿತು. ಈ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿವೆ. ಶುಕ್ರವಾರ ಮಧ್ಯಾಹ್ನದ ಬಳಿಕ ನೀರು ಸರಬರಾಜು ಆಗಲಿದೆ ಎಂದು ಜಲಮಂಡಳಿ ಅಧ್ಯಕ್ಷ ಡಾ. ರಾಮ್‌ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ನಾಳೆ ಎಎಪಿ ಕಾರ್ಯಕಾರಿಣಿ

ಬೆಂಗಳೂರು: ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯ ಕಾರ್ಯಕಾರಿಣಿಯನ್ನು ಜೂನ್ 8ರಂದು ಆಯೋಜಿಸಲಾಗಿದೆ. ಕರ್ನಾಟಕದ ಉಸ್ತುವಾರಿ ದಿಲೀಪ್ ಪಾಂಡೆ, ರಾಷ್ಟ್ರೀಯ ಜಂಟಿ ಕಾರ್ಯದರ್ಶಿ ಪೃಥ್ವಿ ರೆಡ್ಡಿ ಹಾಗೂ ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಅವರು ಭಾಗವಹಿಸಲಿದ್ದಾರೆ ಎಂದು ಎಎಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸಂಚಿತ್ ಸಹಾನಿ ತಿಳಿಸಿದ್ದಾರೆ.

ನಗರದ ಯುವಿಸಿಇ ಅಲುಮ್ನಿ ಅಸೋಸಿಯೇಷನ್‌ನಲ್ಲಿ ಬೆಳಿಗ್ಗೆ 9ರಿಂದ ಕಾರ್ಯಕಾರಿಣಿ ನಡೆಯಲಿದ್ದು, ಪ್ರಸಕ್ತ ರಾಜಕೀಯ ಬೆಳವಣಿಗೆ ಹಾಗೂ ಕರ್ನಾಟಕದಲ್ಲಿ ಪಕ್ಷದ ಮುಂದಿನ ರೂಪುರೇಷೆ ಕುರಿತಾಗಿ ಚರ್ಚೆ ನಡೆಸಲಾಗುವುದು. ಪಕ್ಷದ ರಾಜ್ಯ ಕಾರ್ಯಕಾರಿಣಿ ಸದಸ್ಯರು, ರಾಜ್ಯ ಸಮಿತಿಯ ಪದಾಧಿಕಾರಿಗಳು, ವಿವಿಧ ಘಟಕಗಳ ರಾಜ್ಯ ಅಧ್ಯಕ್ಷರು, ಜಿಲ್ಲಾ ಘಟಕಗಳ ಅಧ್ಯಕ್ಷರು ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/ಇಪಿಸಿ/77/2023 ದಿನಾಂಕ : 13-10-2023ರ ಅನ್ವಯ ಕರೆಯಲಾಗಿದ್ದ ಮತ್ತು ಕೆಳಗೆ ಸೂಚಿಸಿದಂತೆ ಮುಕ್ತಾಯವಾಗಬೇಕಿದ್ದ ಟೆಂಡರ್‌ನ್ನು ರದ್ದುಪಡಿಸಲಾಗಿದೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಬಾಗಲಕೋಟೆ – ಕುಡಚಿ ಹೊಸ ಮಾರ್ಗ ಯೋಜನೆ (142 ಕಿಮೀ) ಅಡಿಯಲ್ಲಿ 28.5 ಕಿಮೀ ಉದ್ದಕ್ಕಾಗಿ ಜಗದಾಳ (ಹೊರತುಪಡಿಸಿ) ಮತ್ತು ಸುಟ್ಟಟ್ಟಿ (ಹೊರತುಪಡಿಸಿ) ನಡುವೆ ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್ ಹಾಗೂ ವಿದ್ಯುತ್ ಕಾಮಗಾರಿಗಳನ್ನು ಒಳಗೊಂಡಂತೆ ಹೊಸ ಬ್ರಾಡ್ ಗೇಜ್ ಮಾರ್ಗ ಟ್ರ್ಯಾಕ್‌ನ ನಿರ್ಮಾಣ (ಟೆಂಡರ್ ಉಲ್ಲೇಖ ಸಂ. ಬಿಜಿಕೆ-ಕೆಯುಡಿ-ಇಪಿಸಿ-02)	ರೂ. 423,36,92,709/-

ಬಿಡ್ ಮುಕ್ತಾಯದ ದಿನಾಂಕ

ಹಾಲಿ ಇರುವ ದಿನಾಂಕ	ಪರಿಷ್ಕೃತ ದಿನಾಂಕ
14-06-2024 (15:00 ಗಂಟೆ)	ಟೆಂಡರ್ ರದ್ದುಪಡಿಸಲಾಗಿದೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು ಬೆಂಗಳೂರು ದಂಡು

ಪಿಯುಬಿ/138/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024-25

South Western Railway - SWR | SWRRLY | SWRRLY

Government of Karnataka
Water Resource Department (Minor Irrigation)
Office of the Executive Engineer, MI & GWD Division, Admin Block, NH-75 Road, Near Café Coffee Day, Narsapura-563133, Kolar taluk & District.
E-Mail:- eemidklr@rediffmail.com, eemigwddkolar@gmail.com Landline No:- 08152-200049

No:EE/MI/Kol/TA/AE/Quotation Invitation/838/2024-25/ Dtd:06-06-2024

NOTIFICATION FOR QUOTATIONS

"**Name of work:** Operation and maintenance of K & C Valley (Lifting / Pumping 400 MLD Secondary treated water from K and C Valley STP & Bellandoor STP to Narsapura tank and onwards to fill 126 tanks in Kolar Distict and Chintamani taluk in Chickballapur District) (Phase-I) for 5 years project"

Quotations are invited from the reputed companies through email, by post or by hand to the address of under signed for the following Man power rates (Excluding GST) to prepare detailed project report of the above work.

Last date and time for quotation submission: 13/06/2024 upto 04:00 PM

Sl No	Particulars of the items	Qty	Unit	Rates
1	**Electrical Engineer** - Providing Graduate Engineer in Electrical (Skilled with minimum 5 years of experience) in Operation & Maintenance. Should have sufficient experience in related field, good health condition and adequate educational / technical qualification in addition to possessing best knowledge, abilities and skills.	01	Per month	
2	**ICA / SCADA Engineer**- Providing ICA / SCADA Engineer -Graduate in Instrumentation- (Skilled with minimum 5 years of experience) in Operation & Maintenance. Should have sufficient experience in related field, good health condition and adequate educational / technical qualification in addition to possessing best knowledge, abilities and skills.	01	Per month	
3	**Foreman Electrical** - Providing Foreman Electrical-Diploma / ITI-(Skilled with minimum 5 years of experience) in Operation & Maintenance. Should have sufficient experience in related field, good health condition and adequate educational / technical qualification in addition to possessing best knowledge, abilities and skills.	01	Per month	
4	**Foreman Mechanical** - Providing Foreman Mechanical - Diploma / ITI-(Skilled with minimum 5 years of experience) in Operation & Maintenance. Should have sufficient experience in related field, good health condition and adequate educational / technical qualification in addition to possessing best knowledge, abilities and skills.	01	Per month	
5	**Foreman Instrumentation** Providing Foreman Instrumentation - Diploma-(Skilled with minimum 5 years of experience) in Operation & Maintenance. Should have sufficient experience in related field, good health condition and adequate educational / technical qualification in addition to possessing best knowledge, abilities and skills.	01	Per month	
6	**Pumping Station Supervisor** - Providing Pumping Station Supervisor-Graduate Engineer (Mech/ Electrical-(Skilled with minimum 5 years of experience) in Operation & Maintenance. Should have sufficient experience in related field, good health condition and adequate educational / technical qualification in addition to possessing best knowledge, abilities and skills.	01	Per month	
7	**Shift incharge** - Providing Shift in charge-Diploma (Elec / Mech)-(Skilled with minimum 5 years of experience) in Operation & Maintenance. Should have sufficient experience in related field, good health condition and adequate educational / technical qualification in addition to possessing best knowledge, abilities and skills.	01	Per month	
8	**Electrician** - Providing Electrician-ITI (Elect) (Skilled with minimum 3 years of experience) in Operation & Maintenance. Should have sufficient experience in related field, good health condition and adequate educational / technical qualification in addition to possessing best knowledge, abilities and skills	01	Per month	
9	**Ex Army Jawans** -Providing & Supplying Security Gaurds (Gravity Nalas)-Ex Army Jawans-(Skilled with experience) Registered at Association, the rates of manpower including labour cess, ESI/PF/ Insurance etc., with uniform & safety gears, inclusive of weekly rest.	01	Per month	
10 (A)	Providing & Supplying Vehicle with fuel (2500 km per vehicle X 4 vehicles = 10,000 Km) along with driver for Jeep/ Camper/ bolero) including three shifts and all days of the month travelling Bengaluru Urban, Bengaluru Rural, Kolar & Chikkabalapura District including toll fee. (Road tax and Insurance) Rates of manpower including labour cess, ESI/PF/Insurance etc., with uniform & safety gears, inclusive of weekly rest.	04	Per month	
10(B)	Above 10,000 Km additional rate per Km		Per Km	

Note:- Supervision of all 06 Pump Houses comes under K & C Valley project (Phase-1).
Working locations are: K.C.valley STP, Bellanduru STP in Bengaluru Urban District, Narasapura Pump House, Holali Pump House, Shivarapatna Pump House, Jannaghatta Pump House in Kolar District.
Rates of professional manpower including labour cess, ESI/PF/Insurance etc., with uniform & safety gears, inclusive of weekly rest.
Location of pumphouses are at existing STP in Bengaluru (BBMP limit) and at tanks in Kolar District
Following Condition no: 01 to 06 applicable to above 01 to 08 particular items.
1) Knowledge of total water pumping system of similar capacity, unit operation and flow control system,
2) Knowledge of the method, materials and equipment of water pumping station operation.
3) Knowledge of operation, maintenance, servicing structures pumping machineries and all the electrical, mechanical, electronic equipment, machineries, piping, cabling etc within the battery limit off the contract.
4) Ability is to make repairs and / or adjustments to water pumping equipment and to keep records and repair reports.
5) Ability to read and interpret gauges and recording devices used in the pumping station.
6) Ability to work efficiently with other.
"More details can be had from the office of the undersigned (Phone: 08152-200049 Email:eemigwddkolar@gmail.com)

Executive Engineer, Minor Irrigation & Ground Water, Development Division, Kolar.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

SRI-AYYAPPAN EDUCATIONAL INSTITUTIONS JAYAMAHAL-BANGALORE-46 (Phone: 23433008) WANTED TRAINED GRADUATE TEACHERS: For KANNADA, SOCIAL-SCIENCE, "IMMEDIATE APPOINTMENT"

RENTAL PROPERTIES

Accommodation Available

Commercial

OFFICE SPACE Available for rent. 6500 sqft (3250 + 3250) Located Near Double road, Lalbagh Gate next to HMG. Partially Furnished With Generator back up and Reserved Parking Space. Call: 9844005254.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

REAL ESTATE BUYING

Sites

Nagarabhavi

WANTED SITES 30X40 40X60 50X80 NAGARBHAVI RAJAJINAGAR HOUSING Co. OPERATIVE SOCIETY VISHWESHWARAIAH LAYOUT NGEF:8105688602

REAL ESTATE SELLING

Sites

Kempegowda Layout

BDA SITE Nadaprabhu Kempegowda Layout, Ist Block, adjacent 300 Feet Road, 30x40 East facing,Call: 9448793428

KEMPEGOWDA LAYOUT-7th Block 'A' Sector- 30x40 BDA Site (West) Sale. 75 Lacs. Contact: 98444-14188

Rajajinagar

30X40 RAJAJINAGAR 23K, 40X60 Malleshwaram 30K N.E.W.S Facing FINE HOMES REALTORS Buy/ Sell @ 2%: 8884255563

PERSONAL

Change of Name

CHANGE OF NAME
I, Army No. JC311550F, Rank: Sub Maj. P. Shanmugam, Residing at Unit- Depot BN MEG and Center, Bangalore-42, declare that in my service record my son's name is wrongly mentioned as S.T.NAGENDRA correct name is NAGENDRA.S.T vide affidavit dated 05/06/2024, before notary Prasad Shetty K.B, Bangalore.

CHANGE OF NAME
I, Army No. JC311550F, Rank: Sub Maj. P. Shanmugam, Residing at Unit- Depot BN MEG and Center, Bangalore-42, declare that in my service record my daughter's name is wrongly mentioned as S. POOJA SHANMATHI correct name is POOJA SRI SHANMATHI.S vide affidavit dated 05/06/2024, before notary Prasad Shetty K.B, Bangalore.

CONNECT

Handloom INDIA
An exhibition cum sale of natural fibre silk
ಪ್ರಮಾಣೀಕೃತ ಅಸಲಿ ರೇಷ್ಮೆ ಮತ್ತು ನೂಲಿನ, ಹಸ್ತದಿಂದ ತಯಾರಿಸಲಾದ ಭಾರತದಾದ್ಯಂತದ ಎಲ್ಲಾ ಉತ್ಪಾದಕರ ಉತ್ಪನ್ನಗಳು ಒಂದೇ ಸೂರಿನ ಅಡಿಯಲ್ಲಿ
ಕೊನೆಯ 3 ದಿನಗಳು
ಪ್ರತಿದಿನ ಬೆಳಗ್ಗೆ 11 ರಿಂದ ರಾತ್ರಿ 9 ಗಂಟೆ
ಸ್ಥಳ
ಶ್ರೀನಿವಾಸ ಸಾಗರ ಕಲ್ಯಾಣ ಮಂಟಪ ಅಶೋಕ ಸ್ತಂಭದ ಹತ್ತಿರ, 2ನೇ ಬ್ಲಾಕ್, ಜಯನಗರ, ಬೆಂಗಳೂರು-11
ಪ್ರಮಾಣೀಕೃತ ಅಸಲಿ ರೇಷ್ಮೆ ಉತ್ಪನ್ನಗಳ ಉತ್ಪಾದಕರೆಲ್ಲ ಸೇರಿ ಒಂದೇ ಸೂರಿನ ಅಡಿಯಲ್ಲಿ ತಮ್ಮ ಬನಾರಸಿ, ಕಾಂಚಿಪುರಂ, ಬಿಹಾರ್, ಟಸ್ಸಾರ್ ಮತ್ತು ಮಟ್ಕಾ ಸಿಲ್ಕ, ಚತ್ತೀಸ್‌ಗಢ್ ಕೊಸಾ, ಗುಜರಾತ್ ಪಟೋಲಾ ಮತ್ತು ಬಂಧಿನಿ, ಪಶ್ಚಿಮ ಬಂಗಾಳದ ಬಯಾಲು, ಬಲೂಚರಿ, ಢಕಾಯಿ, ಜಾಮದನಿ, ಕಾಂತಾ ಮತ್ತು ಹ್ಯಾಂಡ್ ಪೈಂಟೆಡ್, ಧರ್ಮಾವರಂ, ಚಾಂದೇರಿ, ಎರಿ (ಅಹಿಂಸಾ), ಹ್ಯಾಂಡ್‌ಬ್ಲಾಕ್ ಪ್ರಿಂಟ್, ಹ್ಯಾಂಡ್ ಕಲಾಂಕರಿ, ಡ್ರೆಸ್ ಮಟೀರಿಯಲ್ & ಇನ್ನೂ ಅನೇಕ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಏರ್ಪಡಿಸಿದ್ದಾರೆ.
ENTRY FREE • M: 9412258826 • ALL DEBIT & CREDIT CARDS ACCEPTED

CHANGE OF NAME
I, MEGHANA A, residing at # 49, MIG 1st Stage, KHB Colony, 3rd Main Road, Basaveshwar Nagar, Bangalore-560079 have changed my name to MEGHNA A vide affidavit dated 04.06.2024 before notary M.K. Devaki, Bangalore. Henceforth I shall be called as MEGHNA A only.

I, RANVIT, Residing at #159, 4th cross, 8th main Bhuvaneshwarinagar, T.Dasarahalli Bangalore-57 have changed my name as RANVIT MOHAN, vide affidavit dated 06/06/2024 before Notary Kodi Nagappaya, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

Congratulations
ARUNACHALAM NAGARAJAN
EX INDIAN AIRFORCE, KOLLEGAL

IS PROUD TO SHARE THAT HIS DAUGHTER FORMER ANO, FLT. LT.
DR. N VANI SHREE
HAS TAKEN CHARGE AS PRINCIPAL, JSS LAW COLLEGE, MYSURU FROM 01.06.2024
BEST WISHES FROM: FRIENDS AND RELATIVES

ಶ್ರೀ ಸರ್ಪಭೂಷಣ ಶಿವಯೋಗಿಗಳ ಮಠದ ಟ್ರಸ್ಟ್‌ನ
ಎಲ್ ಕಾಂಪ್ಲೆಕ್ಸ್ ಮತ್ತು ಗೀತಾ ಕಾಂಪ್ಲೆಕ್ಸ್, ಕೆಜಿ ರಸ್ತೆ, ಬೆಂಗಳೂರು.
ಖಾಲಿ ಇರುವ ವಾಣಿಜ್ಯ ಮಳಿಗೆಗಳು ಬಾಡಿಗೆಗೆ ದೊರೆಯುತ್ತವೆ

ಕ್ರ. ಸಂ.	ಎಲ್ ಕಾಂಪ್ಲೆಕ್ಸ್	ಪ್ರದೇಶ (ಚ.ಅ.)	ದರ ಪ್ರತಿ ಚ.ಅ.
1.	Cellar. 2	121 Sft	₹ 35/-
2.	Cellar. 3	397 Sft	₹ 35/-
3.	Cellar. 4	383 Sft	₹ 35/-
4.	F.F. 01	280 Sft	₹ 57/-
5.	F.F. 06	254 Sft	₹ 57/-
	ಗೀತಾ ಕಾಂಪ್ಲೆಕ್ಸ್		
1.	G.F. 12,13 & 14	330 Sft	₹ 70/-
2.	F.F. 01	415 Sft	₹ 60/-
3.	F.F. 12	264 Sft	₹ 60/-
4.	F.F. 11	272 Sft	₹ 60/-
5.	F.F. 13	299 Sft	₹ 60/-

ಹೆಚ್ಚಿನ ವಿವರಗಳಿಗೆ ಆಡಳಿತಾಧಿಕಾರಿಗಳನ್ನು ಸಂಪರ್ಕಿಸಬಹುದು.
080-22879777 / 9945352645
e.mail : ssbmtrust@gmail.com

DH Classifieds More value, more impact | ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com BOOK NOW
Book your ad with us now! For more details contact:
+91 9845114560 | +91 9901641752 | 080-45557163/164
*Conditions apply

ಖಾತೆದಾರರ ಪತ್ತೆ ನಂತರ ನಿಗಮದ ಹಣ ಮುಟ್ಟುಗೋಲಿಗೆ ಸಿದ್ಧತೆ

18 ಖಾತೆಗಳ ಮೂಲ ಪತ್ತೆಗೆ ತನಿಖೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಆರ್‌ಬಿಎಲ್ ಬ್ಯಾಂಕ್‌ನ 18 ಖಾತೆಗಳಿಗೆ ಹಣ ವರ್ಗಾವಣೆ
- ಬಂಧಿತರ ಮೊಬೈಲ್ ಫೋನ್ ಸೈಬರ್ ಲ್ಯಾಬ್‌ಗೆ ವರ್ಗಾವಣೆ
- ಬಂಧಿತರ ಪೊಲೀಸ್ ಕಸ್ಟಡಿ ಅವಧಿ ವಿಸ್ತರಣೆ

ಬೆಂಗಳೂರು: 'ಕರ್ನಾಟಕ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ನಿಗಮದ ₹94.73 ಕೋಟಿ ಅಕ್ರಮ ವರ್ಗಾವಣೆ' ಪ್ರಕರಣದ ತನಿಖೆ ಚುರುಕುಗೊಳಿಸಿರುವ ಎಸ್‌ಐಟಿ ಅಧಿಕಾರಿಗಳು, ಹಣ ವರ್ಗಾವಣೆ ಆಗಿರುವ ಖಾತೆಗಳ ಪತ್ತೆಗೆ ಮುಂದಾಗಿದ್ದಾರೆ.

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಎಂ.ಜಿ ರಸ್ತೆ ಶಾಖೆಯಲ್ಲಿದ್ದ ₹187 ಕೋಟಿ ಪೈಕಿ ಬ್ಯಾಂಕಿನ ಖಾತೆಯಿಂದ ₹94.73 ಕೋಟಿ ಬೇರೆ ಬೇರೆ ಖಾತೆಗೆ ವರ್ಗಾವಣೆಯಾಗಿತ್ತು. ಅದರಲ್ಲಿ ಹೈದರಾಬಾದ್‌ನ ಆರ್‌ಬಿಎಲ್ ಬ್ಯಾಂಕ್ 18 ಖಾತೆಗಳಿಗೆ ಸುಮಾರು ₹89 ಕೋಟಿ ವರ್ಗಾವಣೆಯಾಗಿದೆ. ಈ ಖಾತೆಗಳು ಯಾರ ಹೆಸರಿನಲ್ಲಿವೆ ಎಂಬುದನ್ನು ಪತ್ತೆ ಮಾಡಲು ತನಿಖಾಧಿಕಾರಿಗಳು ಮುಂದಾಗಿದ್ದಾರೆ.

'ಮೊದಲು ಖಾತೆದಾರರನ್ನು ಪತ್ತೆ ಹಚ್ಚಲಾಗುವುದು. ನಂತರ, ನಿಗಮದ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಬಂಧಿತರಾಗಿರುವ ನಿಗಮದ ಹಿಂದಿನ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ.) ಜೆ.ಜಿ.ಪದ್ಮನಾಭ ಹಾಗೂ ಲೆಕ್ಕಾಧಿಕಾರಿ ಪರುಶುರಾಮ ದುರ್ಗಣ್ಣನವರ ಅವರ ಮೊಬೈಲ್‌ಗಳನ್ನು ಸೈಬರ್ ಲ್ಯಾಬ್‌ಗೆ ರವಾನೆ ಮಾಡಲಾಗಿದೆ. ಲ್ಯಾಬ್ ವರದಿ ಬಂದ ಮೇಲೆ ಇಬ್ಬರು ಆರೋಪಿಗಳು ನಡೆಸಿದ್ದ ಅಕ್ರಮ ಗೊತ್ತಾಗಲಿದೆ. ಸಾಮಾಜಿಕ ಜಾಲತಾಣಗಳ ಮೂಲಕ ಯಾರೊಂದಿಗೆ ವ್ಯವಹಾರ ನಡೆಸಿದ್ದರು, ಯಾರ ಸಂಪರ್ಕದಲ್ಲಿದ್ದರು ಎಂಬುದು ತಿಳಿಯಲಿದೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

'ಕಚೇರಿ ಸೇರಿದಂತೆ ಹಲವು ಕಡೆಯ ಸಿಸಿ ಟಿವಿ ಕ್ಯಾಮೆರಾಗಳ ದೃಶ್ಯಾವಳಿ ಪಡೆಯಲಾಗಿದೆ. ದತ್ತಾಂಶಗಳನ್ನು ಪಡೆದು ಅದರಲ್ಲಿ ಕಂಡುಬರುವ ವ್ಯಕ್ತಿಗಳನ್ನು ಪತ್ತೆ ಹಚ್ಚಲಾಗುವುದು' ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

ಮತ್ತೆ ಆರು ದಿನ ಕಸ್ಟಡಿಗೆ: ಆರೋಪಿಗಳಾದ ಜೆ.ಜಿ ಪದ್ಮನಾಭ್, ಲೆಕ್ಕಾಧಿಕಾರಿಯಾಗಿದ್ದ ಪರಶುರಾಮ್ ಜಿ. ದುರ್ಗಣ್ಣನವರ ಅವರನ್ನು ಎಸ್‌ಐಟಿ ಅಧಿಕಾರಿಗಳು ಗುರುವಾರ ಸಂಜೆ 3ನೇ ಎಸಿಎಂಎಂ ನ್ಯಾಯಾಲಯಕ್ಕೆ ಹಾಜರು ಪಡಿಸಿದರು. ಹೆಚ್ಚಿನ ವಿಚಾರಣೆ ಜೂನ್ 13ರ ವರೆಗೆ ಕಸ್ಟಡಿಗೆ ನಿಡುವಂತೆ ಮನವಿ ಮಾಡಿದರು. ನ್ಯಾಯಾಲಯ ಆರು ದಿನ ಕಸ್ಟಡಿಗೆ ನೀಡಿ ಆದೇಶಿಸಿದೆ.

ಮುಖಾಮುಖಿ ವಿಚಾರಣೆ: ಆರೋಪಿಗಳಾದ ಜೆ.ಜಿ.ಪದ್ಮನಾಭ್, ಪರಶುರಾಮ್ ಜಿ. ದುರ್ಗಣ್ಣನವರ, ಹೈದರಾಬಾದ್‌ನ ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ (ಎಫ್‌ಎಫ್‌ಸಿಸಿಎಸ್‌ಎಲ್) ಅಧ್ಯಕ್ಷ ಸತ್ಯನಾರಾಯಣ್, ನೆಕ್ಕಂಟಿ ನಾಗರಾಜ್ ಹಾಗೂ ಅವರ ಬಾಮೈದ ನಾಗೇಶ್ವರರಾವ್ ಅವರನ್ನು ಮುಖಾಮುಖಿ ಕೂರಿಸಿ ವಿಚಾರಣೆ ನಡೆಸಲಾಗಿದೆ. ಹಣವನ್ನು ಯಾರು ವರ್ಗಾವಣೆ ಮಾಡಲು ಹೇಳಿದರು ಎಂಬ ಪ್ರಶ್ನೆ ಕೇಳಲಾಗಿದೆ. ತಾಂತ್ರಿಕ ಸಾಕ್ಷ್ಯಾಧಾರಗಳನ್ನು ತೋರಿಸಿ ಪ್ರಶ್ನಿಸಲಾಗಿದೆ ಎಂದು ಮೂಲಗಳು ಹೇಳಿವೆ.

'ಮುಖ ಉಳಿಸಿಕೊಳ್ಳಲು ಸಿ.ಎಂ ನಾಟಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಚಿವ ನಾಗೇಂದ್ರ ಅವರ ರಾಜೀನಾಮೆ ಮೊದಲೇ ಪಡೆಯಬೇಕಿತ್ತು. ರಾಜೀನಾಮೆ ಕೇಳಿಲ್ಲ ಎನ್ನುವುದು ಮುಖ ಉಳಿಸಿಕೊಳ್ಳಲು ಮುಖ್ಯಮಂತ್ರಿ ಮಾಡುತ್ತಿರುವ ನಾಟಕ. ಹಗರಣದ ಹಿಂದೆ ದೊಡ್ಡವರ ಪಾತ್ರ ಇರುವ ಕಾರಣಕ್ಕೇ ಸಚಿವರ ರಾಜೀನಾಮೆ ಕೇಳುವ ಧೈರ್ಯ ಅವರಿಗೆ ಇರಲಿಲ್ಲ' ಎಂದು ಜೆಡಿಎಸ್ ಸಂಸದ ಎಚ್‌.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

'ಕಳೆದ ಮಾರ್ಚ್‌ನಲ್ಲೇ ಹಗರಣ ನಡೆದಿದೆ. ಇವರೆಲ್ಲರೂ ಸೇರಿ ಮುಚ್ಚಿಟ್ಟಿದ್ದಾರೆ. ಅಧಿಕಾರಿ ಸಾವಿನಿಂದ ಬಯಲಿಗೆ ಬಂದಿದೆ. ತೆಲಂಗಾಣ ಚುನಾವಣೆಗೆ ಹಣ ವರ್ಗಾವಣೆ ಆಗಿರುವ ಸಾಧ್ಯತೆ ಇದೆ. ಹಗರಣದ ಒಳಹೊಕ್ಕು ತನಿಖೆ ನಡೆಸಬೇಕು' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಎಚ್‌.ಡಿ. ಕುಮಾರಸ್ವಾಮಿ

'ದೆಹಲಿಗೆ ಹೋಗಿ ಸಚಿವನಾಗುವುದಕ್ಕಿಂತ ರಾಜ್ಯದ ಸಮಸ್ಯೆಗೆ ಪರಿಹಾರ ದೊರಕಿಸಲು ಪ್ರಯತ್ನಿಸುವೆ. ನೀರಾವರಿ ವಿಷಯದಲ್ಲಿ ನ್ಯಾಯ ಪಡೆಯಬೇಕು. ಕೇಂದ್ರ ಸರ್ಕಾರಕ್ಕೆ ಮುಜುಗರ ಮಾಡುವುದಿಲ್ಲ. ಮೈತ್ರಿ ಧರ್ಮ ಪಾಲನೆ ಮಾಡುತ್ತೇನೆ. ರಾಜ್ಯದ ಎಲ್ಲಾ ಸಂಸದರೂ ಒಟ್ಟಾಗಿ ಕೆಲಸ ಮಾಡುತ್ತೇವೆ. ಸಮಸ್ಯೆಗೆ ಪರಿಹಾರ ಕಂಡುಕೊಳ್ಳುತ್ತೇವೆ' ಎಂದರು.

ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಗೆ ಇನ್ನೂ ಆರು ತಿಂಗಳ ಸಮಯವಿದೆ. ಈ ಕುರಿತು ಸಿ.ಪಿ. ಯೋಗೇಶ್ವರ್ ಜತೆ ಚರ್ಚಿಸಿದ ನಂತರ ತೀರ್ಮಾನ ಮಾಡುತ್ತೇವೆ ಎಂದರು.

ವಿಧಾನ ಪರಿಷತ್ ಚುನಾವಣೆಯಲ್ಲಿ ಶಿಕ್ಷಕರ ಎರಡೂ ಕ್ಷೇತ್ರಗಳನ್ನು ಜೆಡಿಎಸ್ ಉಳಿಸಿಕೊಂಡಿದೆ. ಮೈತ್ರಿಯ ಶಕ್ತಿ ಮತ್ತೊಮ್ಮೆ ಸಾಬೀತಾಗಿದೆ. ಮುಖ್ಯಮಂತ್ರಿ ತವರು ಜಿಲ್ಲೆಯಲ್ಲೇ ಕಾಂಗ್ರೆಸ್ ಅಭ್ಯರ್ಥಿ ಸೋಲು ಕಂಡಿದ್ದಾರೆ. ಮುಂದಿನ ದಿನಗಳಲ್ಲಿ ಅವರ ಅಹಂಕಾರ ಇಳಿಯಲಿದೆ ಎಂದರು.

'ಬಡ್ಡಿ ಆಸೆಗೆ ಅಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ರೀತಿಯ ಹಣ ಅಕ್ರಮ ವರ್ಗಾವಣೆ ಪ್ರಕರಣಗಳು ಬಡ್ಡಿ ಆಸೆಗೆ ನಡೆಯುತ್ತಿವೆ. ಈ ವಿಚಾರದಲ್ಲಿ ಮುಖ್ಯಮಂತ್ರಿ ಮತ್ತು ಆರ್ಥಿಕ ಇಲಾಖೆಯವರು ಕೆಲವು ಸೂಚನೆಗಳನ್ನು ನೀಡಿದ್ದಾರೆ. ಎಲ್ಲ ನಿಗಮಗಳ ಅಧ್ಯಕ್ಷರನ್ನು ಕರೆದು ಚರ್ಚಿಸಲಾಗುವುದು' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ರಾಜೀನಾಮೆ ನೀಡುವಂತೆ ಸಚಿವ ನಾಗೇಂದ್ರ ಅವರಿಗೆ ಮುಖ್ಯಮಂತ್ರಿ ಸೂಚಿಸಿದ್ದಾರೆ ಎನ್ನುವ ವರದಿಗಳು ಸುಳ್ಳು. ಪಕ್ಷಕ್ಕೆ ಮುಜುಗರ ಆಗುವುದು ಬೇಡ ಎನ್ನುವುದು ನಾಗೇಂದ್ರ ಅವರ ಅಭಿಲಾಷೆ. ಆದ ಕಾರಣ ರಾಜೀನಾಮೆ ನೀಡುತ್ತೇನೆಂದು ನಮಗೆ ಹೇಳಿದ್ದರು' ಎಂದರು.

'ನಾಗೇಂದ್ರ ರಾಜೀನಾಮೆ: ಬಿಜೆಪಿ ಹೋರಾಟಕ್ಕೆ ಸಿಕ್ಕ ಜಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿ ಹೋರಾಟದ ಹಾದಿ ತುಳಿಯುತ್ತಿದ್ದಂತೆ ಭಂಡತನಕ್ಕೆ ಜೋತು ಬಿದ್ದಿದ್ದ ಕಾಂಗ್ರೆಸ್ ಸರ್ಕಾರ ಕೊನೆಗೂ ಸಚಿವ ಬಿ.ನಾಗೇಂದ್ರ ಅವರ ರಾಜೀನಾಮೆ ಪಡೆದಿದೆ. ಪರಿಶಿಷ್ಟ ಪಂಗಡ ಕಲ್ಯಾಣ ಕಾರ್ಯಕ್ಕೆ ಬಗೆದಿದ್ದ ದ್ರೋಹದ ವಿರುದ್ಧ ಬಿಜೆಪಿ ಹೋರಾಟಕ್ಕೆ ಸಿಕ್ಕ ಜಯ ಇದು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ.

ಈ ಕುರಿತು 'ಎಕ್ಸ್' ಮೂಲಕ ಪ್ರತಿಕ್ರಿಯಿಸಿರುವ ಅವರು, 'ಸದ್ಯ ನಾಗೇಂದ್ರ ರಾಜೀನಾಮೆ ಮೊದಲ ಘಟ್ಟವಾಗಿದ್ದು, ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಲೂಟಿಯಾದ ₹187 ಕೋಟಿ ಹಗರಣದಲ್ಲಿ ಇನ್ನಷ್ಟು ಪ್ರಭಾವಿಗಳ ಕೈವಾಡ ಅಡಗಿರುವ ಸಾಧ್ಯತೆಯನ್ನು ನಿರಾಕರಿಸಲಾಗದು. ಈ ನಿಟ್ಟಿನಲ್ಲಿ ಪಾರದರ್ಶಕ ತನಿಖೆಯನ್ನು ಬಿಗಿಗೊಳಿಸಬೇಕಾಗಿದೆ' ಎಂದು ಒತ್ತಾಯಿಸಿದ್ದಾರೆ.


ವಿಜಯೇಂದ್ರ

'ತನಿಖೆ ಕಾರ್ಯ ಚುರುಕುಗೊಳ್ಳಲು ರಾಜ್ಯ ಸರ್ಕಾರ ಪೂರ್ಣ ಸಹಕಾರ ನೀಡುವುದು ನೈತಿಕ ಹೊಣೆಯಾಗಿದೆ. ಹಗರಣದ ಸತ್ಯಾಂಶ ಪೂರ್ಣ ಪ್ರಮಾಣದಲ್ಲಿ ಹೊರಬಂದು ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗುವವರೆಗೂ ಬಿಜೆಪಿ ಹೋರಾಟ ನಿಲ್ಲದು' ಎಂದಿದ್ದಾರೆ.

'ಹಗರಣದಲ್ಲಿ ಬಂಧನಕ್ಕೆ ಒಳಗಾಗಿರುವ ನೆಕ್ಕುಂಟಿ ನಾಗರಾಜ್ ಅವರಿಗೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಸಚಿವ ರಾಮಲಿಂಗಾರೆಡ್ಡಿ ಅವರ ಜತೆ ನಿಕಟವಾದ ನಂಟು ಇದ್ದು, ಸರ್ಕಾರದಲ್ಲಿ ಬಹಳ ಪ್ರಭಾವಿ ವ್ಯಕ್ತಿ' ಎಂದು ಬಿಜೆಪಿಯ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಆರೋಪಿಸಿದ್ದಾರೆ.

'ವರ್ಕ್ ಬಿಲ್ ಮಾಡ್ಯೂಲ್' ಪ್ರಕ್ರಿಯೆಗೆ ಆನ್‌ಲೈನ್

ಬಿಲ್ ಪಾವತಿ ಡಿಜಿಟಲೀಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುತ್ತಿಗೆದಾರರು ಬಿಲ್ ಪಾವತಿ ವಿಳಂಬ ಹಾಗೂ ಹಲವು ಟೇಬಲ್‌ಗಳಲ್ಲಿ ಕಡತಗಳ ಚಲನೆಯನ್ನು ನಿಯಂತ್ರಿಸಲು ಬಿಬಿಎಂಪಿ 'ವರ್ಕ್ ಬಿಲ್ ಮಾಡ್ಯೂಲ್' ತಂತ್ರಾಂಶವನ್ನು ಅನುಷ್ಠಾನಗೊಳಿಸುತ್ತಿದ್ದು, ಎಲ್ಲ ಪ್ರಕ್ರಿಯೆಯೂ ಡಿಜಿಟಲ್‌ನಲ್ಲೇ ನಡೆಯಲಿದೆ.

ಗುತ್ತಿಗೆದಾರರು ಕಾಮಗಾರಿ ನಿರ್ವಹಿಸಿದ ಬಿಲ್‌ಗಳ ಎಲ್ಲ ದಾಖಲೆಗಳನ್ನು ಇಂಟಿಗ್ರೇಟೆಡ್ ಫೈನಾನ್ಶಿಯಲ್ ಮ್ಯಾನೇಜ್‌ಮೆಂಟ್ ಸಿಸ್ಟಮ್ (ಐಎಫ್‌ಎಂಎಸ್) – 'ವರ್ಕ್ ಬಿಲ್ ಮಾಡ್ಯೂಲ್' ಮೂಲಕ ಆನ್‌ಲೈನ್‌ನಲ್ಲೇ ಸಲ್ಲಿಸಬೇಕು. ಇದಾದ ನಂತರ ವಿಭಾಗೀಯ ಕಾರ್ಯಪಾಲಕ ಎಂಜಿನಿಯರ್ ದಢೀಕರಿಸಿದ ಮೇಲೆ, ವಲಯವಾರು ಪ್ರೀ-ಆಡಿಟ್‌ನ ಕಾರ್ಯಪಾಲಕ ಎಂಜಿನಿಯರ್ ದಾಖಲೆ ಪರಿಶೀಲಿಸಿದರೆ ಸಿಬಿಆರ್ ಸೃಷ್ಟಿಯಾಗುತ್ತದೆ. ಜೇಷ್ಠತೆ ಆಧಾರದ ಮೇಲೆ ವಲಯ ಮುಖ್ಯ ಆಯುಕ್ತರು ಬಿಲ್ ಪಾವತಿಗೆ ಹಣಕಾಸು ವಿಭಾಗದ ಮುಖ್ಯ ಆಯುಕ್ತರಿಗೆ ವರ್ಗಾಯಿಸುತ್ತಾರೆ.

ಸಿಬಿಆರ್ ಸೃಷ್ಟಿಯಾಗಿ ಪಾವತಿಗೆ ಬಾಕಿ ಇರುವ ಬಿಲ್‌ಗಳನ್ನು ಪ್ರತಿ ತಿಂಗಳ ಮೊದಲನೇ ವಾರ ಮುಖ್ಯ ಲೆಕ್ಕಾಧಿಕಾರಿಗಳ ಹಂತದಲ್ಲಿ ಶೇಕಡವಾರು ಕಾಮಗಾರಿ ಬಿಲ್‌ಗಳನ್ನು ರ‍್ಯಾಂಡಮೈಸೇಷನ್ ಮಾಡಿ, ಟಿವಿಸಿಸಿ ವಿಭಾಗದಿಂದ ಪರಿಶೀಲಿಸಲು ಸೂಚಿಸುತ್ತಾರೆ. ಈ ಪ್ರಕ್ರಿಯೆಯ ಪ್ರತಿಯೊಂದು ಹಂತಕ್ಕೂ ದಿನಗಳನ್ನು ನಿಗದಿಪಡಿಸಲಾಗಿದ್ದು, ಆ ಅವಧಿಯಲ್ಲಿ ಸಂಬಂಧಪಟ್ಟ ಅಧಿಕಾರಿ ಪರಿಶೀಲನೆ ಮುಗಿಸಬೇಕು. ಇಲ್ಲದಿದ್ದರೆ ಅದು ಸಮ್ಮತಿ ಎಂದು ಪರಿಗಣಿಸಿ ಮುಂದಿನ ಹಂತಕ್ಕೆ ಹೋಗುತ್ತದೆ.

₹50 ಲಕ್ಷಕ್ಕಿಂತ ಕಡಿಮೆ ಮೊತ್ತದ ಕಾಮಗಾರಿ, ₹50 ಲಕ್ಷದಿಂದ ₹1 ಕೋಟಿ, ₹1 ಕೋಟಿಯಿಂದ ₹5 ಕೋಟಿ, ₹5 ಕೋಟಿಯಿಂದ ₹10 ಕೋಟಿ, ₹10 ಕೋಟಿಗೂ ಹೆಚ್ಚಿನ ಮೊತ್ತದ ಕಾಮಗಾರಿಗಳ ವರ್ಗವನ್ನು ನಿಗದಿ ಮಾಡಲಾಗಿದೆ. ಬಿಲ್ ಸಲ್ಲಿಸಿದ 15 ದಿನದಿಂದ 30 ದಿನದೊಳಗೆ ಪಾವತಿ ಮಾಡಲು ವ್ಯವಸ್ಥೆ ಕಲ್ಪಿಸಲಾಗಿದೆ.

ಶೇ 25ರಷ್ಟು ಬಿಲ್ ಪಾವತಿ: ಮನವಿ

'ಬಿಬಿಎಂಪಿ ಗುತ್ತಿಗೆದಾರರಿಗೆ ಈಗಾಗಲೇ ಪಾವತಿ ಮಾಡಲಾಗಿರುವ ಬಿಲ್‌ಗಳಲ್ಲಿ ತಡೆಹಿಡಿಯಲಾಗಿರುವ ಶೇ 25ರಷ್ಟು ಬಾಕಿ ಮೊತ್ತವನ್ನು ಬಿಡುಗಡೆ ಮಾಡಲು ಮತ್ತು ಪಾವತಿಸಲು ಬಾಕಿ ಇರುವ ಕಾಮಗಾರಿಗಳ ಬಿಲ್‌ಗಳನ್ನು ಶೇ 100ರಷ್ಟು ಬಿಡುಗಡೆಗೆ ಅನುಮತಿ ನೀಡಬೇಕು' ಎಂದು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೆ ಬಿಬಿಎಂಪಿ ಮುಖ್ಯ ಆಯುಕ್ತರು ಪತ್ರ ಬರೆದಿದ್ದಾರೆ.

ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಜಿ.ಎಂ. ನಂದಕುಮಾರ್ ಹಾಗೂ ಪದಾಧಿಕಾರಿಗಳು 9 ಬೇಡಿಕೆಗಳ ಮನವಿ ಸಲ್ಲಿಸಿ, ಈಡೇರಿಸಲು ಜೂನ್ 10ರ ಗಡುವು ನೀಡಿದ್ದರು.

ಈ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಪತ್ರ ಬರೆಯಲಾಗಿದ್ದು, 'ನ್ಯಾಯಮೂರ್ತಿ ಎಚ್‌.ಎಸ್. ನಾಗಮೋಹನ್ ದಾಸ್ ನೇತೃತ್ವದ ವಿಚಾರಣಾ ಸಮಿತಿ ಕಾಮಗಾರಿಗಳ ತನಿಖೆ ನಡೆಸುತ್ತಿದೆ. ಈ ಕಾಮಗಾರಿಗಳಿಗೆ ಶೇ 75ರಷ್ಟು ಬಿಲ್ ಪಾವತಿಸಲಾಗಿದ್ದು, ಉಳಿದ ಶೇ 25ರಷ್ಟನ್ನು ಪಾವತಿಸಲು ಕೋರಿದ್ದಾರೆ. 2021ರ ಏಪ್ರಿಲ್‌ನಿಂದ ಈವರೆಗಿನ ಎಲ್ಲ ಬಿಲ್‌ಗಳಲ್ಲಿ ತಡೆಹಿಡಿದಿರುವ ಶೇ 25ರಷ್ಟನ್ನು ಬಿಡುಗಡೆ ಮಾಡಲು ಕೋರಿದ್ದಾರೆ. ಪಾವತಿ ಮಾಡಿರುವ ಬಿಲ್‌ಗಳಿಗೂ ಶೇ 18ರಂತೆ ಜಿಎಸ್‌ಟಿ ಪಾವತಿಸಬೇಕಿರುವುದರಿಂದ ಗುತ್ತಿಗೆದಾರರು ಆರ್ಥಿಕ ಸಂಕಷ್ಟದಲ್ಲಿ ಸಿಲುಕಿರುವುದಾಗಿ ತಿಳಿಸಿದ್ದಾರೆ. ಹೀಗಾಗಿ, ಪೂರ್ಣ ಬಿಲ್ ಪಾವತಿಸಲು ಅನುಮತಿ ನೀಡಬೇಕು' ಎಂದು ಕೋರಿದ್ದಾರೆ.

ಬಿಬಿಎಂಪಿ ಗುತ್ತಿಗೆದಾರರು ಮನವಿ ಸಲ್ಲಿಸಿ, ಹಲವು ಬೇಡಿಕೆಗಳನ್ನು ಈಡೇರಿಸಲು ಕೇಳಿದ್ದಾರೆ. ಯೋಜನಾ ನಿರ್ವಹಣೆ ಸಮಿತಿಯವರಿಂದ ದೃಢೀಕರಣ ಪಡೆಯಲು, ಗುಣಭರವಸೆ ದೃಢೀಕರಣ ಪ್ರಕ್ರಿಯೆಯಲ್ಲಿ ವಿಳಂಬ ಹಾಗೂ ಈ ಎಲ್ಲ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ, ಸಿಬಿಆರ್ ದಾಖಲಿಸಲು ಸಾಕಷ್ಟು ವಿಳಂಬವಾಗುತ್ತಿದೆ. ಇದನ್ನು ಸರಳೀಕರಣ ಮಾಡಬೇಕೆಂದು ಕೋರಿದ್ದಾರೆ. ಹೀಗಾಗಿ ಹೊಸ ವ್ಯವಸ್ಥೆಯನ್ನು ಜಾರಿಗೊಳಿಸಲಾಗುತ್ತಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಜೂನ್ 6ರಂದು ಆದೇಶ ಹೊರಡಿಸಿದ್ದಾರೆ.

'ಗುತ್ತಿಗೆದಾರರಿಗೆ ತಂತ್ರಾಂಶದ ಲಾಗಿನ್ ಐಡಿ ನೀಡಲಾಗುತ್ತದೆ. ಭೌತಿಕವಾಗಿ ಅವರು ಯಾವುದೇ ಕಡತಗಳನ್ನು ಸಲ್ಲಿಸಬೇಕಾಗಿಲ್ಲ. ಬಿಲ್‌ಗೆ ಸಂಬಂಧಿಸಿದಂತೆ ಎಲ್ಲವನ್ನೂ ಆನ್‌ಲೈನ್‌ನಲ್ಲೇ ಅಪ್‌ಲೋಡ್ ಮಾಡಬೇಕು. ಈ ಪ್ರಕ್ರಿಯೆಗೆ ಒಂದೆರಡು ವಾರ ಆಗಲಿದೆ. ಆದರೆ, ಶುಕ್ರವಾರದಿಂದಲೇ ಎಲ್ಲವನ್ನೂ ಆನ್‌ಲೈನ್ ಪ್ರಕ್ರಿಯೆಯಲ್ಲೇ ನಡೆಸಲಾಗುವುದು. ಗುತ್ತಿಗೆದಾರರಿಗೆ ಲಾಗಿನ್ ಐಡಿ ನೀಡುವವರೆಗೆ ನಮ್ಮ ಸಿಬ್ಬಂದಿಯೇ ಗುತ್ತಿಗೆದಾರರು ನೀಡುವ ಬಿಲ್ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡುತ್ತಾರೆ' ಎಂದು ಹಣಕಾಸು ವಿಭಾಗದ ಅಧಿಕಾರಿಗಳು ಮಾಹಿತಿ ನೀಡಿದರು.

ಕೆರೆ ಶುಚಿಗೊಳಿಸಲು 'ಜಲದೋಸ್ತ್'

ಏರ್‌ಬೋಟ್ ಯಂತ್ರ ತಯಾರಿಸಿದ ಸಿಎಸ್‌ಐಆರ್– ಎನ್‌ಎಎಲ್ ವಿಜ್ಞಾನಿಗಳು

• ಬಾಲಕೃಷ್ಣ ಪಿ.ಎಚ್‌.

ಮುಖ್ಯಾಂಶಗಳು

- ದಿನಕ್ಕೆ 30ರಿಂದ 32 ಟ್ರಿಪ್ ಜಲಕಳೆ ತೆಗೆಯುವ ಯಂತ್ರ
- ಇಂಡಿಯನ್ ಎಂಜಿನಿಯರಿಂಗ್ ಸಿಸ್ಟಂನಲ್ಲಿ ತಯಾರಿಕೆ

ಬೆಂಗಳೂರು: ಕೆರೆಗಳಲ್ಲಿರುವ ಜೊಂಡು, ತ್ಯಾಜ್ಯಗಳನ್ನು ತೆರವು ಮಾಡಿ ಪುನರುಜ್ಜೀವನಗೊಳಿಸಲು ಸಿಎಸ್‌ಐಆರ್–ಎನ್‌ಎಎಲ್ 'ಜಲದೋಸ್ತ್' ಏರ್‌ಬೋಟ್ ಯಂತ್ರವನ್ನು ತಯಾರಿಸಿದೆ. ಬಿಬಿಎಂಪಿ ವ್ಯಾಪ್ತಿಯ ಕೆರೆಗಳ ಸ್ವಚ್ಛತೆಗೆ ಈ ಯಂತ್ರಗಳು ಬಳಕೆಯಾಗಲಿವೆ.

ಜಲದೋಸ್ತ್ ಯಂತ್ರ ನೀರಲ್ಲಿ ತೇಲುತ್ತಾ ತ್ಯಾಜ್ಯಗಳನ್ನು ಸಂಗ್ರಹಿಸುತ್ತದೆ. ಒಂದು ಬಾರಿಗೆ ನಾಲ್ಕು ಟನ್ನಿನಷ್ಟು ಜಲಕಳೆಯನ್ನು ಸಂಗ್ರಹಿಸಿ ಹೊರ ಹಾಕುತ್ತದೆ. ಪ್ರತಿ 15 ನಿಮಿಷಕ್ಕೆ ಒಂದು ಟ್ರಿಪ್‌ನಂತೆ ಕಸ ವಿಲೇವಾರಿ ಕೆಲಸ ಮಾಡುತ್ತದೆ. ಎಂಟು ಗಂಟೆಯಲ್ಲಿ ಈ ಯಂತ್ರವು 120 ಟನ್ ಜಲಸಸ್ಯವನ್ನು ಹೊರಗೆ ಹಾಕುತ್ತದೆ. ಒಂದು ದಿನಕ್ಕೆ 2 ಎಕರೆ ಜಲಪ್ರದೇಶ ಸ್ವಚ್ಛಗೊಳ್ಳಲಿದೆ ಎಂಬುದು ವೈಜ್ಞಾನಿಕ ಹಾಗೂ ಕೈಗಾರಿಕಾ ಸಂಶೋಧನಾ ಮಂಡಳಿ (ಸಿಎಸ್‌ಐಆರ್)– ರಾಷ್ಟ್ರೀಯ ವೈಮಾಂತರೀಕ್ಷ ಪ್ರಯೋಗಾಲಯದ (ಎನ್‌ಎಎಲ್) ವಿಜ್ಞಾನಿಗಳ ವಿವರಣೆ.

ತ್ಯಾಜ್ಯ ವಿಲೇವಾರಿಯನ್ನು ಟನ್‌ಗಳ ಬದಲಿಗೆ ಕ್ಯೂಬ್‌ಗಳಲ್ಲಿ ಮಾಪನ ಮಾಡಲಾಗುತ್ತದೆ. ಒಂದು ಟ್ರಿಪ್‌ಗೆ 15 ಮೀಟರ್ ಕ್ಯೂಬ್ ಸಂಗ್ರಹಿಸುವ ಸಾಮರ್ಥ್ಯವನ್ನು 'ಜಲದೋಸ್ತ್' ಹೊಂದಿದೆ.

ಗಂಟೆಗೆ 5 ರಿಂದ 6 ಲೀಟರ್ ಡೀಸೆಲ್ ಸಾಕಾಗುತ್ತದೆ. ಈಗಾಗಲೇ ಈ ಯಂತ್ರದಿಂದ ಹಲಸೂರು ಕೆರೆಯಲ್ಲಿ ಜಲಕಳೆ ಮತ್ತು ತ್ಯಾಜ್ಯವನ್ನು ತೆಗೆದು ಸ್ವಚ್ಛ ಮಾಡಲಾಗಿದೆ. ಮಂಚನಬೆಲೆ ಜಲಾಶಯ ಮತ್ತು ಕನ್ನಮಂಗಲ ಕೆರೆಗಳನ್ನು ಸ್ವಚ್ಛಗೊಳಿಸಲಾಗಿದೆ.

ಕಡಿಮೆ ವೆಚ್ಚದಲ್ಲಿ ಯಂತ್ರ ತಯಾರಿ: ಇಷ್ಟೇ ಸಾಮರ್ಥ್ಯವಿರುವ ಯಂತ್ರಗಳನ್ನು ಅಮೆರಿಕ, ಕೆನಡಾ ಸೇರಿದಂತೆ, ಪಾಶ್ಚಿಮಾತ್ಯ ದೇಶಗಳಲ್ಲಿ ಕೆರೆ ಸ್ವಚ್ಛತೆಗೆ ಬಳಸುತ್ತಾರೆ. ಅಲ್ಲಿ ಒಂದು ಯಂತ್ರದ ಬೆಲೆ ₹ 2.5 ಕೋಟಿ ಇದೆ. ಭಾರತದಲ್ಲಿ ಸದ್ಯ ವಿದೇಶದ ಎರಡು–ಮೂರು ಯಂತ್ರಗಳು ಬಳಕೆಯಲ್ಲಿವೆ. ಇದನ್ನು ಮನಗಂಡು ಬಿಬಿಎಂಪಿಯವರು ಸ್ಥಳೀಯವಾಗಿ ಯಂತ್ರ ತಯಾರಿಸುವಂತೆ ಸಲಹೆ ನೀಡಿದ್ದರು. ಅದರಂತೆ ದೇಶೀಯ ಎಂಜಿನ್, ಬಿಡಿಭಾಗಗಳನ್ನು ಬಳಸಿ 'ಜಲದೋಸ್ತ್' ತಯಾರಿಸಲಾಗಿದೆ. ಯಂತ್ರದ ಬೆಲೆ ಜಿಎಸ್‌ಟಿ ಸೇರಿ ₹95 ಲಕ್ಷವಾಗುತ್ತದೆ. ಜಲದೋಸ್ತ್ ಏರ್‌ಬೋಟ್ ಯಂತ್ರವನ್ನು ಖರೀದಿಸಲು ಬಿಬಿಎಂಪಿ ಜೊತೆಗೆ ಒಡಂಬಡಿಕೆ ಮಾಡಿಕೊಳ್ಳಲಾಗುತ್ತಿದೆ' ಎಂದು ಸಿಎಸ್‌ಐಆರ್–ಎನ್‌ಎಎಲ್‌ನ ವೈಜ್ಞಾನಿಕ ಹಾಗೂ ಕೈಗಾರಿಕಾ ಸಂಶೋಧನಾ ವಿಭಾಗದ ಪ್ರಧಾನ ವಿಜ್ಞಾನಿ ಟಿ. ಕಾರ್ತಿಕೇಯನ್ ಮಾಹಿತಿ ನೀಡಿದರು.

ಶ್ರೀವಾರಿ ಎಂಜಿನಿಯರಿಂಗ್ ಸಿಸ್ಟಮ್ಸ್ ಮೂಲಕ ಅಗತ್ಯ ಇದ್ದವರಿಗೆ ಯಂತ್ರ ಪೂರೈಸಲಾಗುತ್ತದೆ. ಬಾಡಿಗೆಗೆ ಬೇಕಾದರೂ ನೀಡಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ವಿವರ ನೀಡಿದರು.

ಕೆರೆ ಸ್ವಚ್ಛಗೊಳಿಸುವ ಪ್ರಾತ್ಯಕ್ಷಿಕೆ ನೀಡುತ್ತಿರುವ 'ಜಲದೋಸ್ತ್' ಏರ್‌ಬೋಟ್

ನಗರದಲ್ಲಿ ಸಾಧಾರಣ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಗುರುವಾರ ಗಾಳಿಯೊಂದಿಗೆ ಸಾಧಾರಣ ಮಳೆಯಾಯಿತು.

ಎಂ.ಜಿ.ರಸ್ತೆ, ರಾಜಾಜಿನಗರ, ಎಚ್‌.ಗೊಲ್ಲಹಳ್ಳಿ, ಹೆಮ್ಮಿಗೆಪುರ, ಪೀಣ್ಯ ಕೈಗಾರಿಕಾ ವಲಯ, ಕಾಮಾಕ್ಷಿಪಾಳ್ಯ, ಆರ್‌.ಟಿ.ನಗರ ಸಹಿತ ವಿವಿಧ ಕಡೆಗಳಲ್ಲಿ ತಣ್ಣಗೆ ಮಳೆ ಸುರಿಯಿತು.

ಹೆಚ್ಚು ಮಳೆಯಾದ ಪ್ರದೇಶಗಳು: ಎಚ್‌.ಗೊಲ್ಲಹಳ್ಳಿ 3 ಸೆಂ.ಮೀ., ಹೆಮ್ಮಿಗೆಪುರ 2 ಸೆಂ.ಮೀ., ಪೀಣ್ಯ ಕೈಗಾರಿಕಾ ವಲಯ 2 ಸೆಂ.ಮೀ., ಹೆಮ್ಮಿಗೆಪುರ 1.5 ಸೆಂ.ಮೀ. ಮಳೆಯಾಗಿದೆ.

ಬುಧವಾರ ರಾತ್ರಿ ಅತ್ತಿಗುಪ್ಪೆ ಸಹಿತ ಕೆಲವು ಪ್ರದೇಶಗಳಲ್ಲಿ ಮರಗಳು ಮುರಿದು ಬಿದ್ದಿವೆ.

ನಗರದ ಅತ್ತಿಗುಪ್ಪೆಯ ವಿಡಿಯಾ ಬಡಾವಣೆಯಲ್ಲಿ ಬುಧವಾರ ರಾತ್ರಿ ಗಾಳಿ ಸಹಿತ ಸುರಿದ ಮಳೆಗೆ ಮರವೊಂದು ಟೆಂಪೊ ಮತ್ತು ಬೈಕ್ ಮೇಲೆ ಬಿದ್ದಿರುವ ದೃಶ್ಯ
–ಪ್ರಜಾವಾಣಿ ಚಿತ್ರ

ಬಿಡಿಎ: ಮಾಸ್ಟರ್ ಪ್ಲಾನ್ ಸಿದ್ಧತೆಗೆ ಸರ್ವೆ

ಬೆಂಗಳೂರು: 'ಪರಿಷ್ಕೃತ ಮಾಸ್ಟರ್ ಪ್ಲಾನ್– 2041' ಸಿದ್ಧತೆಯನ್ನು ಆರಂಭಿಸಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಡ್ರೋನ್ ಮೂಲಕ 3ಡಿ ಸರ್ವೆ ನಡೆಸಲು ಟೆಂಡರ್ ಆಹ್ವಾನಿಸಿದೆ.

ಬಿಬಿಎಂಪಿ ವ್ಯಾಪ್ತಿ ಹೊರತುಪಡಿಸಿದಂತೆ ಬಿಡಿಎ ವ್ಯಾಪ್ತಿಯ 440 ಚದರ ಕಿ.ಮೀ ವ್ಯಾಪ್ತಿಯಲ್ಲಿ ಸರ್ವೆ ನಡೆಸಬೇಕು. 'ಬೇಸ್ ಮ್ಯಾಪ್' ಹಾಗೂ ಭೂಬಳಕೆಯ ನಕ್ಷೆಯನ್ನು ಡ್ರೋನ್ ಸರ್ವೆ ಆಧರಿಸಿ 'ಆರ್ಥೋ ರೆಕ್ಟಿಫೈಯ್ಡ್ ಇಮೇಜಸ್ ಮತ್ತು ಡಿಜಿಟಲ್ ಎಲಿವೇಷನ್ ಮಾಡಲ್'ಗಳನ್ನು ಸಿದ್ಧಪಡಿಸಿಕೊಂಡು ಮಾಸ್ಟರ್ ಪ್ಲಾನ್ ರಚಿಸಲು ಯೋಜಿಸಲಾಗಿದೆ.

ರಕ್ಷಣಾ ಸಚಿವಾಲಯ ಸೇರಿದಂತೆ ಎಲ್ಲ ಸಂಸ್ಥೆಗಳಿಂದ ಅನುಮತಿಗಳನ್ನು ಗುತ್ತಿಗೆದಾರರೇ ಪಡೆದುಕೊಳ್ಳಬೇಕು. ಎಲ್ಲ ರೀತಿಯ ಬಫರ್ ಝೋನ್‌ಗಳನ್ನೂ ಗುರುತಿಸಬೇಕು. 360 ಡಿಗ್ರಿ ಚಿತ್ರಗಳನ್ನೂ ಸಂಗ್ರಹಿಸಿಕೊಂಡು, ವಾಸ್ತವದಲ್ಲಿನ ಭೂಮಿಯೊಂದಿಗೆ ಅದನ್ನು '3ಡಿ ರಿಯಾಲಿಟಿ ಮೆಷ್ ಮಾಡಲ್'ನಲ್ಲಿ ಅಳವಡಿಸಬೇಕು.

ಬಿಡಿಎ ಈ ಹಿಂದೆ, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ ಮೂಲಕ ಸರ್ವೆ ನಡೆಸಲು ನಿರ್ಧರಿಸಿತ್ತು. ರಾಜ್ಯ ಸರ್ಕಾರ ಬದಲಾದ ಮೇಲೆ ಈ ಯೋಜನೆಯನ್ನು ಖಾಸಗಿ ಸಂಸ್ಥೆಯಿಂದ ನಡೆಸಲು ಟೆಂಡರ್ ಆಹ್ವಾನಿಸಿದೆ. ಜೂನ್ 15ರಂದು ಟೆಂಡರ್ ಸಲ್ಲಿಸಲು ಅಂತಿಮ ದಿನವಾಗಿದ್ದು, ಜೂನ್ 21ರಂದು ಆರ್ಥಿಕ ಬಿಡ್ ತೆರೆಯಲಾಗುತ್ತದೆ.

ಪೊಲೀಸ್ ಕಚೇರಿ ತಮ್ಮದೆಂದು ದಾಖಲೆ ಸೃಷ್ಟಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಕೇಂದ್ರ ವಲಯದ ಪೊಲೀಸ್ ಕಚೇರಿಗೆ ಸೇರಿದ ಜಾಗ ತಮ್ಮದೆಂದು ದಾಖಲೆ ಸೃಷ್ಟಿಸಿಕೊಂಡಿದ್ದ ಆರು ಮಂದಿ ವಿರುದ್ಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯಾರಣ್ಯಪುರದ ಎಂ.ಡಿ.ಹನೀಫ್, ವಿಜಯನಗರದ ರಾಜಶೇಖರ್, ಉಲ್ಲಾಳದ ಮಹಮ್ಮದ್ ನದೀಮ್, ಸಂಜಯನಗರದ ಮೋಹನ್ ಶೆಟ್ಟಿ, ಗಣಪತಿ ಹಾಗೂ ಜಹೀರ್ ಎಂಬವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಜಿಲ್ಲಾ ನಿಯಂತ್ರಣ ಕೊಠಡಿ ವೈರ್‌ಲೆಸ್ ವಿಭಾಗದ ಇನ್‌ಸ್ಪೆಕ್ಟರ್ ಸಂತೋಷ್‌ಗೌಡ ದೂರು ನೀಡಿದ್ದು ದೂರು ಆಧರಿಸಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಜೂನ್ 6ರಂದು ನಗರದಲ್ಲಿರುವ ಕೇಂದ್ರ ವಲಯ ಪೊಲೀಸ್ ಕಚೇರಿ ಹಾಗೂ ಗ್ರಾಮಾಂತರ ಜಿಲ್ಲಾ ಪೊಲೀಸ್ ಕಚೇರಿ ಆವರಣಕ್ಕೆ ನುಗ್ಗಿದ್ದ ಇಬ್ಬರು ಆರೋಪಿಗಳು ವಿಡಿಯೊ ಚಿತ್ರೀಕರಣ ಮಾಡುತ್ತಿದ್ದರು. ಜತೆಗೆ, ಫೋಟೊ ತೆಗೆಯುತ್ತಿದ್ದರು. ಅವರನ್ನು ಪ್ರಶ್ನಿಸಿದಾಗ ನನ್ನನ್ನು ಬೆದರಿಸಿದರು. ಅಲ್ಲದೇ ಈ ಜಾಗದ ದಾಖಲೆ ಮೋಹನ್‌ಶೆಟ್ಟಿ ಹಾಗೂ ರಾಜಶೇಖರ್ ಬಳಿಯಿದೆ ಎಂದೂ ಹೇಳಿದ್ದರು. ಅವರನ್ನು ಕಚೇರಿಗೆ ಕರೆದೊಯ್ದು ವಿಚಾರಣೆ ನಡೆಸಿದಾಗ ಜಹೀರ್ ಅಹಮದ್ ಸೇರಿ ಹಲವರು ಸ್ವತ್ತಿನ ಜಿಪಿಎ ಮಾಡಿಸಿಕೊಂಡಿರುವುದಾಗಿ ಬಾಯ್ಬಿಟ್ಟಿದ್ದರು' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಪೊಲೀಸ್ ಇಲಾಖೆಗೆ ಸೇರಿದ ಜಾಗವನ್ನು ಮಾರಾಟ ಮಾಡುವ ದುರುದ್ದೇಶದಿಂದ ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡಿರುವುದು ಗೊತ್ತಾಗಿದೆ. ಅಲ್ಲದೇ ಆರೋಪಿಗಳು ಕಚೇರಿ ಆವರಣಕ್ಕೆ ಅಕ್ರಮವಾಗಿ ಪ್ರವೇಶಿಸಿದ್ದರು. ಪ್ರಕರಣ ತನಿಖೆ ನಡೆಯುತ್ತಿದೆ' ಎಂದು ಪೊಲೀಸರು ಹೇಳಿದರು.

ಜಾಮೀನು ಕೋರಿ ಕೋರ್ಟ್‌ಗೆ ದೇವರಾಜೇಗೌಡ ಅರ್ಜಿ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ಮಹಿಳೆಯೊಬ್ಬರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ಸದ್ಯ ನ್ಯಾಯಾಂಗ ಬಂಧನದಲ್ಲಿರುವ ಹೈಕೋರ್ಟ್ ವಕೀಲ ಜಿ.ದೇವರಾಜೇಗೌಡ ಅವರಿಗೆ ಹಾಸನದ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಜಾಮೀನು ನಿರಾಕರಿಸಿರುವ ಬೆನ್ನಲ್ಲೇ, ಜಾಮೀನು ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಈ ಕುರಿತಂತೆ ದೇವರಾಜೇಗೌಡ ಗುರುವಾರ ಹೈಕೋರ್ಟ್‌ನಲ್ಲಿ ಕ್ರಿಮಿನಲ್ ಅರ್ಜಿ ಸಲ್ಲಿಸಿದ್ದು, ಈ ಅರ್ಜಿ ಇನ್ನಷ್ಟೇ ವಿಚಾರಣೆಗೆ ನಿಗದಿಯಾಗಬೇಕಿದೆ.

ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಅತ್ಯಾಚಾರ ಆರೋಪ ಮತ್ತು ಈ ಪ್ರಕರಣಕ್ಕೆ ಸಂಬಂಧಿಸಿದ ಪೆನ್ ಡ್ರೈವ್ ಹಂಚಿಕೆ ಆರೋಪಗಳ ಬೆನ್ನಲ್ಲೇ ದೇವರಾಜೇಗೌಡ ವಿರುದ್ಧ ಹೊಳೆನರಸೀಪುರ ಪೊಲೀಸ್ ಠಾಣೆಯಲ್ಲಿ ಮಹಿಳೆಯೊಬ್ಬರು, 'ದೇವರಾಜೇಗೌಡ ನನ್ನ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ' ಎಂದು ಆರೋಪಿಸಿ ದೂರು ದಾಖಲಿಸಿದ್ದರು. ಈ ದೂರಿನ ಆಧಾರದಲ್ಲಿ ದೇವರಾಜೇಗೌಡ ಅವರನ್ನು ಪೊಲೀಸರು ಬಂಧಿಸಿದ್ದರು.

ದೇವರಾಜೇಗೌಡ ವಿರುದ್ಧ ಐಪಿಸಿ–1860ರ ಕಲಂ 354ಎ, 354ಸಿ, 448,504,506 ಮತ್ತು ಐಟಿ ಕಾಯ್ದೆಯ ಕಲಂ 66ಇ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಆರೋಪಿ ಬಂಧನ

ಬೆಂಗಳೂರು: ಮಾದಕ ವಸ್ತುಗಳನ್ನು ದಾಸ್ತಾನು ಮಾಡಿಕೊಂಡು ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಹೆಣ್ಣೂರು ಠಾಣೆ ಪೊಲೀಸರು ಗುರುವಾರ ಬಂಧಿಸಿದ್ದಾರೆ. ಹಲಸೂರಿನ ಎಚ್‌ಎಎಲ್ 2ನೇ ಹಂತದ ಹನುಮಯ್ಯ ರಸ್ತೆಯ ನಿವಾಸಿ ಅಭಿಷೇಕ್ (23) ಬಂಧಿತ ಆರೋಪಿ.

MISSING

Vasant Gaonkar
Aged 78 years
He is missing from Sarjapur Road. B'lore oppositeWipro corporate office. His missing from Saturday morning 1st June.
He wears white shirt, wears spectacles, is carrying a navy blue backpack.
He is a Diabetic patient. If anyone has seen him or has any information about him please
Contact: 9886056415/ 9980083929

ಬಿಟ್ ಕಾಯಿನ್ ಪ್ರಕರಣ: ಹೈಕೋರ್ಟ್‌ನಲ್ಲಿ ಅರ್ಜಿಯ ವಿಚಾರಣೆ

ಶ್ರೀಧರ ಪೂಜಾರ ಬಂಧಿಸದಂತೆ ಹೈಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟ್ ಕಾಯಿನ್ ಪ್ರಕರಣದಲ್ಲಿ ಆರೋಪಿಗಳನ್ನು ಅಕ್ರಮವಾಗಿ ತಮ್ಮ ವಶದಲ್ಲಿಟ್ಟುಕೊಂಡು ಹ್ಯಾಕಿಂಗ್, ಬಿಟ್ ಕಾಯಿನ್‌ಗಳ ವರ್ಗಾವಣೆ ಮತ್ತು ಪಾಸ್ ವರ್ಡ್ ಬದಲಾವಣೆ ಮಾಡಿದ ಆರೋಪ ಎದುರಿಸುತ್ತಿರುವ ಆಂತರಿಕ ಭದ್ರತಾ ವಿಭಾಗದ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ (ಡಿವೈಎಸ್‌ಪಿ) ಶ್ರೀಧರ್ ಕೆ.ಪೂಜಾರ ಅವರನ್ನು ಮುಂದಿನ ವಿಚಾರಣೆವರೆಗೆ ಬಂಧಿಸದಂತೆ ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಶ್ರೀಧರ್ ಕೆ.ಪೂಜಾರ ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿಯನ್ನು ನ್ಯಾಯಮೂರ್ತಿ ಎಂ.ಜಿ.ಉಮಾ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಪ್ರಾಸಿಕ್ಯೂಟರ್–2 ಬಿ.ಎನ್.ಜಗದೀಶ್, 'ಪೂಜಾರ ಅವರಿಗೆ ಕಳೆದ ತಿಂಗಳ ಮೇ 2ರಂದು ಹೈಕೋರ್ಟ್‌ನ ಏಕಸದಸ್ಯ ನ್ಯಾಯಪೀಠ ನಿರೀಕ್ಷಣಾ ಜಾಮೀನು ಮಂಜೂರು ಮಾಡಿತ್ತು. ರಾಜ್ಯ ಸರ್ಕಾರ ಇದನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿತ್ತು' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

'ಪೂಜಾರ ಅವರು ತನಿಖಾಧಿಕಾರಿಯ ಮುಂದೆ ಹಾಜರಾಗಿ, ಇಡೀ ತನಿಖೆಯ ದಾರಿ ತಪ್ಪಿಸಿದ್ದಾರೆ. ಈ ಪ್ರಕರಣದಲ್ಲಿ ಕೆಲವು ಪರಿಕರಗಳನ್ನು ಜಪ್ತಿ ಮಾಡಬೇಕಿದೆ. ವಾಟ್ಸ್ ಆ್ಯಪ್ ಸಂವಹನ ಪತ್ತೆಯಾದ ಮೇಲೆ ಶ್ರೀಧರ್ ಪೂಜಾರ ಮತ್ತು ಇತರೆ ಅಧಿಕಾರಿಗಳು ಎಸಗಿರುವ ಅಪರಾಧ ಬಹಿರಂಗವಾಗಿದೆ. ಹಾಗಾಗಿ, ಮಧ್ಯಂತರ ರಕ್ಷಣೆ ನೀಡುವುದು ಸೂಕ್ತವಲ್ಲ' ಎಂದು ಪ್ರತಿಪಾದಿಸಿದರು.

ಇದನ್ನು ಅಲ್ಲಗಳೆದ ಅರ್ಜಿದಾರರ ಪರ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, 'ಹೈಕೋರ್ಟ್ ಆದೇಶದಲ್ಲಿ; ಪೂಜಾರ ಸಲ್ಲಿಸುವ ಜಾಮೀನು ಅರ್ಜಿಗೆ ಪ್ರಾಸಿಕ್ಯೂಷನ್ ವಿರೋಧಿಸಬಾರದು ಎಂಬ ಷರತ್ತು ವಿಧಿಸಲಾಗಿತ್ತು. ಇದಕ್ಕಾಗಿ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಪ್ರಕರಣದ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್ ಪೂಜಾರ್ ಹೊಸದಾಗಿ ನಿರೀಕ್ಷಣಾ ಜಾಮೀನು ಅರ್ಜಿ ಸಲ್ಲಿಸಬಹುದು ಎಂದಿತ್ತು. ಅದರಂತೆ ಹೊಸದಾಗಿ ನಿರೀಕ್ಷಣಾ ಜಾಮೀನು ಕೋರಲಾಗಿದೆ. ಒಂದೊಮ್ಮೆ ಪೂಜಾರ ಬಂಧನವಾದರೆ ಅವರ ಇಡೀ ವೃತ್ತಿ ಬದುಕು ನಾಶವಾಗಲಿದೆ' ಎಂದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, ಅರ್ಜಿದಾರರನ್ನು ಬಂಧಿಸದಂತೆ ಆದೇಶಿಸಿತು. ಆಕ್ಷೇಪಣೆ ಸಲ್ಲಿಸುವಂತೆ ಪ್ರಾಸಿಕ್ಯೂಷನ್‌ಗೆ ಸೂಚಿಸಿ ವಿಚಾರಣೆಯನ್ನು ಇದೇ 12ಕ್ಕೆ ಮುಂದೂಡಿತು.

ಬಿಟ್ ಕಾಯಿನ್: ದೋಷಾರೋಪಪಟ್ಟಿ ಸಲ್ಲಿಕೆ

ಬೆಂಗಳೂರು: ರಾಜ್ಯದಲ್ಲಿ ನಡೆದಿದ್ದ ಬಿಟ್ ಕಾಯಿನ್ ಹಗರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ, ಪ್ರಕರಣ ಸಂಬಂಧ ಮೊದಲ ಹಂತದ ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದೆ.

ನಗರದ ಕೆಂಪೇಗೌಡ ನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಡ್ರಗ್ಸ್ ಪ್ರಕರಣ ಸಂಬಂಧ ಪ್ರಮುಖ ಆರೋಪಿ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ಸೇರಿ ಆರು ಮಂದಿ ವಿರುದ್ಧ ದೋಷಾರೋಪಪಟ್ಟಿ ಸಲ್ಲಿಸಲಾಗಿದೆ. ಶ್ರೀಕಿ, ರಾಬಿನ್ ಖಂಡೇನ್‌ವಾಲ್, ಸುನೀಶ್ ಹೆಗ್ಡೆ ಸೇರಿ 6 ಮಂದಿ ವಿರುದ್ಧ ದೋಷಾರೋಪಪಟ್ಟಿ ಸಲ್ಲಿಸಲಾಗಿದೆ ಎಂದು ಮೂಲಗಳು ಹೇಳಿವೆ

ಆರೋಪಿಗಳು ಡಾರ್ಕ್‌ವೆಬ್ ಮೂಲಕ ವಿದೇಶಗಳಿಂದ ಮಾದಕ ವಸ್ತುಗಳನ್ನು ತರಿಸುತ್ತಿದ್ದರು. ಅದಕ್ಕಾಗಿ ಕ್ರಿಪ್ಟೊ ಕರೆನ್ಸಿ ಮತ್ತು ಬಿಟ್‌ಕಾಯಿನ್ ಮೂಲಕ ಹಣಕಾಸಿನ ವ್ಯವಹಾರ ನಡೆಸುತ್ತಿದ್ದರು. ಜತೆಗೆ ತನಿಖೆಯಲ್ಲಿ ರಾಬಿನ್ ಖಂಡೇನ್‌ವಾಲ್ ಜತೆ ಸೇರಿಕೊಂಡು ಕೆಲ ಗೇಮ್ ಆ್ಯಪ್‌ಗಳನ್ನು ಹ್ಯಾಕ್ ಮಾಡಿ, ಅವುಗಳ ಮಾಲೀಕರಿಂದ ಹಣ ವಸೂಲಿ ಮಾಡುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿತ್ತು. ಇದೇ ವೇಳೆ ರಾಜ್ಯ ಸರ್ಕಾರದ ಈ-ಸಂಗ್ರಹಣಾ ಪೋರ್ಟಲ್ ಜಾಲತಾಣ ಹ್ಯಾಕ್ ಮಾಡಿ, ಸರ್ಕಾರಕ್ಕೆ ನಷ್ಟ ಉಂಟು ಮಾಡಿರುವುದು ತನಿಖೆಯಿಂದ ಸಾಬೀತಾಗಿದೆ ಎಂದು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ

भाकृअनुप - राष्ट्रीय पशु पोषण एवं शरीर क्रिया विज्ञान संस्थान
आडुगोडी, बेंगलूरु - 560 030
ICAR - National Institute of Animal Nutrition and Physiology
Adugodi, Bengaluru - 560 030
Department of Agricultural Research and Education, Government of India

NIANP/ADV-4-CDN/2024-25

The walk – in – interview has been scheduled on 20.06.2024 for engaging of One Young Professional – I at ICAR – NIANP, Bengaluru under AICRP (NPIERPA) project on temporary basis. The consolidated remuneration is Rs. 30000/- per month. For detailed advertisement please visit the Institute website www.nianp.res.in.

S/d
Administrative Officer

ಸಿನಿಮಾ ಪುರವಣಿ

ಏಕಪರದೆಗಿದು ಕಾಲವಲ್ಲ...

ತುಮಕೂರಿನ ಪ್ರಶಾಂತ್ ಚಿತ್ರಮಂದಿರ ಮುಚ್ಚಿರುವುದು

ಹಲವು ವರ್ಷಗಳಿಂದ ಪ್ರದರ್ಶನ ಸ್ಥಗಿತಗೊಳಿಸಿರುವ ಮಾನ್ವಿಯ ಪ್ರೇಮ ಚಿತ್ರಮಂದಿರ.

ಒಂದು ಕಾಲಕ್ಕೆ ಗತವೈಭವದಿಂದ ಮೆರೆದಿದ್ದ ಒಂದಷ್ಟು ಏಕಪರದೆ ಚಿತ್ರಮಂದಿರಗಳು ಈಗಾಗಲೇ ಬಾಗಿಲು ಹಾಕಿವೆ. ಇನ್ನೊಂದಷ್ಟು ಏದುಸಿರು ಬಿಡುತ್ತಿವೆ. ಇದಕ್ಕೆ ಕಾರಣವೇನು? ಪರಿಹಾರವೇನು? ಈ ಪ್ರಶ್ನೆಗಳಿಗೆ ಉತ್ತರ ಇಲ್ಲಿದೆ...

ವಿನಾಯಕ ಕೆ.ಎಸ್

ಇತ್ತೀಚೆಗಷ್ಟೇ ಬೆಂಗಳೂರಿನ ಜನಪ್ರಿಯ 'ಕಾವೇರಿ' ಚಿತ್ರಮಂದಿರ ಬಾಗಿಲು ಮುಚ್ಚಿದ್ದು ದೊಡ್ಡ ಸುದ್ದಿಯಾಯಿತು. ಅದರ ಬೆನ್ನಲ್ಲೇ ಚಿತ್ರಮಂದಿರಗಳು ಒಂದು ತಿಂಗಳು ಬಾಗಿಲು ಮುಚ್ಚಲಿವೆ ಎಂಬ ವಂದತಿಯೂ ಕಾಡ್ಗಿಚ್ಚಿನಂತೆ ಹಬ್ಬಿತು. ಆದರೆ ಏಕಪರದೆ ಚಿತ್ರಮಂದಿರಗಳ ಈ ಸಂಕಷ್ಟಕ್ಕೆ ದಶಕಗಳ ಇತಿಹಾಸವಿದೆ.

ಬೆಂಗಳೂರಿನಲ್ಲಿ ಒಂದು ಕಾಲಕ್ಕೆ ಬಹುಜನಪ್ರಿಯವಾಗಿದ್ದ ಕಪಾಲಿ, ಮೆಜೆಸ್ಟಿಕ್, ಸಂಗಮ್, ಸೆಂಟ್ರಲ್, ಗೀತಾಂಜಲಿ ಚಿತ್ರಮಂದಿರಗಳು ಬಾಗಿಲು ಮುಚ್ಚಿ ದಶಕಗಳು ಕಳೆದಿವೆ. ನಟರಾಜ್, ಉಮಾ, ಮೂವಿಲ್ಯಾಂಡ್‌ನಂತಹ ಚಿತ್ರಮಂದಿರಗಳು ಕೆಲ ವರ್ಷಗಳ ಹಿಂದೆ ಆಟ ಮುಗಿಸಿವೆ. ಭೂಮಿ ಬೆಲೆ ಹೆಚ್ಚಿರುವುದು, ಚಿತ್ರಮಂದಿರಗಳಿಂದ ವಾರದ ಖರ್ಚನ್ನು ನಿಭಾಯಿಸುವಷ್ಟೂ ಆದಾಯ ಬರದೇ ಇರುವುದು ಇದಕ್ಕೆ ಕಾರಣ. ಜೊತೆಗೆ ಏಕಪರದೆ ಚಿತ್ರಮಂದಿರಗಳಿಗೆ ಪರ್ಯಾಯವಾಗಿ ಮಲ್ಟಿಪ್ಲೆಕ್ಸ್‌ಗಳು ಬಂದವು. ಪ್ರೇಕ್ಷಕನಿಗೆ ಮಾಲ್‌ಗಳಲ್ಲಿನ ಶಾಪಿಂಗ್ ಜೊತೆಗೆ ಕುಟುಂಬ ಸಮೇತ ಸಿನಿಮಾ ನೋಡಬಹುದಾದ ಹೊಸ ಅನುಭವ ನೀಡಲು ಪ್ರಾರಂಭಿಸಿದವು. ಶುಚಿತ್ವದ ಕೊರತೆ, ಶೌಚಾಲಯದ ಅವ್ಯವಸ್ಥೆ, ಸಿನಿಮಾ ನೋಡಲು ಬೇಕಾದ ಸೂಕ್ತ ವಾತಾವರಣ ಇಲ್ಲದ ಕಾರಣ ಪ್ರೇಕ್ಷಕರು ಮಲ್ಟಿಪ್ಲೆಕ್ಸ್‌ಗಳ ಕಡೆಗೆ ಮುಖ ಮಾಡಿದ್ದಾರೆ.

ಕರೆಂಟ್ ಬಿಲ್ ಹುಟ್ಟುತ್ತಿಲ್ಲ

'ಸ್ಟಾರ್ ಇಲ್ಲದ ಸಿನಿಮಾಗಳಿಂದ ಶುಕ್ರವಾರ, ಶನಿವಾರ, ಭಾನುವಾರ ತಲಾ ಶೋಗೆ ಸರಾಸರಿ ₹2,000 ಸಂಗ್ರಹವಾಗುತ್ತದೆ. ಒಂದು ಶೋಗೆ ₹65,000 ಸಂಗ್ರಹವಾಗಬೇಕು. ಚಿತ್ರಮಂದಿರದ ಜಾಗದ ಬಾಡಿಗೆ, ಕಾರ್ಮಿಕರ ವೇತನ, ಕರೆಂಟ್ ಬಿಲ್ ಮೊದಲಾದವುಗಳನ್ನು ಪರಿಗಣಿಸಿದರೆ ಇವತ್ತು ಚಿತ್ರಮಂದಿರ ನಡೆಸುವುದು ಬಹಳ ಕಷ್ಟದ ಕೆಲಸ. ಬಹುತೇಕ ಎಲ್ಲ ಚಿತ್ರಮಂದಿರಗಳು ಫ್ಯಾಮಿಲಿ ಆಡಿಯನ್ಸ್‌ಗೆ ತಕ್ಕಂತೆ ಸುವ್ಯವಸ್ಥಿತವಾಗಿ ಅಪ್‌ಡೇಟ್ ಆಗಿವೆ' ಎನ್ನುತ್ತಾರೆ ಬೆಂಗಳೂರಿನ ಶ್ರೀನಿವಾಸ ಚಿತ್ರಮಂದಿರದ ಮಾಲೀಕ ಹಾಗೂ ಚಿತ್ರ ನಿರ್ಮಾಪಕರೂ ಆಗಿರುವ ದೇವೇಂದ್ರ ರೆಡ್ಡಿ.

'1985 ರ ಸುಮಾರಿಗೆ ಬೆಂಗಳೂರಿನ 'ಗೀತಾ' ಚಿತ್ರಮಂದಿರ ಮೊದಲು ಕಮರ್ಷಿಯಲ್ ಕಾಂಪ್ಲೆಕ್ಸ್ ಆಗಿ ಬದಲಾಯ್ತು. ಬಳಿಕ ಅಲಂಕಾರ್, ಕಲ್ಪನಾ, ಸಾಗರ್, ಮೆಜೆಸ್ಟಿಕ್, ಸಂಗಮ್...ಹೀಗೆ ಸಾಕಷ್ಟು ಚಿತ್ರಮಂದಿರಗಳು ವಾಣಿಜ್ಯ ಸಂಕೀರ್ಣಗಳಾದವು. ಹುಬ್ಬಳ್ಳಿಯಲ್ಲಿ ಸುಜಾತ, ಸಂಜ್ಯೋತ, ಪದ್ಮ, ಮೈಸೂರಿನ ರಣಜಿತ್, ಶಾಂತಲಾ, ಲಕ್ಷ್ಮಿ, ಸರಸ್ವತಿ, ಕುಂದಾಪುರದ ವಿನಾಯಕ, ಮಂಗಳೂರಿನ ಸೆಂಟ್ರಲ್, ಪ್ಲಾಟಿನಂ, ಜ್ಯೋತಿಗಳಂಥ ಏಕಪರದೆ ಚಿತ್ರಮಂದಿರಗಳು ಬಾಗಿಲು ಹಾಕಿವೆ. ಈ ಚಿತ್ರಮಂದಿರಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬರುವವರು ಕೆಳ ಮಧ್ಯಮ ವರ್ಗ, ಮಧ್ಯಮ ವರ್ಗದವರು. ಮನೆಗಳಿಗೆ ಟಿ.ವಿ ಬಂದ ನಂತರ ದುಡಿಯುವ ವರ್ಗ, ಮಹಿಳೆಯರು ಚಿತ್ರಮಂದಿರಗಳತ್ತ ಬರುವುದು ಕಡಿಮೆಯಾಯ್ತು' ಎನ್ನುತ್ತಾರೆ ನಟ ಸುಂದರರಾಜ್.

ಕೆ.ವಿ.ಚಂದ್ರಶೇಖರ್

'ರಾಜ್ಯದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಏಕಪರದೆಯ ಚಿತ್ರಮಂದಿರಗಳು ಇದ್ದವು. ಸದ್ಯ ಸುಮಾರು 560 ಚಿತ್ರಮಂದಿರಗಳಿವೆ. 25 ವರ್ಷಗಳಲ್ಲಿ 500ಕ್ಕೂ ಹೆಚ್ಚು ಚಿತ್ರಮಂದಿರಗಳು ಬಾಗಿಲು ಹಾಕಿವೆ. ಈಗಿರುವ ಚಿತ್ರಮಂದಿರಗಳಲ್ಲಿಯೂ ಬೆಂಗಳೂರಿನ ಸುತ್ತಮುತ್ತಲಿನ 60 ಚಿತ್ರಮಂದಿರಗಳು ತಾತ್ಕಾಲಿಕವಾಗಿ ಬಾಗಿಲು ಹಾಕಿವೆ. ಸ್ಟಾರ್‌ಗಳ ಚಿತ್ರ ಬಂದಾಗ ಮಾತ್ರ ಬಾಗಿಲು ತೆರೆಯುತ್ತವೆ. ಹೊಸಬರು ಹಲವಾರು ಕಾರಣಗಳಿಂದ ಮಲ್ಟಿಪ್ಲೆಕ್ಸ್‌ಗಳನ್ನು ಹೊರತುಪಡಿಸಿ ಬೇರೆಡೆ ಚಿತ್ರ ಬಿಡುಗಡೆ ಮಾಡುತ್ತಿಲ್ಲ. ಕೋವಿಡ್ ನಂತರ ಯಾವ ಚಿತ್ರಮಂದಿರಗಳೂ ಬಾಡಿಗೆ ಆಧಾರದಲ್ಲಿ ಕೆಲಸ ಮಾಡುತ್ತಿಲ್ಲ. ಶೇರಿಂಗ್ ಆಧಾರ ಬಂದರೂ ವರ್ಷಕ್ಕೆ ಸರಿಯಾಗಿ ಎಂಟು ಸಿನಿಮಾಗಳು ಸಿಗುತ್ತಿಲ್ಲ' ಎನ್ನುತ್ತಾರೆ ವೀರೇಶ್ ಚಿತ್ರಮಂದಿರ ಮಾಲೀಕ ಹಾಗೂ ಪ್ರದರ್ಶಕ ಕೆ.ವಿ.ಚಂದ್ರಶೇಖರ್.

ಕೆಲ ವರ್ಷಗಳ ಹಿಂದೆ ಶಹಾಪುರ ನಗರದ ಜಯಶ್ರೀ ಚಿತ್ರಮಂದಿರದಲ್ಲಿ ಕಂಡಿದ್ದ ಜನಸಾಗರ

ಹೊಸಬರಿಗೆ ಆಯ್ಕೆಯಿಲ್ಲ

'ಏಕಪರದೆ ಚಿತ್ರಮಂದಿರಗಳ ಶುಲ್ಕ ಭರಿಸಲು ಹೊಸಬರಿಗೆ ಸಾಧ್ಯವಿಲ್ಲ. ಬಾಡಿಗೆ ಆಧಾರದಲ್ಲಿ ದಿನಕ್ಕೆ ಒಂದೇ ಶೋ ಪಡೆದರೂ ವಾರಕ್ಕೆ ₹50,000 ಖರ್ಚು ಬರುತ್ತದೆ. ಆದರೆ ಅದಕ್ಕೆ ತಕ್ಕಂತೆ ಜನ ಬರುವುದಿಲ್ಲ. ಮೊದಲ ವಾರ ಶೇರಿಂಗ್ ಆಧಾರದಲ್ಲಿ ಪ್ರದರ್ಶನಕ್ಕೆ ಚಿತ್ರಮಂದಿರಗಳು ಒಪ್ಪುವುದಿಲ್ಲ. ನಂತರದ ವಾರಗಳಲ್ಲಿ ಸಿನಿಮಾ ಅಪ್‌ಲೋಡ್‌ಗೆ ಖರ್ಚು ಮಾಡಿದ ಹಣವೂ ನಿರ್ಮಾಪಕರಿಗೆ ಮರಳಿ ಬರುವುದಿಲ್ಲ. ಒಂದು ಸಿನಿಮಾ ಎಷ್ಟೇ ಜನಪ್ರಿಯವಾದರೂ ದೊಡ್ಡ ಮಟ್ಟದ ಹಿಟ್ ಆಗದೆ ಚಿತ್ರಮಂದಿರದಿಂದ ಹಣ ಗಳಿಸುತ್ತದೆ ಎಂಬುದು ಕಷ್ಟ. ಹೀಗಾಗಿ ಸ್ಟಾರ್‌ಗಳಿಲ್ಲದ ಸಿನಿಮಾಗಳಿಗೆ ಏಕಪರದೆ ಸೂಕ್ತ ಆಯ್ಕೆಯಲ್ಲ' ಎನ್ನುತ್ತಾರೆ 'ಬ್ಲಿಂಕ್' ಚಿತ್ರದ ನಿರ್ಮಾಪಕ ರವಿಚಂದ್ರ ಎ.ಜೆ.

ತಂತ್ರಜ್ಞಾನದ ದೃಷ್ಟಿಯಿಂದಲೂ ಮಲ್ಟಿಪ್ಲೆಕ್ಸ್‌ಗಳು ಸಿಂಗಲ್ ಸ್ಕ್ರೀನ್‌ಗಳಿಗಿಂತ ಮುಂದಿವೆ. ಮಲ್ಟಿಪ್ಲೆಕ್ಸ್‌ಗಳಲ್ಲಿ 2ಡಿ, 3ಡಿ ದೃಶ್ಯ ಅನುಭವ ನೀಡುವ ಪರದೆಗಳಿವೆ. ಸೌಂಡ್ ಎಫೆಕ್ಟ್‌ನಲ್ಲಿ ಡಾಲ್ಬಿ ಅಟ್ಮಾಸ್‌ನಂತಹ ತಂತ್ರಜ್ಞಾನಗಳಿವೆ. ಉತ್ತಮ ವಿಎಫ್‌ಎಕ್ಸ್, ಗ್ರಾಫಿಕ್ಸ್‌ನ ಸಿನಿಮಾಗಳಿಗೆ ಪ್ರೇಕ್ಷಕರಿಗೆ ಮಲ್ಟಿಪ್ಲೆಕ್ಸ್‌ಗಳೇ ಮೊದಲ ಆಯ್ಕೆ.

'ಇವತ್ತು ಬಹುತೇಕ ಏಕಪರದೆಗಳು ಅಪ್‌ಡೇಟ್ ಆಗಿವೆ. ಎಲ್ಲ ಕಡೆ ಡಿಜಿಟಲ್ ಸ್ಕ್ರೀನಿಂಗ್ ಇದೆ. ಮಲ್ಟಿಪ್ಲೆಕ್ಸ್‌ಗಳು ನೀಡುವ ಅನುಭವವನ್ನೇ ನೀಡುತ್ತಿವೆ. ಮಲ್ಟಿಪ್ಲೆಕ್ಸ್‌ಗಳು ಶೇಕಡ 40ರಷ್ಟು ಮುಚ್ಚಿವೆ. 11-12 ಸ್ಕ್ರೀನ್‌ಗಳಲ್ಲಿ ಸಿನಿಮಾ ಪ್ರದರ್ಶನ ಮಾಡುತ್ತಿದ್ದ ಮಲ್ಟಿಪ್ಲೆಕ್ಸ್‌ಗಳು ಈಗ 5-6 ಸ್ಕ್ರೀನ್‌ಗಳಿಗೆ ಬಂದು ನಿಂತಿವೆ. ಸಾವಿರ ಕೋಟಿ ರೂಪಾಯಿ ಬಾಚುವ ಸಿನಿಮಾಗಳು ಐದು ವರ್ಷಕ್ಕೊಮ್ಮೆ ಬರುತ್ತವೆ. ಸ್ಟಾರ್‌ಗಳ ಸಿನಿಮಾಗಳು ಈ ಸಮಸ್ಯೆಗೆ ಪರಿಹಾರವಲ್ಲ. 1960-70 ದಶಕದಲ್ಲಿ ಬರುತ್ತಿದ್ದ ಕಂಟೆಂಟ್ ಸಿನಿಮಾಗಳು ಬರಬೇಕು' ಎನ್ನುತ್ತಾರೆ ಕೆ.ವಿ.ಚಂದ್ರಶೇಖರ್.

ಏಕಪರದೆ ಚಿತ್ರಮಂದಿರಗಳು ತಾಂತ್ರಿಕವಾಗಿ ಅಪ್‌ಡೇಟ್ ಆಗಿದ್ದರೂ ಗುಣಮಟ್ಟದಲ್ಲಿ ಮಲ್ಟಿಪ್ಲೆಕ್ಸ್‌ಗಳ ಮಟ್ಟಕ್ಕೆ ತಲುಪಿಲ್ಲ. ಟಿಕೆಟ್ ದರ, ಚಿತ್ರಮಂದಿರದ ಒಳಗಿನ ದುಬಾರಿ ಆಹಾರಗಳಿಂದಾಗಿ ಸಿನಿಪ್ರಿಯರಿಗೆ ಏಕಪರದೆ ಚಿತ್ರಮಂದಿರಗಳು ಹಣ ಉಳಿತಾಯ ದೃಷ್ಟಿಯಿಂದ ಮೊದಲ ಆಯ್ಕೆ ಎನ್ನುವ ಮಾತೂ ಇದೆ.

ಆಹಾರ ಬೇಕು

'ಹೋಟೆಲ್, ದರ್ಶಿನಿಯೇ ಆಗಿರಲಿ, ಎ.ಸಿಯದ್ದೇ ಆಗಿರಲಿ, ಜನ ಬರಬೇಕಿದ್ದರೆ ಗುಣಮಟ್ಟದ ಆಹಾರ ಕೊಡಬೇಕು. ರಾಜ್ಯದ 150ಕ್ಕೂ ಅಧಿಕ ಚಿತ್ರಮಂದಿರಗಳು ದೊಡ್ಡ ಚಿತ್ರಗಳು ಬಿಡುಗಡೆಗೊಂಡಾಗ ಮಾತ್ರ ಬಾಗಿಲು ತೆರೆಯುತ್ತವೆ. ಜನ ಹೇಗೂ ಒಟಿಟಿಯಲ್ಲಿ ಬಂದೇ ಬರುತ್ತದೆ ಎಂಬ ಖಾತ್ರಿಯಲ್ಲಿರುತ್ತಾರೆ. ನಿರ್ಮಾಪಕರಿ ಒಟಿಟಿಯನ್ನು ಇನ್ನೊಂದು ಆದಾಯ ಮೂಲವಾಗಿಸಿಕೊಂಡಿದ್ದಾರೆ. ಹೀಗಾಗಿ ಅದನ್ನು ದೂರಲು ಸಾಧ್ಯವಿಲ್ಲ. ಚಿತ್ರಗಳು ಬೇರೆಲ್ಲೂ ಸಿಗದೆ ಚಿತ್ರಮಂದಿರದಲ್ಲಿ ಮಾತ್ರ ಸಿಗುವಂತೆ ಆಗಬೇಕು ಮತ್ತು ಚಿತ್ರಮಂದಿರದಲ್ಲಿಯೇ ನೋಡುವಂತಹ ಚಿತ್ರಗಳು ಬರಬೇಕು. ಆಹಾರ ರುಚಿಕರವಾಗಿದ್ದರೆ ಜನ ರಸ್ತೆಯಲ್ಲಿ ನಿಂತೇ ತಿನ್ನುವುದಿಲ್ಲವೇ' ಎಂದು ಪ್ರಶ್ನಿಸುತ್ತಾರೆ ಸಿನಿಮಾ ವಿತರಕ ಮಾರ್ಸ್ ಸುರೇಶ್. ❖

ಮುಂದಿನ ವರ್ಷಕ್ಕೆ 'ಕಾಂತಾರ' ಪ್ರೀಕ್ವೆಲ್

ರಿಷಬ್‌ಶೆಟ್ಟಿ

ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸುತ್ತಿರುವ 'ಕಾಂತಾರ–ಒಂದು ದಂತಕಥೆ'ಯ ಮೊದಲ ಅಧ್ಯಾಯದ (ಪ್ರೀಕ್ವೆಲ್) ಚಿತ್ರೀಕರಣ ಭರದಿಂದ ಸಾಗಿದೆ. ರಿಷಬ್ ಕರಾವಳಿಯಲ್ಲಿ ಬೀಡುಬಿಟ್ಟಿದ್ದಾರೆ. ಸಿನಿಮಾ ರಿಲೀಸ್‌ಗೂ ಮುನ್ನವೇ ದೊಡ್ಡ ಮೊತ್ತಕ್ಕೆ ಪ್ರೈಂ ವಿಡಿಯೊಗೆ ಮಾರಾಟವಾಗಿದೆ. ಆ ಕುರಿತು ಅವರು ಮಾತಿಗೆ ಸಿಕ್ಕರು...

'ಕಾಂತಾರ' ರೀತಿಯ ಕಥೆ ಇದ್ದಾಗ ಅದನ್ನು ಬರೆದು ಮುಗಿಸಲು ಒಂದು ವರ್ಷ ತೆಗೆದುಕೊಂಡೆ. ಮೊದಲ ಸಿನಿಮಾಗಿಂತ ಹೆಚ್ಚು ಸಂಶೋಧನೆ ಇದಕ್ಕೆ ಬೇಕಿತ್ತು. ಇದೊಂದು ದೊಡ್ಡ ಪ್ರಾಜೆಕ್ಟ್. ಪ್ರತಿದಿನದ ಸಭೆಗಳು, ಅದರಲ್ಲಿನ ಹಲವು ಸಲಹೆಗಳು, ಚರ್ಚೆಗಳು, ಬೃಹತ್ ಸೆಟ್‌ಗಳು..ಹೀಗೆ ಸಮಯ ಹೆಚ್ಚು ಹಿಡಿಯುತ್ತಿದೆ. 'ಕಾಂತಾರ' ಮೊದಲ ಭಾಗ ಮಾಡುವಾಗ ಮೂರ್ನಾಲ್ಕು ತಿಂಗಳಲ್ಲಿ ಬರೆದು ಮುಗಿಸಿದ್ದೆ. 2021ರ ಆಗಸ್ಟ್‌ನಲ್ಲಿ ಮುಹೂರ್ತ ನಡೆಸಿ, 2021ರ ಸೆಪ್ಟೆಂಬರ್‌ನಲ್ಲಿ ಶೂಟಿಂಗ್ ಆರಂಭಿಸಿ 2022ರ ಸೆಪ್ಟೆಂಬರ್‌ನಲ್ಲಿ ಅದನ್ನು ಬಿಡುಗಡೆಗೊಳಿಸಿದ್ದೆವು. ಪ್ರೀಕ್ವೆಲ್‌ನಂತಹ ಪ್ರಾಜೆಕ್ಟ್ ನನಗೂ ಹೊಸ ಅನುಭವ. ದೈಹಿಕವಾಗಿಯೂ ಹಲವು ಮಾರ್ಪಾಡುಗಳನ್ನು ಮಾಡಿಕೊಳ್ಳಬೇಕಿತ್ತು. ಸಿನಿಮಾಗಾಗಿ ಹತ್ತು ಕೆ.ಜಿ. ಏರಿಸಿಕೊಂಡು, ಎಂಟು ಕೆ.ಜಿ. ಇಳಿಸಿಕೊಂಡಿದ್ದೇನೆ. ಸಿನಿಮಾದಲ್ಲಿ ಹೆಚ್ಚಿನ ಪ್ರಮಾಣದ ಆ್ಯಕ್ಷನ್ಸ್ ಇದ್ದು, ಕಳೆದೊಂದು ವರ್ಷದಿಂದ ಕಳರಿಪಯಟ್ಟು ತರಬೇತಿ ಪಡೆದಿದ್ದೇನೆ. ಈ ಆವೃತ್ತಿಯಲ್ಲಿ ಕಂಬಳ ಇರುವುದಿಲ್ಲ. ಒಂದೊಂದು ಫ್ಯಾಕ್ಟರಿ ರೀತಿ ಸೆಟ್‌ನೊಳಗೆ ಕೆಲಸ ನಡೆಯುತ್ತಿದೆ. ಪತ್ನಿ ಪ್ರಗತಿ ತನ್ನದೇ ಆದ ವಸ್ತ್ರವಿನ್ಯಾಸದ ಫ್ಯಾಕ್ಟರಿ ನಡೆಸುತ್ತಿದ್ದಾಳೆ' ಎಂದರು ರಿಷಬ್.

'ಸದ್ಯ 'ಕಾಂತಾರ' ಪ್ರೀಕ್ವೆಲ್‌ನ ಚಿತ್ರೀಕರಣ ಆರಂಭಿಸಿದ್ದೇವೆ. ಒಂದು ಹಂತದ ಚಿತ್ರೀಕರಣ ಪೂರ್ಣಗೊಂಡಿದೆ. ಕೆಲ ದಿನಗಳ ಹಿಂದಷ್ಟೇ ಒಂದು ಪ್ರಮುಖ ಫೈಟ್ ಶೂಟಿಂಗ್ ಆಗಿದೆ. ಬೆಳಗಿನ ಜಾವ 3.30ಕ್ಕೆ ಮನೆ ಬಿಟ್ಟು ಸೆಟ್ ಸೇರಿಕೊಂಡು, ಮೇಕಪ್ ಬಳಿಕ 6 ರಿಂದ ಶೂಟಿಂಗ್ ಆರಂಭಿಸಿ ರಾತ್ರಿ 9ಕ್ಕೆ ಮನೆಗೆ ಮರಳುತ್ತಿದ್ದೇನೆ. ಶೂಟಿಂಗ್‌ಗೇ ನೂರಕ್ಕೂ ಅಧಿಕ ದಿನ ಬೇಕು' ಎಂದು ಮಾಹಿತಿ ನೀಡಿದರು.

'ಒತ್ತಡವಿಲ್ಲ': 'ನಾನು ಪ್ಯಾನ್ ಇಂಡಿಯಾ ಸಿನಿಮಾ ಮಾಡುತ್ತಿದ್ದೇನೆ ಎಂದು ತಲೆಕೆಡಿಸಿಕೊಳ್ಳುತ್ತಿಲ್ಲ. ಒತ್ತಡವಿಲ್ಲದೆ ಕೆಲಸ ಮಾಡುತ್ತಿದ್ದೇನೆ. ಪ್ಯಾನ್ ಇಂಡಿಯಾ ಎಂದರೆ ಬೇರೆ ಬೇರೆ ರಾಜ್ಯದ ನಟರನ್ನು ಹಾಕಿಕೊಳ್ಳಲೇಬೇಕು ಎನ್ನುವುದರಲ್ಲಿ ನನಗೆ ನಂಬಿಕೆ ಇಲ್ಲ. ಪ್ರೇಕ್ಷಕರು ಸಿನಿಮಾ ನೋಡುವಾಗ ಅಲ್ಲಿ ಯಾವ ನಟರಿದ್ದರೇನು, ಆ ಪಾತ್ರ ಹೇಗೆ ನಟಿಸುತ್ತಿದೆ ಎನ್ನುವುದಷ್ಟೇ ಮುಖ್ಯ. 'ಸರ್ಕಾರಿ..' ಸಿನಿಮಾಗೆ ದುಡ್ಡು ಹಾಕುವವರೇ ಇರಲಿಲ್ಲ. ಅದು ಚಿತ್ರಮಂದಿರದಲ್ಲಿ ₹20 ಕೋಟಿ ಕಲೆಕ್ಷನ್ ಮಾಡಿತು. ರಾಷ್ಟ್ರ ಪ್ರಶಸ್ತಿಯೂ ಬಂತು. ಹೀಗಾಗಿ ಎಲ್ಲ ಸಿನಿಮಾಗಳೂ ದೊಡ್ಡ ಸಿನಿಮಾಗಳೇ' ಎನ್ನುತ್ತಾರೆ ರಿಷಬ್.

'ನೂರು ಕೋಟಿಗೂ ಅಧಿಕ ಮೊತ್ತಕ್ಕೆ ಪ್ರೈಂಗೆ ಕಾಂತಾರ ಪ್ರೀಕ್ವೆಲ್ ಮಾರಾಟವಾಗಿದೆಯೇ' ಎಂಬ ಪ್ರಶ್ನೆಗೆ, 'ಆ ನಂಬರ್ ಸುದ್ದಿಗೆ ನಾನು ಹೋಗುವುದಿಲ್ಲ. ದೊಡ್ಡ ಮೊತ್ತಕ್ಕೆ ಮಾರಾಟವಾಗಿದೆ ಎಂದಷ್ಟೇ ಹೇಳಬಲ್ಲೆ. ಈ ಮೊತ್ತವನ್ನು ನಾನು ಕನಸಿನಲ್ಲೂ ಊಹಿಸಿರಲಿಲ್ಲ' ಎಂದರು ರಿಷಬ್. ❖

'ಸಣ್ಣ ಬಜೆಟ್‌ನ ಸಿನಿಮಾ ಮಾಡುತ್ತೇನೆ'

'ಒಂದು ಸಿನಿಮಾವನ್ನು ಇನ್ನೊಂದು ಸಿನಿಮಾ ಮೀರಿಸುತ್ತದೆ ಎನ್ನುವ ಆಲೋಚನೆಯೇ ನನಗಿಲ್ಲ. 'ಕಾಂತಾರ' ಪ್ರೀಕ್ವೆಲ್ ಬಳಿಕ ಸತತವಾಗಿ ಸಿನಿಮಾಗಳನ್ನು ಮಾಡುವ ಯೋಚನೆಯಿದೆ. ಪ್ರೀಕ್ವೆಲ್ ಮುಗಿದ ಬಳಿಕ 'ಬೆಲ್ ಬಾಟಂ', 'ಸರ್ಕಾರಿ..' ಮಾದರಿಯ ಸಣ್ಣ ಬಜೆಟ್‌ನ ಸಿನಿಮಾ ಮಾಡಬೇಕು ಎಂದಿದ್ದೇನೆ. ಈ ನಿಟ್ಟಿನಲ್ಲಿ ಕಥೆಗಳ ವಿಚಾರದಲ್ಲಿ ಚರ್ಚೆಗಳು ನಡೆಯುತ್ತಿದೆ. 'ಬೆಲ್ ಬಾಟಂ-2' ಮಾಡುವ ಯೋಚನೆ ಖಂಡಿತಾ ಇದೆ. ರಕ್ಷಿತ್ ಶೆಟ್ಟಿ ಅವರೂ ರಿಚರ್ಡ್ ಆ್ಯಂಟನಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಹೀಗಾಗಿ ಯೋಚಿಸಿದ್ದ ಸಿನಿಮಾಗಳನ್ನು ನಮಗೆ ಮಾಡಲು ಆಗಲಿಲ್ಲ. ಆದರೆ 'ಕಾಂತಾರ' ಪ್ರೀಕ್ವೆಲ್ ಬಿಡುಗಡೆಯಾಗುವವರೆಗೂ ಯಾವುದೇ ಪ್ರಾಜೆಕ್ಟ್‌ಗೆ ಕೈಹಾಕಲ್ಲ. ಬೇರೆ ನಿರ್ದೇಶಕರ ಜೊತೆ ಕೆಲಸ ಮಾಡುತ್ತೇನೆ. ರಿಲೀಸ್ ದಿನಾಂಕದ ಬಗ್ಗೆ ಒಂದು ಅಂದಾಜು ಇದೆ. ಹೊಂಬಾಳೆ ಫಿಲ್ಮ್ಸ್ ಈ ಬಗ್ಗೆ ನಿರ್ಧಾರ ಕೈಗೊಂಡು, ಘೋಷಣೆ ಮಾಡಲಿದೆ. ಈ ವರ್ಷಕ್ಕಂತೂ ಪ್ರೀಕ್ವೆಲ್ ಬರಲ್ಲ. 2025ಕ್ಕೆ ಸಿನಿಮಾ ಸಿದ್ಧವಾಗಲಿದೆ. ಕಾಂತಾರ ಪ್ರೀಕ್ವೆಲ್ ಕನ್ನಡದಲ್ಲೇ ಶೂಟಿಂಗ್ ಆಗಿ ಡಬ್ ಆಗಿ ಹೆಚ್ಚಿನ ಭಾಷೆಗಳಲ್ಲಿ ಏಕಕಾಲದಲ್ಲಿ ಸಿನಿಮಾ ಬಿಡುಗಡೆಯಾಗಲಿದೆ' ಎಂದರು ರಿಷಬ್.

Loveಲಿ ಗೆ ರಿಷಬ್ ಸಾಥ್

ವಸಿಷ್ಠ ಸಿಂಹ ನಟನೆಯ 'Love ಲಿ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟ, ನಿರ್ದೇಶಕ ರಿಷಬ್ ಶೆಟ್ಟಿ ಟ್ರೇಲರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

ರವೀಂದ್ರ ಕುಮಾರ್ ನಿರ್ಮಾಣದ ಚಿತ್ರಕ್ಕೆ ಚೇತನ್ ಕೇಶವ್ ಆ್ಯಕ್ಷನ್ ಕಟ್ ಹೇಳಿದ್ದಾರೆ. 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಚಿತ್ರದಿಂದ ನಾನು ವಸಿಷ್ಠ ಅವರ ಅಭಿನಯ ಹಾಗೂ ಕಂಠಕ್ಕೆ ಅಭಿಮಾನಿಯಾಗಿದ್ದೆ. ಈ ಚಿತ್ರದ ಟ್ರೇಲರ್ ತುಂಬಾ ಚೆನ್ನಾಗಿದೆ. ಚಿತ್ರ ಕೂಡ ಚೆನ್ನಾಗಿರುತ್ತದೆ ಎಂಬ ಭರವಸೆ ಇದೆ. ಚಿತ್ರ ಯಶಸ್ವಿಯಾಗಲಿ' ಎಂದರು ರಿಷಬ್ ಶೆಟ್ಟಿ.

'ಟ್ರೇಲರ್ ನೋಡಿದಾಗ ನಿಮಗೆ ಇದು ಆ್ಯಕ್ಷನ್ ಚಿತ್ರವೇ ಅಥವಾ ಭಾವನಾತ್ಮಕ ಚಿತ್ರವೇ ಎಂಬ ಪ್ರಶ್ನೆ ಮೂಡಬಹುದು. ಚಿತ್ರ ನೋಡುವಾಗ ನಿಮಗೆ ಉತ್ತರ ಸಿಗಲಿದೆ. ಚಿತ್ರ ಜೂನ್ 14 ರಂದು ತೆರೆಗೆ ಬರಲಿದೆ' ಎಂದರು ನಿರ್ದೇಶಕರು.

ಅನೂಪ್ ಸೀಳಿನ್ ಸಂಗೀತ ನೀಡಿದ್ದಾರೆ. ಅಶ್ವಿನ್ ಕೆನ್ನಡಿ ಛಾಯಾಚಿತ್ರಗ್ರಹಣ ಹಾಗೂ ಹರೀಶ್ ಕೊಮ್ಮೆ ಸಂಕಲನವಿದೆ. ಸ್ಟೆಫಿ ಪಟೇಲ್ ವಸಿಷ್ಠಗೆ ಜೋಡಿಯಾಗಿದ್ದಾರೆ. ಹಿರಿಯ ನಟ ದತ್ತಣ್ಣ, ನಟಿ ನಂದು, ಸಮೀಕ್ಷ, ಬೇಬಿ ವಂಶಿಕ ಮೊದಲಾದವರು ತಾರಾಗಣದಲ್ಲಿದ್ದಾರೆ.

ಸ್ಟೆಫಿ ಪಟೇಲ್

ಮೂರು ಚಿತ್ರಗಳು ತೆರೆಗೆ

ಸಾರಿಕಾ ರಾವ್

ಬಿಡುಗಡೆ ಸಿದ್ಧವಿರುವ ಹಲವಾರು ಚಿತ್ರಗಳಿವೆ. ಚಿತ್ರಮಂದಿರಗಳಲ್ಲಿ ಚಿತ್ರ ಪ್ರದರ್ಶನಕ್ಕಾಗಿ ಪೈಪೋಟಿಯೂ ಇಲ್ಲ. ಆದಾಗ್ಯೂ, ಚುನಾವಣೆ ಕಳೆದು ತಿಂಗಳಾದರೂ ಚಿತ್ರ ಬಿಡುಗಡೆಗೆ ಆಸಕ್ತಿ ತೋರುತ್ತಿಲ್ಲ...

ಸಹಾರಾ: ಮಹಿಳಾ ಕ್ರಿಕೆಟ್ ಕುರಿತಾಗಿನ ಕಥೆ ಹೊಂದಿರುವ ಚಿತ್ರ ಇಂದು (ಜೂ.7) ತೆರೆ ಕಾಣುತ್ತಿದೆ. ನಟಿ ಸಾರಿಕಾ ರಾವ್ ಮುಖ್ಯಭೂಮಿಕೆಯಲ್ಲಿರುವ ಚಿತ್ರಕ್ಕೆ ಮಂಜೇಶ್ ಭಗವತ್ ಆ್ಯಕ್ಷನ್ ಕಟ್ ಹೇಳಿದ್ದಾರೆ. 'ಈ ಚಿತ್ರ ಮಂಡ್ಯ ಹುಡುಗಿ ಕ್ರಿಕೆಟರ್ ಆದ ಕಥೆಯನ್ನು ಹೊಂದಿದೆ. ಸಾರಿಕಾ ರಾವ್ ಪಾತ್ರಕ್ಕಾಗಿಯೇ ರಣಜಿ ಆಟಗಾರರಾದ ಕೆ.ಬಿ. ಪವನ್ ಬಳಿ ಕ್ರಿಕೆಟ್ ಆಟದ ಬಗ್ಗೆ ತರಬೇತಿ ಪಡೆದುಕೊಂಡು ಬಂದು ನಂತರ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ' ಎಂದಿದೆ ಚಿತ್ರತಂಡ. ಮಾ ಕ್ರಿಯೆಷನ್ಸ್ ನಿರ್ಮಾಣದ ಚಿತ್ರದಲ್ಲಿ ಮಂಜುನಾಥ ಹೆಗಡೆ, ಕುರಿ ಸುನಿಲ್ ಪ್ರಕಾಶ್ ಶೆಟ್ಟಿ ಮುಂತಾದವರು ಅಭಿನಯಿಸಿದ್ದಾರೆ. ಕ್ರಿಕೆಟ್ ಆಧಾರಿಸಿದ ಈ ಚಿತ್ರಕ್ಕೆ ಕಿಚ್ಚ ಸುದೀಪ್ ನಿರೂಪಣೆ ಮಾಡಿದ್ದಾರೆ. ಆಂಥೋನಿ ರುತ್ ವಿನ್ಸೆಂಟ್ ಛಾಯಾಚಿತ್ರಗ್ರಹಣ, ಸೂರಜ್ ಜೋಯಿಸ್ ಸಂಗೀತವಿದೆ.

ಅನರ್ಥ: 'ಗುಪ್ತಗಾಮಿನಿ', 'ಪ್ರೀತಿ ಇಲ್ಲದ ಮೇಲೆ' ಮುಂತಾದ ಧಾರಾವಾಹಿಗಳ ಸಂಚಿಕೆ ನಿರ್ದೇಶಕರಾಗಿದ್ದ ರಮೇಶ್ ಕೃಷ್ಣ ಆ್ಯಕ್ಷನ್-ಕಟ್ ಹೇಳಿರುವ 'ಅನರ್ಥ' ಈ ವಾರ ತೆರೆ ಕಾಣುತ್ತಿರುವ ಮತ್ತೊಂದು ಚಿತ್ರ.

'ಬಲಹೀನತೆಯಿಂದ ಕ್ರೂರತನ ಹುಟ್ಟುತ್ತದೆ' ಎಂಬ ಅಡಿಬರಹವಿದೆ. 'ಅವಕಾಶ್-ಆಕೃತಿ ಎರಡು ಪಾತ್ರಗಳ ಸುತ್ತ ಚಿತ್ರವು ಸಾಗುತ್ತದೆ. ಇಬ್ಬರು ಪ್ರೀತಿಸಿರುತ್ತಾರೆ. ಅಮಾವ್ಯಾಸೆ ದಿನ ಯಮಗಂಡ ಕಾಲದಲ್ಲಿ ಮದುವೆಯಾಗಲು ನಿರ್ಧರಿಸಿ, ಒಬ್ಬರನ್ನೊಬ್ಬರು ಅರಿತುಕೊಳ್ಳಲು ಒಂದು ಸ್ಥಳಕ್ಕೆ ಹೋಗುತ್ತಾರೆ. ಅಲ್ಲಿಗೆ ಹೋದಾಗ ಏನಾಗುತ್ತದೆ ಎಂಬುದನ್ನು ಚಿತ್ರದಲ್ಲಿ ನೋಡಬೇಕು' ಎನ್ನುತ್ತಾರೆ ನಿರ್ದೇಶಕರು.

ತೇಜಸ್ ಸಿನಿ ಕ್ರಿಯೇಶನ್ಸ್ ಮೂಲಕ ಶ್ರೀಧರ್ ಎನ್.ಸಿ.ಹೊಸಮನೆ ಬಂಡವಾಳ ಹೂಡಿದ್ದಾರೆ. ನಾಯಕ ವಿಶಾಲ್ ಮಣ್ಣೂರು ಅವರಿಗೆ ವಿಹಾನಿ ಜೋಡಿಯಾಗಿದ್ದಾರೆ. ವಿ.ನಾಗೇಂದ್ರಪ್ರಸಾದ್ ಸಾಹಿತ್ಯ-ಸಂಗೀತ, ಕುಮಾರ್‌ಗೌಡ ನಾಗವಾರ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಯಂಗ್ ಮ್ಯಾನ್: ಬಹುತೇಕ ಹೊಸಬರಿಂದಲೇ ಕೂಡಿರುವ 'ಯಂಗ್ ಮ್ಯಾನ್' ಚಿತ್ರ ತೆರೆ ಕಾಣುತ್ತಿದೆ. ಮುತ್ತುರಾಜ್ ಈ ಚಿತ್ರವನ್ನು ನಿರ್ದೇಶಿಸಿದ್ದು, ವಿಜಯಲಕ್ಷ್ಮಿ ರಾಮೇಗೌಡ ನಿರ್ಮಾಣ ಮಾಡಿದ್ದಾರೆ. ಸಿಂಗಲ್ ಟೇಕ್‌ನಲ್ಲಿಯೇ ಚಿತ್ರವನ್ನು ಚಿತ್ರೀಕರಣ ಮಾಡಿರುವುದಾಗಿ ತಂಡ ಹೇಳಿದೆ. ಲೋಕಿ ಸಂಗೀತ ನಿರ್ದೇಶನ ಹಾಗೂ ನಾಗರಾಜ್ ವೀನಸ್ ಮೂರ್ತಿ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಸುನೀಲ್ ಗೌಡ, ರಾಶಿಕಾ ಕರಾವಳಿ, ಹರೀಶ್ ಆಚಾರ್ಯ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ❖

'ಮಂಡೇಲಾ'ನಾದ ಸ್ಟೈಲ್ ಶ್ರೀನು

ಈ ಹಿಂದೆ 'ಓ ಮೈ ಲವ್', 'ಬಳ್ಳಾರಿ ದರ್ಬಾರ್' ಮೊದಲಾದ ಚಿತ್ರಗಳಲ್ಲಿ ನಟಿಸಿದ್ದ ಸ್ಟೈಲ್ ಶ್ರೀನು 'ಮಂಡೇಲಾ'ನಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಶ್ರೀಧರ್ ಪೂರ್ವಜಿತ್ ಈ ಚಿತ್ರದ ನಿರ್ದೇಶಕರು. ಶ್ರೀಲಕ್ಷ್ಮಿ ನರಸಿಂಹ ಪಿಕ್ಚರ್ಸ್ ಬ್ಯಾನರ್ ಅಡಿಯಲ್ಲಿ ಚಿತ್ರ ನಿರ್ಮಾಣವಾಗುತ್ತಿದೆ.

'1980- 90ರ ದಶಕದಲ್ಲಿನ ಸೂಕ್ಷ್ಮ ಹಾಗೂ ಸುಂದರವಾದ ಭಾವನೆಗಳ ಸುತ್ತ ನಡೆಯುವ ಕಥೆ. ಇಬ್ಬರು ನಾಯಕಿಯರಿದ್ದು ಹುಡುಕಾಟ ನಡೆದಿದೆ. ಕನ್ನಡ, ತೆಲುಗು, ತಮಿಳು ಭಾಷೆಗಳಲ್ಲಿ ಈ ಚಿತ್ರ ನಿರ್ಮಾಣವಾಗುತ್ತಿದೆ. ಜುಲೈ ಮೊದಲ ವಾರದಿಂದ ಚಿತ್ರೀಕರಣ ಪ್ರಾರಂಭವಾಗಲಿದೆ' ಎನ್ನುತ್ತಾರೆ ನಿರ್ದೇಶಕರು.

ಉಳಿದ ತಂತ್ರಜ್ಞರಿಗಾಗಿ ಹುಡುಕಾಟ ನಡೆಸುತ್ತಿರುವುದಾಗಿ ಚಿತ್ರತಂಡ ಹೇಳಿದೆ.

14ಕ್ಕೆ 'ಶಿವಮ್ಮ' ತೆರೆಗೆ

ಬೂಸಾನ್ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ 'ನ್ಯೂ ಕರೆಂಟ್ಸ್' ವಿಭಾಗದಲ್ಲಿ ಪ್ರಶಸ್ತಿ ಪಡೆದ, ರಿಷಬ್ ಶೆಟ್ಟಿ ನಿರ್ಮಾಣದ 'ಶಿವಮ್ಮ' ಸಿನಿಮಾ ಜೂನ್ 14ರಂದು ತೆರೆಕಾಣಲಿದೆ. ಜೈಶಂಕರ್ ಆರ್ಯರ್ ನಿರ್ದೇಶನದ ಈ ಚಿತ್ರದಲ್ಲಿ ಯರೇಹಂಚಿನಹಾಳದ ಶರಣಮ್ಮ ಮುಖ್ಯಭೂಮಿಕೆಯಲ್ಲಿ ನಟಿಸಿರುವ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿತು. 'ಒಂದು ಕಿರುಚಿತ್ರೋತ್ಸವದ ಮೂಲಕ ನನಗೆ ದೊರೆತ ಪ್ರತಿಭೆ ಜೈಶಂಕರ್. 'ಕಥಾಸಂಗಮ' ಸಿನಿಮಾದಲ್ಲಿ ಏಳು ಕಥೆಗಳಲ್ಲಿ ಒಂದು ಕಥೆ ಇವರದ್ದು. 'ಶಿವಮ್ಮ' ಕೂಡಾ ಒಂದು ಕಮರ್ಷಿಯಲ್ ಸಿನಿಮಾ. ಬೂಸಾನ್ ಚಿತ್ರೋತ್ಸವದಲ್ಲಿ ದೊರೆತ ಪ್ರಶಸ್ತಿಯ ಮೊತ್ತದಲ್ಲೇ ಸಿನಿಮಾದ ಅರ್ಧ ಖರ್ಚು ಬಂದಿದೆ. ನಾನು ಈ ಸಿನಿಮಾವನ್ನು ವ್ಯವಹಾರದ ದೃಷ್ಟಿಯಿಂದ ನೋಡುತ್ತಿಲ್ಲ. ಹೆಚ್ಚಿನ ಜನರು ಈ ಸಿನಿಮಾವನ್ನು ವೀಕ್ಷಿಸಲು ಮುಂದಾದರೆ ಟಿಕೆಟ್ ದರ ಇಳಿಸಲೂ ನಾನು ಸಿದ್ಧ' ಎನ್ನುತ್ತಾರೆ ರಿಷಬ್ ಶೆಟ್ಟಿ.

'ಶಿವಮ್ಮ' ಬಳಿಕ 'ಪೆದ್ರೊ', ಪ್ರಮೋದ್ ಶೆಟ್ಟಿ ನಟನೆಯ 'ಲಾಫಿಂಗ್ ಬುದ್ಧ' ಬಿಡುಗಡೆಯಾಗಲಿದೆ' ಎಂದು ರಿಷಬ್ ಮಾಹಿತಿ ನೀಡಿದರು. ❖

'ಸಮಯ' ಪರೀಕ್ಷೆಗಿಳಿದ ತಂಡ!



ಈಗಾಗಲೇ ನಾಲ್ಕು ಚಿತ್ರಗಳನ್ನು ನಿರ್ಮಿಸಿರುವ ನಿರ್ದೇಶಕ, ನಿರ್ಮಾಪಕ ಎಸ್.ಆರ್. ಪ್ರಮೋದ್ ಮತ್ತೆ 'ಸಮಯ' ಪರೀಕ್ಷೆಗಿಳಿದಿದ್ದಾರೆ.

'ತಂದೆ, ಮಗನ ನಡುವಿನ ಬಾಂಧವ್ಯವನ್ನು ಹೇಳುವ ಚಿತ್ರ. ಅಪ್ಪನಾದವನು ಕಷ್ಟಪಟ್ಟು, ಸಾಲ ತೆಗೆದುಕೊಂಡು, ಸರ್ವಸ್ವವನ್ನು ತ್ಯಾಗ ಮಾಡಿ, ಪುತ್ರನ ವಿದ್ಯಾಭ್ಯಾಸ ಮಾಡಿಸಲು ಮುಂದಾಗುತ್ತಾನೆ. ಆದರೆ ಪುಂಡ ಮಗ ಓದದೆ ಕುಟುಂಬದ ನೆಮ್ಮದಿ ಹಾಳು ಮಾಡುತ್ತಾನೆ. ಆತ ಸರಿ ಹೋಗುತ್ತಾನಾ? ಮನೆಯ ಪರಿಸ್ಥಿತಿ ಏನಾಗುತ್ತದೆ? ಪ್ರೀತಿಸಿದವಳು ಏನಾಗುತ್ತಾಳೆ? ಎಂಬುದೇ ಚಿತ್ರಕಥೆ' ಎಂದರು ನಿರ್ದೇಶಕರು. ಹೊಸ ಪ್ರತಿಭೆ ರಮ್ಯ ನಾಯಕಿ. ಭೀಮಣ್ಣ ನಾಯ್ಕ್, ಕಿಟ್ಟಿ, ಚಂದ್ರಶೇಖರ್, ಮಂಜು ಮಡಬ ಮುಂತಾದವರು ಬಣ್ಣ ಹಚ್ಚಿದ್ದಾರೆ. ಮಲ್ಲೇಶ್.ಪಿ.ವಿಜ್ಞು ಸಾಹಿತ್ಯದ ಎರಡು ಹಾಡುಗಳಿಗೆ ಕೇವೀನ್ ಸಂಗೀತ ಸಂಯೋಜಿಸಿದ್ದಾರೆ. ಗಿರೀಶ್ ಛಾಯಾಚಿತ್ರಗ್ರಹಣವಿದೆ. ಮೈಸೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ❖

ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ಕಲ್ಯಾಣ ಕರ್ನಾಟಕ ಜಿಲ್ಲೆಗಳ ಕೆಲವೆಡೆ ಉತ್ತಮ ಮಳೆ

ವರ್ಷಧಾರೆ: ಹಲವೆಡೆ ಜಮೀನು ಜಲಾವೃತ

ಪ್ರಜಾವಾಣಿ ವಾರ್ತೆ



ಬಾಗಲಕೋಟೆ ಜಿಲ್ಲೆ ಬಾದಾಮಿಯ ಸುತ್ತಲಿನ ಬೆಟ್ಟದಲ್ಲಿ ಗುರುವಾರ ಧಾರಾಕಾರ ಮಳೆಯಿಂದಾಗಿ ಜೋಡಿ ಜಲಧಾರೆಗಳು (ಅಕ್ಕತಂಗಿಯರ ದಿಡುಗು) ಧುಮ್ಮಿಕ್ಕುತ್ತ ಅಗಸ್ತ್ಯತೀರ್ಥ ಹೊಂಡಕ್ಕೆ ಸೇರಿದವು (ಎಡ ಚಿತ್ರ) ದಾವಣಗೆರೆ ಜಿಲ್ಲೆ ಬಸವಾಪಟ್ಟಣ ಹೊಲವೊಂದರಲ್ಲಿ ಜಮೀನು ಜಲಾವೃತವಾಗಿತ್ತು –ಪ್ರಜಾವಾಣಿ ಚಿತ್ರಗಳು

ಶಿವಮೊಗ್ಗ/ಹುಬ್ಬಳ್ಳಿ: ರಾಜ್ಯದಲ್ಲಿ ಗುರುವಾರ ಶಿವಮೊಗ್ಗ, ಹುಬ್ಬಳ್ಳಿ, ಕೊಪ್ಪಳ, ಚಿತ್ರದುರ್ಗ ಹಾಗೂ ಕಲ್ಯಾಣ ಕರ್ನಾಟಕದ ಜಿಲ್ಲೆಗಳ ವಿವಿಧೆಡೆ ಉತ್ತಮ ಮಳೆಯಾಗಿದೆ. ಹಲವೆಡೆ ಜಮೀನು, ಹೊಲ ಜಲಾವೃತವಾಗಿವೆ. ಪ್ರತ್ಯೇಕ ಘಟನೆಗಳಲ್ಲಿ ಸಿಡಿಲು ಬಡಿದು ಬಾಲಕ ಸೇರಿ ಮೂವರು ಮೃತಪಟ್ಟಿದ್ದಾರೆ.

ಶಿವಮೊಗ್ಗ ನಗರದಲ್ಲಿ ಒಂದೂವರೆ ಗಂಟೆ ಧಾರಾಕಾರ ಮಳೆಯಾಗಿದ್ದು, ಬಾಪೂಜಿ ನಗರ, ಹೊಸಮನೆ ಬಡಾವಣೆ ಸೇರಿ ವಿವಿಧೆಡೆ ಮನೆಗಳಿಗೆ ನೀರು ನುಗ್ಗಿ ಜನರು ಪರಿತಪಿಸಿದರು.

ದಾವಣಗೆರೆ ನಗರ ಸೇರಿ ಜಿಲ್ಲೆಯಲ್ಲಿ ಒಂದು ಗಂಟೆ ಮಳೆಯಾಗಿದೆ. ಹೊನ್ನಾಳಿ, ಜಗಳೂರು, ಹರಿಹರ, ಚನ್ನಗಿರಿ, ಬಸವಾಪಟ್ಟಣ ವ್ಯಾಪ್ತಿಯಲ್ಲಿ ಮಳೆಯಾಗಿದೆ. ಹಳ್ಳ–ಕೊಳ್ಳಗಳು ತುಂಬಿ ಹರಿದಿವೆ. ಹೊನ್ನಾಳಿ ವ್ಯಾಪ್ತಿಯಲ್ಲಿ ಮುಂಗಾರು ಹಂಗಾಮಿನ ಬಿತ್ತನೆಗೆ ಸಿದ್ಧತೆ ನಡೆದಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಹೊಸದುರ್ಗ ಸುತ್ತಮುತ್ತ, ಚಿಕ್ಕಜಾಜೂರು, ನಾಯಕನ ಹಟ್ಟಿ, ಮೊಳಕಾಲ್ಮುರು ವ್ಯಾಪ್ತಿಯಲ್ಲಿ ಮಳೆಯಾಗಿದೆ.

ಹುಬ್ಬಳ್ಳಿ ವರದಿ: ಉತ್ತರ ಕರ್ನಾಟಕದಲ್ಲಿ ಬೆಳಗಾವಿ, ಬಾಗಲಕೋಟೆ, ಗದಗ ಮತ್ತು ಬಳ್ಳಾರಿ ಜಿಲ್ಲೆಯ ಕೆಲವೆಡೆ ಧಾರಾಕಾರ ಮಳೆಯಾಯಿತು.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ, ಗೋಕಾಕ ಹಾಗೂ ಗದಗ ಜಿಲ್ಲೆಯ ಗದಗ ಬೆಟಗೇರಿ, ಲಕ್ಷ್ಮೇಶ್ವರದಲ್ಲಿ ಸಾಧಾರಣ ಮಳೆಯಾಯಿತು.

ಜಲಾನಯನ ಪ್ರದೇಶಗಳಲ್ಲಿ ಮಳೆ ಆಗುತ್ತಿದ್ದು, ವಿಜಯನಗರ ಜಿಲ್ಲೆ ತುಂಗಭದ್ರಾ ಜಲಾಶಯಕ್ಕೆ ಒಳಹರಿವು ಏರಿಕೆಯಾಗಿದೆ. ಗುರುವಾರ ಒಳಹರಿವಿನ ಪ್ರಮಾಣ 1,670 ಕ್ಯೂಸೆಕ್ ಇತ್ತು. 105.78 ಟಿಎಂಸಿ ಅಡಿ ನೀರು ಸಂಗ್ರಹ ಸಾಮರ್ಥ್ಯದ ಜಲಾಶಯದಲ್ಲಿ ಸದ್ಯ 3.63 ಟಿಎಂಸಿ ಅಡಿ ನೀರಿದೆ.

ಬಾಗಲಕೋಟೆ ಜಿಲ್ಲೆ ಬಾದಾಮಿ ಪಟ್ಟಣ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಭಾರಿ ಗಾಳಿ ಮತ್ತು ಗುಡುಗು ಸಿಡಿಲಿನ ಅಬ್ಬರದೊಂದಿಗೆ ಅರ್ಧ ತಾಸು ಧಾರಾಕಾರವಾಗಿ ಮಳೆ ಸುರಿಯಿತು.

ಬೆಟ್ಟದ ಪರಿಸರದಲ್ಲಿ ಸುರಿದ ರಭಸದ ಮಳೆಯಿಂದ ಬೆಟ್ಟದ ಬಳಿಯ ಜೋಡಿ ಜಲಧಾರೆಗಳು ಧುಮ್ಮಿಕ್ಕಿದವು. ಜೋಡಿ ಜಲಧಾರೆಯನ್ನು ನಿಸರ್ಗ ಪ್ರಿಯರು ವೀಕ್ಷಿಸಿ ಸಂತಸಪಟ್ಟರು.

ಚಿಕ್ಕಮಗಳೂರು ವರದಿ: ಚಿಕ್ಕಮಗಳೂರು ನಗರದಲ್ಲಿ ಮಳೆಯಿಂದಾಗಿ ಹಲವು ರಸ್ತೆಗಳು ಜಲಾವೃತವಾದವು. ತರೀಕೆರೆ, ಕಡೂರು, ಎನ್.ಆರ್.ಪುರ, ಕೊಪ್ಪ ವ್ಯಾಪ್ತಿಯಲ್ಲಿ ಸಾಧಾರಣ ಮಳೆಯಾಗಿದೆ.

ಕಲ್ಯಾಣ ಕರ್ನಾಟಕದ ಕೊಪ್ಪಳ, ಕಲಬುರಗಿ ನಗರ, ಬೀದರ ಜಿಲ್ಲೆಯ ವಿವಿಧೆಡೆಯೂ ಉತ್ತಮ ಮಳೆಯಾಗಿದೆ. ಕೃಷಿ ಚಟುವಟಿಕೆಗಳು ಗರಿಗೆದರಿವೆ.

ಮೈಸೂರು ವರದಿ: ಮೈಸೂರು ಮತ್ತು ಚಾಮರಾಜನಗರದ ಜಿಲ್ಲೆಯ ವಿವಿಧೆಡೆಯೂ ಒಂದುಗಂಟೆ ಕಾಲ ಉತ್ತಮ ಮಳೆಯಾಗಿದ್ದು, ಹಲವೆಡೆ ರಸ್ತೆಗಳು ಜಲಾವೃತಗೊಂಡಿದ್ದವು.

ಐದು ದಿನ ರಾಜ್ಯದ ವಿವಿಧೆಡೆ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ಕರಾವಳಿ ಸೇರಿ ರಾಜ್ಯದ ವಿವಿಧೆಡೆ ಮುಂದಿನ ಐದು ದಿನ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

'ಇದೇ 10ರವರೆಗೆ ರಾಜ್ಯದ ಕೆಲ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಕಲಬುರಗಿ, ವಿಜಯಪುರ, ಬಾಗಲಕೋಟೆ, ಬೆಳಗಾವಿ, ಚಿತ್ರದುರ್ಗ, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗೆ ಶುಕ್ರವಾರ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳ ಜತೆಗೆ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಯ ಒಂದೆರಡು ಕಡೆ ಭಾರಿ ಮಳೆಯಾಗುವ ಸಾಧ್ಯತೆ ಇದೆ. ಬೀದರ್, ಯಾದಗಿರಿ ಜಿಲ್ಲೆಗಳ ಒಂದೆರಡು ಕಡೆ ಮಳೆಯ ಜತೆಗೆ 30 ರಿಂದ 40 ಕಿ.ಮೀ. ಗಾಳಿ ಬೀಸುವ ಸಂಭವವಿದೆ ಎಂದು ಇಲಾಖೆ ಹೇಳಿದೆ.

ಮೀನುಗಾರರಿಗೆ ಎಚ್ಚರಿಕೆ: ಕರಾವಳಿಯಲ್ಲಿ ಶುಕ್ರವಾರ ಗಂಟೆಗೆ 55 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದೆ. ಆದ್ದರಿಂದ ಮೀನುಗಾರರು ಎಚ್ಚರಿಕೆ ವಹಿಸಬೇಕು ಎಂದು ಇಲಾಖೆ ಸಲಹೆ ಮಾಡಿದೆ.

'ಇದೇ 8ರಿಂದ ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಒಂದೆರಡು ಕಡೆ ಭಾರಿಯಿಂದ ಭಾರಿ ಮಳೆಯಾಗುವ ಸಾಧ್ಯತೆ ಇದೆ. ಮುಂದಿನ ಎರಡು ದಿನಗಳು ಒಳನಾಡಿನಲ್ಲಿ ಗರಿಷ್ಠ ಹಾಗೂ ಕನಿಷ್ಠ ತಾಪಮಾನವು 2ರಿಂದ 3 ಡಿಗ್ರಿ ಸೆಲ್ಸಿಯಸ್ ಕಡಿಮೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಡಾಕ್ಟರ್ ಗೆಲುವು: ಮಾದಪ್ಪನಿಗೆ ಹರಕೆ, ಮುಡಿ ಕೊಟ್ಟ ಮುಸ್ಲಿಂ ಮುಖಂಡ

ಪ್ರಜಾವಾಣಿ ವಾರ್ತೆ

ಕನಕಪುರ (ರಾಮನಗರ): ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಡಾ.ಸಿ.ಎನ್. ಮಂಜುನಾಥ್ ಗೆಲುವಿಗಾಗಿ ಹರಕೆ ಹೊತ್ತಿದ್ದ ತಾಲ್ಲೂಕಿನ ಜೆಡಿಎಸ್ ಮುಖಂಡ ಯೂನಿಸ್ ಅಲಿಖಾನ್ ಮಲೆ ಮಹದೇಶ್ವರ ದೇವಸ್ಥಾನದಲ್ಲಿ ಮುಡಿ ಕೊಟ್ಟಿದ್ದಾರೆ.

ಚುನಾವಣೆ ಫಲಿತಾಂಶ ಹೊರಬಿದ್ದ ಮಾರನೇಯ ದಿನ ಬುಧವಾರ, ಖಾನ್ ತಮ್ಮೂರಿನ ಪಕ್ಷದ ಕಾರ್ಯಕರ್ತರೊಂದಿಗೆ ಚಾಮರಾಜನಗರ ಜಿಲ್ಲೆಯ ಮಹದೇಶ್ವರ ದೇವಸ್ಥಾನಕ್ಕೆ ತೆರಳಿದ್ದರು. ದೇವರಿಗೆ ಪೂಜೆ ಸಲ್ಲಿಸಿದ ಬಳಿಕ, ಮುಡಿ ಕೊಟ್ಟು ಹರಕೆ ತೀರಿಸಿದ್ದಾರೆ.

ತಾಲ್ಲೂಕಿನ ಉಯ್ಯಂಬಳ್ಳಿ ಹೋಬಳಿ ದೊಡ್ಡಕೊಪ್ಪ ಗ್ರಾಮದ ಖಾನ್ ಅವರು ಹರಕೆ ತೀರಿಸಿದ ವಿಡಿಯೊ, ಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರು ಜಾಲತಾಣಗಳಲ್ಲಿ ವಿಡಿಯೊ, ಚಿತ್ರ ಹಂಚಿಕೊಂಡಿದ್ದಾರೆ.

ಕನಕಪುರದ ಜೆಡಿಎಸ್ ಮುಖಂಡ ಯೂನಿಸ್ ಅಲಿಖಾನ್ ಅವರು ಮಲೆ ಮಹದೇಶ್ವರ ದೇವಸ್ಥಾನಕ್ಕೆ ತೆರಳಿ ಮುಡಿ ಕೊಟ್ಟು ಹರಕೆ ತೀರಿಸಿದರು.

ಹೆಸರು ಘೋಷಣೆಯಾದಾಗಲೇ ಹರಕೆ: 'ಚುನಾವಣೆಗೆ ಕ್ಷೇತ್ರದಿಂದ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಡಾ.ಮಂಜುನಾಥ್ ಹೆಸರು ಘೋಷಣೆ ಆದ ಕೂಡಲೇ ಹರಕೆ ಹೊತ್ತಿದ್ದೆ. ಡಾಕ್ಟರ್ ಗೆಲುವು ಸಾಧಿಸಿದ್ದಾರೆ. ಹಾಗಾಗಿ, ಹರಕೆ ತೀರಿಸಿದ್ದೇನೆ' ಎಂದು ಮುಡಿ ಕೊಟ್ಟ ಬಳಿಕ ದೇವಸ್ಥಾನದ ಆವರಣದಲ್ಲಿ ಮಾಡಿರುವ ವಿಡಿಯೊದಲ್ಲಿ ಯೂನಿಸ್ ಖಾನ್ ಹೇಳಿದ್ದಾರೆ.

ಸಿಡಿಲು ಬಡಿದು ಮೂವರು ಸಾವು

ಪ್ರಜಾವಾಣಿ ವಾರ್ತೆ

ಕೊಪ್ಪಳ: ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ತಾವರಗೇರಾ ಹೋಬಳಿ ಜುಮಲಾಪೂರ ದಲ್ಲಿ ರತ್ನಮ್ಮ ದೊಡ್ಡಪ್ಪ ಓತಗೇರಿ (43) ಜಮೀನಿಗೆ ತೆರಳಿದ್ದಾಗ ಸಿಡಿಲು ಬಡಿದು ಮೃತಪಟ್ಟರು.

ಜಿಲ್ಲೆಯಾದ್ಯಂತ ಉತ್ತಮ ಮಳೆಯಾಗಿದ್ದು, ಬಿರುಗಾಳಿಗೆ ಹಲವೆಡೆ ಮರಗಳು ಉರುಳಿಬಿದ್ದಿವೆ.

ಮತ್ತೊಂದು ಪ್ರಕರಣದಲ್ಲಿ ಶಿವಮೊಗ್ಗ ತೀರ್ಥಹಳ್ಳಿ ತಾಲ್ಲೂಕಿನ ಗುಬ್ಬಿಗಾ ಗ್ರಾಮದಲ್ಲಿ ಸಿಡಿಲು ಬಡಿದು ಕೃಷಿ ಕಾರ್ಮಿಕ ನಾಗೇಂದ್ರ ಎಮ್.ಎಸ್. (45) ಮೃತಪಟ್ಟರು.

ಗದಗ ಜಿಲ್ಲೆ ನರಗುಂದದ ಗುಡ್ಡದಕೇರಿ ಓಣಿಯ ಕುರಿಗಾಹಿ ಯಲ್ಲಪ್ಪ ಹನುಮಂತ ಕಿಲಿಕೈ (17) ಬೈರನಹಟ್ಟಿ ಗ್ರಾಮದ ಬಳಿ ಕುರಿ ಕಾಯುವಾಗ, ಸಿಡಿಲು ಬಡಿದು ಮೃತಪಟ್ಟರು.

ಲೋಕಸಭೆ ಚುನಾವಣೆ: ವಿಜೇತ, ಪರಾಜಿತರ ಜೊತೆ ಸಭೆ

ಕೋರ್ಟ್‌ಗೆ ರಾಹುಲ್ ಇಂದು ಹಾಜರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಪತ್ರಿಕೆಗಳಲ್ಲಿ ಸುಳ್ಳು ಜಾಹೀರಾತು ನೀಡಿ ಬಿಜೆಪಿ ವರ್ಚಸ್ಸಿಗೆ ಧಕ್ಕೆ ತಂದ ಆರೋಪದಡಿ ದಾಖಲಿಸಲಾಗಿರುವಮಾನನಷ್ಟ ಮೊಕದ್ದಮೆಗೆ ಸಂಬಂಧಿಸಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಶುಕ್ರವಾರ (ಜೂನ್ 7) ಹಾಜರಾಗಲಿದ್ದಾರೆ.

ಇದೇ ಮೊಕದ್ದಮೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ನ್ಯಾಯಾಲಯ ಈಗಾಗಲೇ ಷರತ್ತುಬದ್ಧ ಜಾಮೀನು ನೀಡಿದೆ.

ಬಿಜೆಪಿಯ ರಾಜ್ಯ ಘಟಕದ ಕಾರ್ಯದರ್ಶಿ ಹಾಗೂ ವಿಧಾನಪರಿಷತ್ ಸದಸ್ಯ ಬಿ.ಎಸ್. ಕೇಶವಪ್ರಸಾದ್ ಸಲ್ಲಿಸಿರುವ ಖಾಸಗಿ ದೂರನ್ನು 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ'ದ 42ನೇ ಎಸಿಎಂಎಂ ಕೋರ್ಟ್ ವಿಚಾರಣೆಗೆ ಅಂಗೀಕರಿಸಿ ಆರೋಪಿಗಳಿಗೆ ಸಮನ್ಸ್ ಜಾರಿಗೊಳಿಸಿತ್ತು. ಈ ಪ್ರಕರಣದಲ್ಲಿ ಕಾಂಗ್ರೆಸ್ ಪಕ್ಷ ಮೊದಲ ಆರೋಪಿ. ಎರಡನೇ ಆರೋಪಿ ಡಿ.ಕೆ. ಶಿವಕುಮಾರ್. ಮೂರನೇ ಆರೋಪಿ ಸಿದ್ದರಾಮಯ್ಯ, ನಾಲ್ಕನೇ ಆರೋಪಿ ರಾಹುಲ್ ಗಾಂಧಿ.

ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರು ಜೂನ್ 1ರಂದು ಖುದ್ದು ಹಾಜರಾಗಿದ್ದರು. ರಾಹುಲ್ ಗಾಂಧಿ ಜೂನ್ 7 ಖುದ್ದು ಹಾಜರಾಗಲು ನಿರ್ದೇಶಿಸಿ ನ್ಯಾಯಾಧೀಶರು ವಿಚಾರಣೆ ಮುಂದೂಡಿದ್ದರು.

'ಶುಕ್ರವಾರ ಬೆಳಿಗ್ಗೆ ಬೆಂಗಳೂರಿಗೆ ಬರಲಿರುವ ರಾಹುಲ್ ಗಾಂಧಿ ನ್ಯಾಯಾಲಯಕ್ಕೆ ಹಾಜರಾಗಲಿದ್ದಾರೆ. ಆ ಬಳಿಕ, ಲೋಕಸಭೆ ಚುನಾವಣೆಯಲ್ಲಿ ವಿಜೇತರಾದ ಹಾಗೂ ಪರಾಜಿತರಾದ ಅಭ್ಯರ್ಥಿಗಳ ಜೊತೆಗೆ ಪಕ್ಷದ ಕಚೇರಿಯಲ್ಲಿ ಸಭೆ ನಡೆಸುವರು. ಸಭೆಯಲ್ಲಿ ಸಿ.ಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಭಾಗವಹಿಸಲಿದ್ದಾರೆ. ಸಂಜೆ 5 ಗಂಟೆಗೆ ರಾಹುಲ್ ದೆಹಲಿಗೆ ಮರಳಲಿದ್ದಾರೆ' ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಪರಿಷತ್: ಯತೀಂದ್ರ, ಸಿ.ಟಿ. ರವಿ ಸೇರಿದಂತೆ 11 ಮಂದಿ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಿಂದ ವಿಧಾನಪರಿಷತ್‌ಗೆ ನಡೆದ ದ್ವೈವಾರ್ಷಿಕ ಚುನಾವಣೆಯಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್‌ನ 11 ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆ ಆಗಿದ್ದಾರೆ.

ಕಾಂಗ್ರೆಸ್‌ನ ಎನ್.ಎಸ್. ಬೋಸರಾಜು, ಐವನ್ ಡಿಸೋಜ, ಕೆ.ಗೋವಿಂದರಾಜ್, ಜಗದೇವ ಗುತ್ತೇದಾರ್, ಡಾ.ಯತೀಂದ್ರ, ಎ.ವಸಂತ ಕುಮಾರ್, ಬಿಲ್ಕಿಸ್ ಬಾನು, ಬಿಜೆಪಿಯ ಸಿ.ಟಿ.ರವಿ, ಎನ್.ರವಿಕುಮಾರ್ ಮತ್ತು ಎಂ.ಜಿ.ಮುಳೆ, ಜೆಡಿಎಸ್‌ನಿಂದ ಟಿ.ಎನ್. ಜವರಾಯಿಗೌಡ ಆಯ್ಕೆಯಾದವರು.

ನಾಮಪತ್ರ ವಾಪಸ್ ಪಡೆಯಲು ಗುರುವಾರ ಮಧ್ಯಾಹ್ನ 3ರವರೆಗೆ ಕಾಲಾವಕಾಶವಿತ್ತು. ಯಾರೂ ನಾಮಪತ್ರ ಹಿಂದಕ್ಕೆ ಪಡೆಯದ ಕಾರಣ, ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಎಂ.ಕೆ. ವಿಶಾಲಾಕ್ಷಿ ಘೋಷಿಸಿದರು.

ಒಟ್ಟು 11 ಸ್ಥಾನಗಳಿಗೆ 12 ಮಂದಿ ನಾಮಪತ್ರ ಸಲ್ಲಿಸಿದ್ದರು. ವಿಧಾನಸಭೆಯಲ್ಲಿನ ಸಂಖ್ಯಾಬಲಕ್ಕೆ ಅನುಗುಣವಾಗಿ ಕಾಂಗ್ರೆಸ್‌ಗೆ 7, ಬಿಜೆಪಿ 3 ಮತ್ತು ಜೆಡಿಎಸ್‌ಗೆ 1 ಸ್ಥಾನ ನಿಗದಿಯಾಗತ್ತು. ಕಾಂಗ್ರೆಸ್‌ನ ಆಸಿಫ್ ಪಾಷಾ ಎಂಬವರು ನಾಮಪತ್ರ ಸಲ್ಲಿಸಿದ್ದರು. ಅವರಿಗೆ ಸೂಚಕರಿಲ್ಲದ ಕಾರಣ ನಾಮಪತ್ರವನ್ನು ತಿರಸ್ಕರಿಸಲಾಯಿತು. ಅಂತಿಮವಾಗಿ 11 ಮಂದಿ ಮಾತ್ರ ಕಣದಲ್ಲಿ ಉಳಿದಿದ್ದರು.

ನ್ಯಾಯಾಂಗ ಬಂಧನಕ್ಕೆ ನಟಿ ಹೇಮಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನೇಕಲ್ ತಾಲ್ಲೂಕಿನ ಜಿ.ಆರ್.ಫಾರ್ಮ್ ಹೌಸ್‌ನಲ್ಲಿ ನಡೆದಿದ್ದ ರೇವ್ ಪಾರ್ಟಿ ಪ್ರಕರಣದಲ್ಲಿ ಮಾದಕ ವಸ್ತು ಸೇವನೆ ಹಾಗೂ ತನಿಖೆಯ ದಿಕ್ಕು ತಪ್ಪಿಸುವ ಉದ್ದೇಶದಿಂದ ವಿಡಿಯೊ ಮಾಡಿ ಹರಿಬಿಟ್ಟ ಆರೋಪದಲ್ಲಿ ಬಂಧನಕ್ಕೆ ಒಳಗಾಗಿರುವ ತೆಲುಗು ನಟಿ ಹೇಮಾ ಅವರನ್ನು ಮತ್ತೆ 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಪ್ರಕರಣದಲ್ಲಿ ಹೆಚ್ಚಿನ ವಿಚಾರಣೆಗಾಗಿ ಹೇಮಾ ಅವರನ್ನು ಒಂದು ದಿನದ ಮಟ್ಟಿಗೆ ಸಿಸಿಬಿ ಕಸ್ಟಡಿಗೆ ಪಡೆದುಕೊಂಡಿತ್ತು. ಕಸ್ಟಡಿ ಅಂತ್ಯಗೊಂಡ ಕಾರಣ ಗುರುವಾರ ಸಂಜೆ 6 ಗಂಟೆ ಸುಮಾರಿಗೆ ಆರೋಪಿಯನ್ನು ಆನೇಕಲ್‌ನ ಕೋರ್ಟ್‌ಗೆ ಹಾಜರು ಪಡಿಸಲಾಗಿತ್ತು.

ಆರೋಪಿಗೆ ನ್ಯಾಯಾಂಗ ಬಂಧನ ವಿಸ್ತರಿಸಿ ಕೋರ್ಟ್ ಆದೇಶಿಸಿದೆ. ಆ ನಂತರ ಆರೋಪಿಯನ್ನು ಪರಪ್ಪನ ಅಗ್ರಹಾರ ಕಾರಾಗೃಹಕ್ಕೆ ಕಳುಹಿಸಲಾಗಿದೆ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

'ನಾನು ಮಾದಕ ವಸ್ತು ಸೇವನೆ ಮಾಡಿಲ್ಲ. ದುರುದ್ದೇಶಪೂರ್ವಕವಾಗಿ ನನ್ನ ಮೇಲೆ ಆರೋಪ ಹೊರಿಸಲಾಗಿದೆ-ಯೆಂದು ವಿಚಾರಣೆ ವೇಳೆ ನಟಿ ಹೇಮಾ ಹೇಳಿಕೆ ನೀಡಿದ್ದಾರೆ' ಎಂದು ಮೂಲಗಳು ಹೇಳಿವೆ.

ಆಸ್ಪತ್ರೆ: ಎತ್ತರದ ಕಟ್ಟಡಕ್ಕೆ ಎನ್‌ಒಸಿ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 21 ಮೀಟರ್‌ಗಿಂತಲೂ ಎತ್ತರದ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಸಗಿ ವೈದ್ಯಕೀಯ ಸಂಸ್ಥೆಗಳು ಅಗ್ನಿ ಸುರಕ್ಷತಾ ಕ್ರಮಗಳನ್ನು ಕೈಗೊಂಡಿರುವ ಬಗ್ಗೆ ಅಗ್ನಿಶಾಮಕ ಇಲಾಖೆಯಿಂದ ನಿರಾಕ್ಷೇಪಣಾ ಪ್ರಮಾಣ ಪತ್ರ (ಎನ್‌ಒಸಿ) ಪಡೆಯುವುದನ್ನು ಕಡ್ಡಾಯಗೊಳಿಸಿ ಆರೋಗ್ಯ ಇಲಾಖೆ ಸುತ್ತೋಲೆ ಹೊರಡಿಸಿದೆ.

ರಾಷ್ಟ್ರೀಯ ಕಟ್ಟಡ ನಿಯಮಾವಳಿ ಪ್ರಕಾರ ಎತ್ತರದ ಕಟ್ಟಡಗಳು ಎನ್‌ಒಸಿ ಹೊಂದುವುದು ಕಡ್ಡಾಯ. ನವದೆಹಲಿಯ ಖಾಸಗಿ ಆಸ್ಪತ್ರೆಯಲ್ಲಿ ಇತ್ತೀಚೆಗೆ ನಡೆದ ಅಗ್ನಿ ಅವಘಡಕ್ಕೆ ಅಗ್ನಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದಿರುವುದೇ ಕಾರಣ. ಹಾಗಾಗಿ, ರಾಜ್ಯದಲ್ಲಿ 21 ಮೀಟರ್‌ಗಿಂತ ಎತ್ತರದ ಕಟ್ಟಡಗಳಲ್ಲಿ ಕಾರ್ಯ-ನಿರ್ವಹಿಸುತ್ತಿರುವ ಪ್ರತಿಯೊಂದು ಆಸ್ಪತ್ರೆಯೂ ಅಗ್ನಿ ಸುರಕ್ಷತಾ ಕ್ರಮಗಳನ್ನು ಕೈಗೊಂಡಿರುವ ಬಗ್ಗೆ ಎನ್‌ಒಸಿಯನ್ನು ಕಡ್ಡಾಯವಾಗಿ ಪಡೆಯಬೇಕು ಎಂದು ಹೇಳಲಾಗಿದೆ.

21 ಮೀಟರ್‌ಗಿಂತ ಕಡಿಮೆ ಎತ್ತರದ ಕಟ್ಟಡಗಳಲ್ಲಿರುವ ಖಾಸಗಿ ಆಸ್ಪತ್ರೆ-ಗಳಲ್ಲಿ ಅಗ್ನಿ ಸುರಕ್ಷತಾ ಕ್ರಮಗಳನ್ನು ಕೈಗೊಂಡಿರುವ ಬಗ್ಗೆ ಸ್ವಯಂ ಘೋಷಣಾ ಪತ್ರವನ್ನು ಅಗ್ನಿ ಶಾಮಕ ಇಲಾಖೆಗೆ ಸಲ್ಲಿಸಬೇಕು ಎಂದು ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

ನಿಧನ ವಾರ್ತೆ

ಕಾಪು ಸಿದ್ಧಲಿಂಗಸ್ವಾಮಿ

ಮೈಸೂರು: ಬಿಜೆಪಿ ಮುಖಂಡ ಕಾಪು ಸಿದ್ಧಲಿಂಗ ಸ್ವಾಮಿ (56) ಅನಾರೋಗ್ಯದಿಂದ ಬುಧವಾರ ರಾತ್ರಿ ನಿಧನರಾದರು.

ಅವಿವಾಹಿತರಾಗಿದ್ದ ಅವರಿಗೆ ತಂದೆ, ಸಹೋದರ, ಸಹೋದರಿ ಇದ್ದಾರೆ. ಸ್ವಗ್ರಾಮ, ನಂಜನಗೂಡು ತಾಲ್ಲೂಕಿನ ಕಾರ್ಯ ಗ್ರಾಮದಲ್ಲಿ ಗುರುವಾರ ಅಂತ್ಯಕ್ರಿಯೆ ನಡೆಯಿತು.

ಕೆಲ ವರ್ಷ ಬಿ.ಎಸ್.ಯಡಿಯೂರಪ್ಪ ಅವರ ಆಪ್ತ ಸಹಾಯಕರಾಗಿದ್ದರು. 2013ರಲ್ಲಿ ವರುಣ ಕ್ಷೇತ್ರದಲ್ಲಿ ಕೆಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸಿದ್ದರಾಮಯ್ಯ ಎದುರು ಸೋತಿದ್ದರು.

2021ರಲ್ಲಿ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿದ್ದರು. ಬಿಜೆಪಿ ರೈತ ಮೋರ್ಚಾ ಪದಾಧಿಕಾರಿಯೂ ಆಗಿದ್ದರು.

ಎಸ್‌ಎಸ್‌ಎಲ್‌ಸಿ: ಹೆಚ್ಚಿದ ಅಂಕ ಭೂಮಿಕಾ ರಾಜ್ಯಕ್ಕೇ ದ್ವಿತೀಯ

ಪ್ರಜಾವಾಣಿ ವಾರ್ತೆ

ಮುದ್ದೇಬಿಹಾಳ: ಎಸ್‌ಎಸ್‌ಎಲ್‌ಸಿ ಉತ್ತರಪತ್ರಿಕೆಗಳ ಮರುಮೌಲ್ಯಮಾಪನದಲ್ಲಿ ನಾಲ್ಕು ಅಂಕ ಹೆಚ್ಚು ಬಂದಿದ್ದು, ತಾಲ್ಲೂಕಿನ ನಾಗರಬೆಟ್ಟ ಆಕ್ಸಫರ್ಡ್ ಪಾಟೀಲ್ಸ್ ಇಂಗ್ಲಿಷ್ ಮಾಧ್ಯಮ ಪ್ರೌಢಶಾಲೆ ವಿದ್ಯಾರ್ಥಿನಿ ಭೂಮಿಕಾ ಮಹಾದೇವ ಜುಮನಾಳ ರಾಜ್ಯಕ್ಕೆ 2ನೇ ಸ್ಥಾನ ಪಡೆದಿದ್ದಾರೆ.

ಫಲಿತಾಂಶ ಪ್ರಕಟವಾದಾಗ ಭೂಮಿಕಾ 625ಕ್ಕೆ 620 ಅಂಕ ಪಡೆದಿದ್ದರು. ಮೂರು ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ್ದರು. ಇಂಗ್ಲಿಷ್‌ನಲ್ಲಿ 98ರ ಬದಲು 100, ಹಿಂದಿಯಲ್ಲಿ 98ರ ಬದಲು 100 ಅಂಕ ಬಂದಿವೆ. ಒಟ್ಟು 625ಕ್ಕೆ 624 ಅಂಕ ಗಳಿಸಿದ್ದು ರಾಜ್ಯಕ್ಕೆ ಎರಡನೇ ರ‍್ಯಾಂಕ್, ಜಿಲ್ಲೆಗೆ ಮೊದಲ ಸ್ಥಾನ ಪಡೆದಿದ್ದಾರೆ ಎಂದು ಬಿಇಒ ಬಿ.ಎಸ್. ಸಾವಳಗಿ ಮಾಹಿತಿ ನೀಡಿದ್ದಾರೆ.

ಎಚ್‌.ಡಿ ಕುಮಾರಸ್ವಾಮಿಗೆ ಸಚಿವ ಸ್ಥಾನ ಖಚಿತ

ಯಾರಿಗೆಲ್ಲ ಸಚಿವ ಸ್ಥಾನ?: ಲೆಕ್ಕಾಚಾರ ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದಲ್ಲಿ ಜೆಡಿಎಸ್‌ನಿಂದ ಎಚ್‌.ಡಿ.ಕುಮಾರಸ್ವಾಮಿ ಅವರಿಗೆ ಸಚಿವ ಸ್ಥಾನ ಸಿಗುವುದು ಬಹುತೇಕ ಖಚಿತವಾಗಿದ್ದು, ಬಿಜೆಪಿಯಿಂದ ಗೆದ್ದಿರುವ ಯಾರಿಗೆ ಮತ್ತು ಎಷ್ಟು ಮಂದಿಗೆ ಮಂತ್ರಿ ಸ್ಥಾನ ಸಿಗಲಿದೆ ಎಂಬ ಲೆಕ್ಕಾಚಾರ ಶುರುವಾಗಿದೆ.

ಎನ್‌ಡಿಎ ಮಿತ್ರ ಪಕ್ಷಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸಚಿವ ಸ್ಥಾನಗಳನ್ನು ನೀಡಬೇಕಾಗಿರುವ ಕಾರಣ ಬಿಜೆಪಿಗೆ ಈ ಬಾರಿ ಹೆಚ್ಚಿನ ಸಚಿವ ಸ್ಥಾನ ಸಿಗುವ ಸಾಧ್ಯತೆ ಕಡಿಮೆ. ಹೀಗಾಗಿ, ರಾಜ್ಯದಿಂದ ಗೆದ್ದಿರುವ ಕೇಂದ್ರದ ಮಾಜಿ ಸಚಿವ ಪ್ರಲ್ಹಾದ ಜೋಶಿ, ಮಾಜಿ ಮುಖ್ಯಮಂತ್ರಿಗಳಾದ ಜಗದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿ, ಗೋವಿಂದ ಕಾರಜೋಳ, ವಿ.ಸೋಮಣ್ಣ, ಪಿ.ಸಿ. ಗದ್ದಿಗೌಡರ್ ಪೈಕಿ ಕನಿಷ್ಠ ಇಬ್ಬರು ಅಥವಾ ಮೂವರಿಗೆ ಸಚಿವ ಸ್ಥಾನ ಸಿಗಬಹುದು ಎಂಬ ಲೆಕ್ಕಾಚಾರ ನಡೆದಿದೆ.

ಲಿಂಗಾಯತರ ಕೋಟಾದಡಿ ಪಕ್ಷದಲ್ಲಿ ಅತ್ಯಂತ ಹಿರಿಯರಾದ ಜಗದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿ, ಗದ್ದಿಗೌಡರರಲ್ಲಿ ಒಬ್ಬರನ್ನು ಪರಿಗಣಿಸಬಹುದು. ಪರಿಶಿಷ್ಟ ಜಾತಿಯ ಎಡಗೈ ಪಂಗಡಕ್ಕೆ ಸೇರಿದ ಗೋವಿಂದ ಕಾರಜೋಳ ಅವರಿಗೂ ಅವಕಾಶ ಸಿಕ್ಕಿದರೆ ಅಚ್ಚರಿ ಇಲ್ಲ ಎಂಬ ಲೆಕ್ಕಾಚಾರವೂ ಇದೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ವರಿಷ್ಠರ ಸೂಚನೆಯಂತೆ ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಸೋತಿದ್ದ ವಿ.ಸೋಮಣ್ಣ ಅವರಿಗೆ ಸಚಿವ ಸ್ಥಾನ ಸಿಕ್ಕಿದರೂ ಆಶ್ಚರ್ಯವಿಲ್ಲ. ಹಿಂದಿ ಮತ್ತು ಇಂಗ್ಲಿಷ್ ಭಾಷೆಯ ಹಿಡಿತ, ಜನತಾಪರಿವಾರದ ಹಿನ್ನೆಲೆಯ ಕಾರಣಕ್ಕೆ ಬೊಮ್ಮಾಯಿ ಅವರಿಗೂ ಅವಕಾಶ ಸಿಗಬಹುದು ಎಂದೂ ಹೇಳಲಾಗುತ್ತಿದೆ.

ಯಾರಿಗೆಲ್ಲ ಸಚಿವ ಸ್ಥಾನ ನೀಡಬೇಕು ಎಂಬುದನ್ನು ವರಿಷ್ಠರೇ ತೀರ್ಮಾನಿ-ಸಲಿರುವುದರಿಂದ ರಾಜ್ಯ ನಾಯಕರು ಸಲಹೆ ನೀಡುವ ಸಾಧ್ಯತೆಗಳಿಲ್ಲ. ಈ ಹಿಂದಿನ ಸರ್ಕಾರದಲ್ಲಿ ಪ್ರಲ್ಹಾದ ಜೋಶಿ, ನಾರಾಯಣಸ್ವಾಮಿ, ಭಗವಂತ ಖೂಬ ಮತ್ತು ಶೋಭಾ ಕರಂದ್ಲಾಜೆ ಸಚಿವರಾಗಿದ್ದರು. ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆ ಆಗಿದ್ದ ನಿರ್ಮಲಾ ಸೀತಾರಾಮನ್ ಮತ್ತು ರಾಜೀವ್ ಚಂದ್ರಶೇಖರ್ ಸಂಪುಟದಲ್ಲಿ ಸ್ಥಾನ ಪಡೆದಿದ್ದರು. ಈ ಬಾರಿ ನಿರ್ಮಲಾ ಅವರನ್ನು ಸಂಪುಟಕ್ಕೆ ಸೇರಿಸಿಕೊಂಡರೆ, ಕರ್ನಾಟಕದಿಂದ ಬ್ರಾಹ್ಮಣ ಸಮುದಾಯದ ಮತ್ತೊಬ್ಬ ಪ್ರತಿನಿಧಿಗೆ ಅವಕಾಶ ಇರುವುದಿಲ್ಲ. ಈ ಕಾರಣಕ್ಕೂ ಜೋಶಿಯವರಿಗೆ ಅವಕಾಶ ತಪ್ಪಬಹುದು ಎನ್ನಲಾಗುತ್ತಿದೆ.

ಜೆಡಿಎಸ್ ಮೂರು ಸ್ಥಾನಗಳಲ್ಲಿ ಸ್ಪರ್ಧಿಸಿ ಎರಡು ಸ್ಥಾನಗಳಲ್ಲಿ ಗೆದ್ದಿದೆ. ಹೀಗಾಗಿ ಒಬ್ಬರಿಗೆ ಮಾತ್ರ ಸಚಿವ ಸ್ಥಾನ ಸಿಗಲಿದೆ. 'ಕುಮಾರಸ್ವಾಮಿ ಅವರಿಗೆ ಕೃಷಿ ಖಾತೆ ಬಗ್ಗೆ ಆಸಕ್ತಿ ಇದ್ದರೂ, ಇಂತಹದ್ದೇ ಖಾತೆ ಕೊಡಿ ಎಂದು ಪಟ್ಟು ಹಿಡಿಯುವುದಿಲ್ಲ. ಅವರು ಯಾವುದನ್ನು ಕೊಡುತ್ತಾರೋ ಅದನ್ನು ಒಪ್ಪುವ ಸಾಧ್ಯತೆ ಇದೆ' ಎಂದು ಜೆಡಿಎಸ್ ಮೂಲಗಳು ಹೇಳಿವೆ

ಕರ್ನಾಟಕ ಸರ್ಕಾರ

ಕಾರ್ಯಾಲಯ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೀದರ.

ಸಂ: ಕಾನಿಅ/ಪಂರಾಇಂವಿ/ಬೀದರ/ತಾಶಾ–3/2024–25/ 235 ದಿನಾಂಕ: 6–06–2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯುರ್‌ಮೆಂಟ್)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ ರಾಜ್ ಇಂಜಿನಿಯರಿಂಗ ವಿಭಾಗ, ಬೀದರ ಇವರಿಂದ 2023–24ನೇ ಸಾಲಿನ ಕೆ.ಕೆ.ಆರ್.ಡಿ.ಬಿ. ಯೋಜನೆಯಡಿ ಮಂಜೂರಾದ 12 ಕಾಮಗಾರಿಗಳಿಗೆ (ಕನಿಷ್ಠ ರೂ. 1,62,000.00 (Rupees One Lakhs Sixty Two Thousand only) ಮತ್ತು ಗರಿಷ್ಠ ರೂ.76,59,000.00 ಮೊತ್ತದ (Rupees Seventy Six Lakhs Fifty Nine Thousand only) ಗುತ್ತಿಗೆದಾರರನ್ನು ನೇಮಿಸಲು, ಪೂರೈಕೆದಾರರು/ಒದಗಿಸುವವ ಕೆ.ಟಿ.ಪಿ.ಪಿ. ಕಾಯ್ದೆ ನಿಬಂಧನೆಗೊಳಪಟ್ಟು ಕೆ.ಪಿ.ಪಿ.ಪಿ.ನಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಅಂತರಜಾಲ ತಾಣ https://kppp.karnataka.gov.inನ್ನು ಸಂಪರ್ಕಿಸಬಹುದು.

ಟೆಂಡರ್ ಪ್ರಕ್ರಿಯೆ ದಿನಾಂಕಗಳು: 1. ಇ–ಪ್ರಾಕ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 06.06.2024 ರಿಂದ 15.06.2024 16:00 ಗಂಟೆವರೆಗೆ, 2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 17.06.2024 ರಂದು 16:00 ಗಂಟೆ ನಂತರ, 3. ಆರ್ಥಿಕ ಬಿಡ್ ತೆರೆಯುವ ದಿನಾಂಕ : 20.06.2024 ರಂದು 11:00 ಗಂಟೆ ನಂತರ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬೀದರ.

ವಾ.ಸಾ.ಸಂ.ಇ/ಬೀದರ/07/ಕೆಎಸ್‌ಎಂಸಿ&ಎ/2024–25

ದಿ ಗದಗ ಕೋ–ಆಪ್‌ರೇಟಿವ್ ಇಂಡಸ್ಟ್ರೀಯಲ್ ಎಸ್ಟೇಟ್ ಲಿಮಿಟೆಡ್, ಗದಗ

ಕ್ರ.ಸಂ. : GCIE/Tender/2024-25 ದಿನಾಂಕ: 06.06.2024

ದಿ ಗದಗ ಕೋ–ಆಪ್‌ರೇಟಿವ್ ಇಂಡಸ್ಟ್ರೀಯಲ್ ಎಸ್ಟೇಟ್ ಲಿಮಿಟೆಡ್, ಗದಗ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಗದಗದಲ್ಲಿ ತಿರಂಗಾ ಪಾರ್ಕ ಪ್ರದರ್ಶನ ಕೇಂದ್ರ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಿಂದ ನೋಂದಣಿ ಮಾಡಿಸಿದ ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಕೆ.ಟಿ.ಟಿ.ಪಿ. ನಿಯಮಾವಳಿಗಳಿಗೆ (KW-4) ಪ್ರಕಾರ ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ www.kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು.

ಗುತ್ತಿಗೆ ಕಾರ್ಯಕ್ರಮದ ವಿವರಗಳು ಇಂತಿವೆ (Calender of Events)

1	ಗುತ್ತಿಗೆದಾರರಪ್ರಿ–ಬಿಡ್ ಮಿಟಿಂಗ್ ದಿನಾಂಕ	26.06.2024 ಬೆಳಿಗ್ಗೆ 10.30 ಘಂಟೆಗೆ.
2	ಖಾಲಿ ಟೆಂಡರ ಫಾರ್ಮಗಾಗಿ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್ ಬಿ ಗಳನ್ನು ವೆಬ್‌ಸೈಟನಲ್ಲಿ ಭರ್ತಿ ಮಾಡಿ, ಸಲ್ಲಿಸುವ ದಿನಾಂಕ	05.07.2024 ಸಾಯಂಕಾಲ 4.00 ಘಂಟೆಗೆ
3	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	06.07.2024 ಸಾಯಂಕಾಲ 4.30 ಘಂಟೆಗೆ
4	ಆರ್ಥಿಕ ಬಿಡ್ ತೆರೆಯುವ ದಿನಾಂಕ	08.07.2024 ಸಾಯಂಕಾಲ 4.30 ಘಂಟೆಗೆ

ಕಾಮಗಾರಿಯ ವಿವರ ಈ ಕೆಳಗಿನಂತಿದೆ.

ಕ್ರ ಸಂ.	ಕಾಮಗಾರಿ	ಟೆಂಡರಿಗಿಟ್ಟ ಮೊತ್ತ (ರೂ. ಗಳಲ್ಲಿ)	ಮುಂಗಡ ಠೇವಣಿ (ರೂ. ಗಳಲ್ಲಿ)	ಗುತ್ತಿಗೆದಾರರ ದರ್ಜೆ	ಕಾಮಗಾರಿ ಪೂರ್ಣ ಗೊಳಿಸುವ ಕಾಲಾವಧಿ
1	CONSTRUCTION OF TIRANGA PARK EXHIBITION CENTER AND DELHI HAAT IN GADAG TOWN OF GADAG CO-OPERATIVE INDUSTRIAL ESTATE LIMITED IN GADAG DISTRICT. GCOIE/202425/BD/WORK_INDENT1	28492285.03	285000/–	1ನೇ ದರ್ಜೆ ಮೇಲ್ಪಟ್ಟು	11 ತಿಂಗಳು

ಟೆಂಡರ ಫಾರ್ಮಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ www.kppp.karnataka.gov.in ನಲ್ಲಿ ಲಾಗ್ ಇನ್ ಮಾಡಿ ನೋಡಬಹುದು. ಯಾವುದೇ ಕಾರಣ ನೀಡದೆ, ಟೆಂಡರಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದವರು ಹೊಂದಿರುತ್ತಾರೆ.

ಸಹಿ/- ಕಾರ್ಯದರ್ಶಿಗಳು, ದಿ ಗದಗ ಕೋ-ಆಪ್‌ರೇಟಿವ್ ಇಂಡಸ್ಟ್ರೀಯಲ್ ಎಸ್ಟೇಟ್ ಲಿಮಿಟೆಡ್

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಜಲಭವನ, ನಂ. 6, 1ನೇ ಘಟ್ಟ, 1ನೇ ಹಂತ, ಬಿಟಿಎಂ ಲೇಔಟ್, ಬನ್ನೇರುಘಟ್ಟ ಮುಖ್ಯ ರಸ್ತೆ, ಬೆಂಗಳೂರು – 560 029. ದೂ: 080–41106504 – 18

ಇ–ಮೇಲ್: cekwbbng@gmail.com ವೆಬ್‌ಸೈಟ್: https://kppp.karnataka.gov.in

ಅಲ್ಪಾವಧಿ ಟೆಂಡರ್ ಪ್ರಕಟಣೆ

(KPPP ಮೂಲಕ ಮಾತ್ರ)

ಈ ಕೆಳಕಂಡ ಕಾಮಗಾರಿಗಳಿಗೆ ಅರ್ಹ ಏಜೆನ್ಸಿ/ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು (ದ್ವಿ ಲಕೋಟೆ ಪದ್ಧತಿಯಲ್ಲಿ) ಆಹ್ವಾನಿಸಲಾಗಿದೆ.

1) ಸಂಖ್ಯೆ: KWB/TEC/CE(B)/DCE/CTD/AMRUT2.0/171/2024-25, Dtd: 06.06.2024

ಕಾಮಗಾರಿಯ ಹೆಸರು: "ಅಮೃತ್–2 ಯೋಜನೆಯಡಿಯಲ್ಲಿ ಹೊಸದುರ್ಗ, ಹೊಳಲ್ಕೆರೆ ಮತ್ತು ಜಗಳೂರು ಪಟ್ಟಣಗಳಿಗೆ ಸುಧಾರಿತ ನೀರು ಸರಬರಾಜು ಯೋಜನೆ ಕಾಮಗಾರಿಗಳು 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಒಳಗೊಂಡಂತೆ (ದೋಷದ ಹೊಣೆಗಾರಿಕೆ 1 ವರ್ಷ ಅವಧಿ ಸೇರಿದಂತೆ) ವಿನ್ಯಾಸ, ನಿರ್ಮಾಣ, ಕಾರ್ಯಾಚರಣೆ ಮತ್ತು ವರ್ಗಾವಣೆ (DBOT) ಮಾದರಿಯಲ್ಲಿ" (ಇಡಗಂಟು (Lumpsum) ಟೆಂಡರ್ – ಯಾವುದೇ ವೇರಿಯೇಷನ್ ಇರುವುದಿಲ್ಲ. **ಇಂಡೆಂಟ್ ಸಂಖ್ಯೆ: KUWSDB/2024-25/WS/WORK_INDENT206**

ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ನಲ್ಲಿ ಸಂಪರ್ಕಿಸಬಹುದು.

ಸಹಿ/– ಮುಖ್ಯ ಅಭಿಯಂತರರು (ಬೆಂ), ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು

ವಾ.ಸಾ.ಸಂ.ಇ/209/ಆಕಾರ್/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ರಸ್ತೆ ಮೂಲ ಸೌಕರ್ಯ ವಿಭಾಗ, ನಂ. 307, 3ನೇ ಮಹಡಿ, ಅನೆಕ್ಸ್–3 ಕಟ್ಟಡ, ಎನ್.ಆರ್. ಚೌಕ, ಬೆಂಗಳೂರು – 560002.

ಸಂಖ್ಯೆ: ಕಾಅ/ರಮೂಸೌ/ಟೆಂಡರ್/03/2024–25 ದಿನಾಂಕ: 06–06–2024

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ದ್ವಿ–ಲಕೋಟೆ ಪದ್ಧತಿ) (ಜಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲ ಸೌಕರ್ಯ ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗೆ ಅರ್ಹ ಟೆಂಡರ್‌ದಾರರಿಂದ ಟರ್ನ್‌ಕೀ, ಲಮ್‌ಸಂ, ಫಿಕ್ಸೆಡ್ ಪ್ರೈಸ್, ನೋ ವರಿಯೇಶನ್ ಅಂಡ್ ನೋ ಎಸ್ಕಲೇಶನ್ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	20 ಸಂಖ್ಯೆಯ ಪ್ರಮುಖ ಜಂಕ್ಷನ್‌ಗಳ ಸುಧಾರಣೆಗಳು, ಈ ಜಂಕ್ಷನ್ ಸುತ್ತಲೂ ಗಾಳಿಯ ಗುಣಮಟ್ಟವನ್ನು ಸುಧಾರಿಸಲು ಹಸಿರಿನೊಂದಿಗೆ ಸುಧಾರಣೆ ಕಾಮಗಾರಿ. **ಕಾಮಗಾರಿ ಪ್ರಸ್ತಾವನೆಯ ಮೊತ್ತ (ರೂ. ಲಕ್ಷಗಳಲ್ಲಿ): 1800.00 (ಜಿಎಸ್‌ಟಿ ಸೇರಿದಂತೆ), ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ): 18.00**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ನಲ್ಲಿ ದಿನಾಂಕ: 07–06–2024 ರ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ವಿಚಾರಣೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 11–06–2024 ರಂದು 13.00 ಗಂಟೆವರೆಗೆ. 3) ಬಿಡ್ ಪೂರ್ವಭಾವಿ ಸಭೆ ದಿನಾಂಕ: 12–06–2024 ರಂದು 16.00 ಗಂಟೆಗೆ. 4) ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 18–06–2024 ರಂದು 16.00 ಗಂಟೆವರೆಗೆ. 5) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 19–06–2024 ರಂದು 16.15 ಗಂಟೆಗೆ. 6) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **ಅರ್ಹ ಟೆಂಡರ್‌ದಾರರಿಗೆ ತಿಳಿಸಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲ ಸೌಕರ್ಯ ವಿಭಾಗ, ಬಿಬಿಎಂಪಿ.

ಕರ್ನಾಟಕ ಸರ್ಕಾರ

ಜಿಲ್ಲಾ ಶಸ್ತ್ರಚಿಕಿತ್ಸಕರ ಕಾರ್ಯಾಲಯ, ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ

ದೂವಾ/ಫ್ಯಾಕ್ಸ್ ನಂ:08194–234710. ಇಮೇಲ್:– dschitradurga@gmail.com

ಸಂ:ಜಿಆಚಿ/ತಾ.ಮ.ಆ/32/2024–25 ದಿನಾಂಕ:04/06/2024

ಪ್ರಕಟಣೆ

ವಿಷಯ:–ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಚಿತ್ರದುರ್ಗ ಇಲ್ಲಿಗೆ ಅಗತ್ಯವಿರುವ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡುವ ಬಗ್ಗೆ.

ಉಲ್ಲೇಖ:–ಸರ್ಕಾರದ ಆದೇಶ ಸಂಖ್ಯೆ ಆಕುಕ 278 ಹೆಚ್.ಎಸ್.ಎಂ 2023 ಬೆಂಗಳೂರು ದಿ:13/03/2024

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಚಿತ್ರದುರ್ಗದಲ್ಲಿ 100 ಹಾಸಿಗೆಯ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಮಂಜೂರಾಗಿದ್ದು, ಈ ಆಸ್ಪತ್ರೆಯಲ್ಲಿ ಅಗತ್ಯವಿರುವ ಮಾನವ ಸಂಪನ್ಮೂಲವನ್ನು ಪಡೆಯಲು ಉಲ್ಲೇಖಿತ ಪತ್ರದ ಆದೇಶದಲ್ಲಿ ಆದೇಶ ನೀಡಿದ್ದು, ಅದರಂತೆ ಈ ಕೆಳಕಂಡ ಹುದ್ದೆಗಳಿಗೆ ರೋಸ್ಟರ್ ಮತ್ತು ಮೆರಿಟ್ ಆಧರಿಸಿ ಗುತ್ತಿಗೆ ಆಧಾರದಲ್ಲಿ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಿದೆ.

ಶುಶ್ರೂಷಾಧಿಕಾರಿಗಳು–18

ಕ್ರ.ಸಂ	ವರ್ಗ	ಸಾಮಾನ್ಯ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಒಟ್ಟು
1	ಸಾಮಾನ್ಯ ಅಭ್ಯರ್ಥಿ	2	3	3	1	9
2	ಎಸ್.ಸಿ	1	1	1	0	3
3	ಎಸ್.ಟಿ	1	0	0	0	1
4	ಪ್ರ–ವರ್ಗ–1	1	0	0	0	1
5	ಪ್ರ–ವರ್ಗ–2ಎ	1	0	0	0	1
6	ಪ್ರ–ವರ್ಗ–3ಎ	1	1	0	0	2
7	ಪ್ರ.ವರ್ಗ–2ಬಿ	1	0	0	0	1
	ಒಟ್ಟು	8	5	4	1	18

ವಿದ್ಯಾರ್ಹತೆ:–ಬಿ.ಎಸ್ಸಿ ನರ್ಸಿಂಗ್/ಜಿ.ಎನ್.ಎಂ ನರ್ಸಿಂಗ್ ವಿದ್ಯಾರ್ಹತೆಯನ್ನು ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಗಳಲ್ಲಿ ಮಾತ್ರ ಪಡೆದಿರಬೇಕು. ಕರ್ನಾಟಕ ನರ್ಸಿಂಗ್ ಕೌನ್ಸಿಲ್‌ನಲ್ಲಿ ನೊಂದಣಿಯಾಗಿರಬೇಕು ಹಾಗೂ 2 ವರ್ಷದ ಅನುಭವವಿರಬೇಕು. ಮಾಸಿಕ ಸಂಚಿತ ವೇತನ :ರೂ.16839/–ಗಳು ವಯೋಮಿತಿ:– 45 ವರ್ಷದ ಒಳಗೆ ಇರಬೇಕು

ಕಿರಿಯ ಪ್ರಯೋಗಾ ಶಾಲಾ ತಂತ್ರಜ್ಞರು –04

ಕ್ರ.ಸಂ	ವರ್ಗ	ಸಾಮಾನ್ಯ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಒಟ್ಟು
1	ಸಾಮಾನ್ಯ ಅಭ್ಯರ್ಥಿ	1	1	0	0	02
2	ಎಸ್.ಸಿ	1	0	0	0	01
3	ಎಸ್.ಟಿ	1	0	0	0	01
	ಒಟ್ಟು	03	1	0	0	04

ವಿದ್ಯಾರ್ಹತೆ:–ಬಿ.ಎಸ್ಸಿ ಲ್ಯಾಬ್ ಟೆಕ್ನೀಷಿಯನ್/ಡಿಪ್ಲೋಮಾ ಇನ್ ಲ್ಯಾಬ್ ಟೆಕ್ನೀಷಿಯನ್ ವಿದ್ಯಾರ್ಹತೆ ಹೊಂದಿರಬೇಕು. ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಗಳಲ್ಲಿ ಮಾತ್ರ ಪಡೆದಿರಬೇಕು. ಕರ್ನಾಟಕ ಪ್ಯಾರಮೆಡಿಕಲ್ ಬೋರ್ಡ್‌ನಲ್ಲಿ ನೊಂದಣಿಯಾಗಿರಬೇಕು ಹಾಗೂ 2 ವರ್ಷದ ಅನುಭವವಿರಬೇಕು. ಮಾಸಿಕ ಸಂಚಿತ ವೇತನ: ರೂ.16839/–ಗಳು ವಯೋಮಿತಿ:–45 ವರ್ಷದ ಒಳಗೆ ಇರಬೇಕು

ಫಾರ್ಮಾಸಿಸ್ಟ್ –01:– ಸಾಮಾನ್ಯ ಅಭ್ಯರ್ಥಿ–01:– ವಿದ್ಯಾರ್ಹತೆ:– ಡಿ.ಫಾರ್ಮಾ/ಬಿ.ಫಾರ್ಮಾ ವಿದ್ಯಾರ್ಹತೆ ಹೊಂದಿರಬೇಕು. ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಗಳಲ್ಲಿ ಮಾತ್ರ ಪಡೆದಿರಬೇಕು. ಕರ್ನಾಟಕ ಪ್ಯಾರಮೆಡಿಕಲ್ ಬೋರ್ಡ್‌ನಲ್ಲಿ ನೊಂದಣಿಯಾಗಿರಬೇಕು ಹಾಗೂ 2 ವರ್ಷದ ಅನುಭವವಿರಬೇಕು. ಮಾಸಿಕ ಸಂಚಿತ ವೇತನ: ರೂ.16839/–ಗಳು ವಯೋಮಿತಿ:–45 ವರ್ಷದ ಒಳಗೆ ಇರಬೇಕು

ಸದರಿ ನೇಮಕಾತಿಯನ್ನು ಮೆರಿಟ್ ಕೋಂ ರೋಸ್ಟರ್ ಆಧಾರದಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುವುದು. ಆಸಕ್ತಿಯುಳ್ಳ ಅಭ್ಯರ್ಥಿಗಳು ಪ್ರಸಕ್ತ ಪ್ರಕಟಣೆ ದಿ:05/06/2024 ರಿಂದ 21/06/2024ರ ಸಂಜೆ 4.30 ರೊಳಗಾಗಿ ಬಯೋಡೆಟಾದಲ್ಲಿ ನಿಗಧಿತ ವಿದ್ಯಾರ್ಹತೆಯು ದೃಢೀಕೃತ ದಾಖಲೆಗಳೊಂದಿಗೆ ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ ಕಛೇರಿಗೆ ಅರ್ಜಿಯನ್ನು ಸಲ್ಲಿಸಬಹುದು. (ಸದರಿ ನೇಮಕಾತಿಯು ಷರತ್ತು ಮತ್ತು ನಿಬಂಧನೆಗಳಿಗೆ ಹಾಗೂ ಸರ್ಕಾರದಿಂದ ಹಾಗೂ ನಿರ್ದೇಶನಾಲಯದಿಂದ ನೀಡುವ ಸೂಚನೆ ಹಾಗೂ ಮಾರ್ಗಸೂಚಿಗಳಿಗೆ ಒಳಪಟ್ಟಿರುತ್ತದೆ.

RO.No.20:DIPR/CTA/KSMCA/2024-25 ಸಹಿ/– ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ನಂಬಿ ಅನುಭವಿಸುವುದಕ್ಕಿಂತ ಅನುಭವಿಸಿ ನಂಬುವುದೇ ಮೇಲು.

-ಕುವೆಂಪು

ಸರ್ಕಾರ ರಚನೆಗೆ ಯತ್ನ ಇಲ್ಲ 'ಇಂಡಿಯಾ' ಕೂಟದ ನಡೆ ಸರಿ

ಕೇಂದ್ರದಲ್ಲಿ ಸರ್ಕಾರ ರಚಿಸುವ ಪ್ರಯತ್ನಕ್ಕೆ ಈಗ ಮುಂದಾಗದೇ ಇರುವ ಮೂಲಕ ವಿರೋಧ ಪಕ್ಷಗಳ 'ಇಂಡಿಯಾ' ಮೈತ್ರಿಕೂಟವು ಒಳ್ಳೆಯ ಕೆಲಸವನ್ನೇ ಮಾಡಿದೆ. ಕೇಂದ್ರದಲ್ಲಿ ಸರ್ಕಾರ ರಚಿಸಲು ಇತರ ಕೆಲವು ಪಕ್ಷಗಳ ಬೆಂಬಲವನ್ನು ಈ ಮೈತ್ರಿಕೂಟವು ಯಾಚಿಸುವ ಉದ್ದೇಶ ಹೊಂದಿದೆ ಎಂಬ ವರದಿಗಳು ಇದ್ದವು. ಆದರೆ ಆ ರೀತಿಯ ಯತ್ನಕ್ಕೆ ಮೈತ್ರಿಕೂಟವು ಮುಂದಾಗಿದ್ದರೆ ಅದು ಜನಾದೇಶಕ್ಕೆ ವಿರುದ್ಧವಾದ ನಡೆ ಆಗುತ್ತಿತ್ತು. ಇಂಡಿಯಾ ಮೈತ್ರಿಕೂಟವು ಈಗಿನ ಪರಿಸ್ಥಿತಿಯಲ್ಲಿ ಬಲಿಷ್ಠವಾದ ಹಾಗೂ ಪರಿಣಾಮಕಾರಿಯಾದ ವಿರೋಧ ಪಕ್ಷವಾಗಿ ಕೆಲಸ ಮಾಡಲಿ ಎಂಬ ಇಂಗಿತವನ್ನು ಮತದಾರರು ವ್ಯಕ್ತಪಡಿಸಿದ್ದಾರೆ. ಸರ್ಕಾರ ರಚಿಸಲು ರಾಷ್ಟ್ರಪತಿಯಿಂದ ಬರುವ ಆಹ್ವಾನವನ್ನು ಬಿಜೆಪಿ ನಿರಾಕರಿಸಿದರೆ, ಸರ್ಕಾರ ರಚಿಸಲು ಬಿಜೆಪಿಗೆ ಸಾಧ್ಯವಾಗದೇ ಇದ್ದರೆ ಅಥವಾ ಎನ್‌ಡಿಎ ಮೈತ್ರಿಕೂಟದ ಸರ್ಕಾರ ಉರುಳಿದರೆ ಮಾತ್ರ ಇಂಡಿಯಾ ಮೈತ್ರಿಕೂಟವು ಸರ್ಕಾರ ರಚನೆಗೆ ಯತ್ನ ನಡೆಸಬಹುದು. ಲೋಕಸಭೆಯಲ್ಲಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿರುವ ಹಾಗೂ ಚುನಾವಣಾಪೂರ್ವ ರಾಜಕೀಯ ಮೈತ್ರಿಕೂಟದ ನಾಯಕನ ಸ್ಥಾನದಲ್ಲಿರುವ ಬಿಜೆಪಿಯು ಈಗ ಸರ್ಕಾರ ರಚನೆಗೆ ಹಕ್ಕು ಮಂಡಿಸಬಹುದು. ಇಂಡಿಯಾ ಮೈತ್ರಿಕೂಟಕ್ಕಿಂತಲೂ ಎನ್‌ಡಿಎ ಮೈತ್ರಿಕೂಟವು ಹೆಚ್ಚು ಸ್ಥಾನಗಳನ್ನು ಪಡೆದಿದೆ. ಜನಾದೇಶವನ್ನು ಇಂಡಿಯಾ ಮೈತ್ರಿಕೂಟ ಗೌರವಿಸಬೇಕು ಹಾಗೂ ಸರ್ಕಾರ ರಚಿಸುವ ಯತ್ನಗಳಿಗೆ ಮುಂದಾಗಬಾರದು. ಒಂದು ವೇಳೆ ಸರ್ಕಾರ ರಚಿಸಲು ಯತ್ನ ನಡೆಸಿದಲ್ಲಿ ಅದು ಅಪ್ರಜಾಸತ್ತಾತ್ಮಕ ನಡೆ ಆಗಲಿದೆ.

ಸಂಸತ್ತಿಗೆ ಮತ್ತೆ ಗೌರವವನ್ನು ತಂದುಕೊಡುವ ಕೆಲಸ ಮಾಡುವ ಅವಕಾಶ ಈಗ ವಿರೋಧ ಪಕ್ಷಗಳ ಮೈತ್ರಿಕೂಟಕ್ಕೆ ಸಿಕ್ಕಿದೆ

ಸಂಸತ್ತಿನ ಒಳಗೆ ಮತ್ತು ಹೊರಗೆ ಪರಿಣಾಮಕಾರಿಯಾದ ಹಾಗೂ ವಿಶ್ವಾಸಾರ್ಹವಾದ ವಿರೋಧ ಪಕ್ಷವಾಗಿ ಕೆಲಸ ಮಾಡುವ, ಹೊಸ ಸರ್ಕಾರವನ್ನು ಅದರ ನೀತಿಗಳು ಹಾಗೂ ಕಾರ್ಯಗಳ ವಿಚಾರದಲ್ಲಿ ಉತ್ತರದಾಯಿ ಆಗಿಸುವ ಹೊಣೆ ಈಗ ಇಂಡಿಯಾ ಮೈತ್ರಿಕೂಟದ ಮೇಲೆ ಇದೆ. ಈ ಕೆಲಸ ಮಾಡಲು ಬೇಕಿರುವ ಶಕ್ತಿಯು ವಿರೋಧ ಪಕ್ಷಗಳ ಮೈತ್ರಿಕೂಟಕ್ಕೆ ಲೋಕಸಭೆಯಲ್ಲಿ ಸಿಕ್ಕಿದೆ. ಇದನ್ನು ಉಪೇಕ್ಷಿಸಲು ಸರ್ಕಾರಕ್ಕೆ ಇನ್ನು ಮುಂದೆ ಆಗುವುದಿಲ್ಲ. ಹಿಂದಿನ ಲೋಕಸಭೆಯಲ್ಲಿ ಮಾಡಿದಂತೆ, ವಿರೋಧ ಪಕ್ಷಗಳ ಮಾತುಗಳನ್ನು ಸಾರಾಸಗಟಾಗಿ ತಳ್ಳಿಹಾಕಲು ಕೂಡ ಸರ್ಕಾರಕ್ಕೆ ಆಗುವುದಿಲ್ಲ. ವಿರೋಧ ಪಕ್ಷಗಳ ಮೈತ್ರಿಕೂಟವು ಈಗ ಸಂಸತ್ತನ್ನು ಮತ್ತೆ ಹಳೆಯ ಒಳ್ಳೆಯ ದಿನಗಳ ಕಡೆ ಒಯ್ಯುವ, ವಿರೋಧ ಪಕ್ಷಗಳ ಜೊತೆ ಸರ್ಕಾರವು ಸಂವಾದ ನಡೆಸುವಂತೆ ಮಾಡುವ, ಶಾಸನಗಳನ್ನು ರೂಪಿಸುವ ಸಂದರ್ಭದಲ್ಲಿ ವಿಸ್ತೃತ ಚರ್ಚೆಗಳು ಆಗುವಂತೆ ನೋಡಿಕೊಳ್ಳುವ ಕೆಲಸ ಮಾಡಬಹುದು. ಈ ಹತ್ತು ವರ್ಷಗಳ ಅವಧಿಯಲ್ಲಿ ಕೇಂದ್ರ ಸರ್ಕಾರವು ಸಂಸತ್ತನ್ನು ಬಹಳ ಅನಾದರದಿಂದ ಕಂಡಿದೆ. ಸಂಸತ್ತು ಈ ದೇಶದ ಪಾಲಿನ ಹೃದಯವಿದ್ದಂತೆ, ಸಂಸತ್ತಿಗೆ ಕೊಡಬೇಕಾದ ಮಹತ್ವವನ್ನು ಕೊಡದೇ ಇದ್ದುದು ಬಹಳ ಕೆಡುಕನ್ನು ಉಂಟುಮಾಡಿದೆ. ಈಗ ಸಂಸತ್ತಿಗೆ ಮತ್ತೆ ಗೌರವವನ್ನು ತಂದುಕೊಡುವ ಕೆಲಸ ಮಾಡುವ ಅವಕಾಶ ವಿರೋಧ ಪಕ್ಷಗಳ ಮೈತ್ರಿಕೂಟಕ್ಕೆ ಇದೆ. ಸಂಸತ್ತು ಹಾಗೂ ಇತರ ಸಾಂವಿಧಾನಿಕ ಸಂಸ್ಥೆಗಳಿಗಿಂತ ತಾವು ಮೇಲು ಎಂಬಂತೆ ವರ್ತಿಸಿರುವ ಪ್ರಧಾನಿಯವರು ಸಂಸತ್ತಿನ ಕಲಾಪಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡುವುದು ಸಾಧ್ಯವಾದಲ್ಲಿ, ಅದೊಂದು ದೊಡ್ಡ ಯಶಸ್ಸಾಗಲಿದೆ.

ಸಂಸತ್ತಿನ ಹೊರಗಡೆಯೂ ವಿರೋಧ ಪಕ್ಷಗಳ ಮೈತ್ರಿಕೂಟಕ್ಕೆ ದೊಡ್ಡ ಜವಾಬ್ದಾರಿಯೊಂದು ಕಾದಿದೆ. ಆ ಜವಾಬ್ದಾರಿಯನ್ನು ನಿರ್ವಹಿಸಲು ಪಕ್ಷಗಳ ನಾಯಕರು ಹಾಗೂ ಕಾರ್ಯಕರ್ತರು ಜೊತೆಯಾಗಬೇಕಿದೆ. ಇಂಡಿಯಾ ಮೈತ್ರಿಕೂಟವು ಚುನಾವಣಾ ಪೂರ್ವದಲ್ಲಿ ರಚನೆಯಾದ ಒಂದು ಮೈತ್ರಿಕೂಟ. ಅದು ಇನ್ನು ಮುಂದೆ ಬಲಿಷ್ಠವಾದ, ಒಗ್ಗಟ್ಟಿನಿಂದ ಕೆಲಸ ಮಾಡುವ, ಸ್ಪಷ್ಟವಾದ ನೀತಿಗಳು ಹಾಗೂ ಗುರಿಗಳು ಇರುವ ರಾಜಕೀಯ ಮೈತ್ರಿಕೂಟವಾಗಿ ಕೆಲಸ ನಿರ್ವಹಿಸಬೇಕಿದೆ. ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಹಲವು ನೀತಿಗಳು, ನಿರ್ಧಾರಗಳ ಬಗ್ಗೆ ಸಾರ್ವಜನಿಕರು ಪರಿಶೀಲನೆ ನಡೆಸುವಂತಹ ಸನ್ನಿವೇಶವನ್ನು ಸೃಷ್ಟಿಸುವಲ್ಲಿ ವಿರೋಧ ಪಕ್ಷಗಳ ಮೈತ್ರಿಕೂಟವು ಯಶಸ್ಸು ಕಂಡಿದೆ. ಅಲ್ಲದೆ, ಚುನಾವಣೆಯಲ್ಲಿ ಚರ್ಚೆಯು ಸಾರ್ವಜನಿಕರ ಬದುಕಿನ ಪ್ರಶ್ನೆಗಳ ಬಗ್ಗೆ ಕೇಂದ್ರೀಕೃತ ಆಗುವಂತೆ ಮಾಡುವಲ್ಲಿಯೂ ಯಶಸ್ಸು ಕಂಡಿದೆ. ಆದರೆ ಹಲವು ಕ್ಷೇತ್ರಗಳಲ್ಲಿ ಈ ಮೈತ್ರಿಕೂಟದ ಅಭ್ಯರ್ಥಿಗಳು ಪಡೆದ ಮತಗಳು ಆಡಳಿತದ ವಿರುದ್ಧದ ಮತಗಳಾಗಿದ್ದವೇ ಹೊರತು, ಮೈತ್ರಿಕೂಟದ ಅಭ್ಯರ್ಥಿಗಳ ಪರವಾಗಿ ಚಲಾವಣೆಯಾದ ಮತಗಳಾಗಿರಲಿಲ್ಲ. ಕೇಂದ್ರ ಸರ್ಕಾರವು ಜನರ ಮುಂದೆ ಇರಿಸುವ ನೀತಿ, ನಿರ್ಧಾರಗಳನ್ನು ಪ್ರಶ್ನಿಸುವ ಕಾರ್ಯಕ್ರಮಗಳನ್ನು ವಿರೋಧ ಪಕ್ಷಗಳ ಮೈತ್ರಿಕೂಟವು ರೂಪಿಸಬೇಕಿದೆ. ಹೊಸದಾಗಿ ರಚನೆ ಆಗಲಿರುವ ಸರ್ಕಾರವು ಹೊಸ ನೀತಿಗಳನ್ನು ರೂಪಿಸಲಿದೆ, ವಿರೋಧ ಪಕ್ಷಗಳ ಮೈತ್ರಿಕೂಟವು ಅವುಗಳನ್ನು ಪರಿಗಣಿಸಿ ತನ್ನ ಪ್ರತಿಕ್ರಿಯೆಗಳನ್ನು ರೂಪಿಸಬೇಕಿದೆ ಎಂಬುದನ್ನು ಮರೆಯುವಂತಿಲ್ಲ.

ದಿನದ ಟ್ವೀಟ್

ವಿಕೇಂದ್ರೀಕರಣಕ್ಕೆ ಆದ್ಯತೆ ಇರಲಿ

ನಮ್ಮ ಗಮನ ಇರುವುದು, ದೆಹಲಿಯಲ್ಲಿ ಅಧಿಕಾರದ ಕೇಂದ್ರೀಕರಣವನ್ನು ಕಡಿಮೆ ಮಾಡುವುದರ ಬಗೆಗೆ ಮಾತ್ರ. ಕನ್ನಡಿಗರು ಮತ್ತು ಕನ್ನಡದ ಎಷ್ಟೋ ಸಮಸ್ಯೆಗಳು ಉದ್ಭವಿಸಿರುವುದು ಅಧಿಕಾರ ಕೇಂದ್ರೀಕರಣದ ಕಾರಣಕ್ಕೇ.

ಗಣೇಶ್ ಚೇತನ್

ಕಿಡಿನುಡಿ

ಅಣ್ಣಾಮಲೈ ಅವರ ಭಾವಚಿತ್ರವನ್ನು ಆಡೊಂದರ ಕುತ್ತಿಗೆಗೆ ಕಟ್ಟಿ ಅದನ್ನು ಬಹಿರಂಗವಾಗಿ ಕಡಿಯುವ ಮೂಲಕ, ಅವರ ರಾಜಕೀಯ ವಿರೋಧಿಗಳು ತಮಿಳುನಾಡಿನಲ್ಲಿ ಡಿಎಂಕೆಯ ವಿಜಯವನ್ನು 'ಸಂಭ್ರಮಿಸಿದ್ದಾರೆ'. ಅನಾಗರಿಕ ಕೃತ್ಯ...

ಅಮಿತ್ ಮಾಳವೀಯ, ಬಿಜೆಪಿ ಮುಖಂಡ

25 ವರ್ಷಗಳ ಹಿಂದೆ

ಸೋಮವಾರ, 7-6-1999

• ಕಾರ್ಗಿಲ್: ಮತ್ತೆ ಮುಂದುವರಿದ ವಾಯುದಾಳಿ

ನವದೆಹಲಿ, ಜೂನ್ 6– ಕಾರ್ಗಿಲ್ ಪ್ರದೇಶದಲ್ಲಿ ಪಾಕಿಸ್ತಾನದ ಅತಿಕ್ರಮಣಕಾರರ ವಿರುದ್ಧ ನಿನ್ನೆ ಸ್ಥಗಿತಗೊಳಿಸಿದ್ದ ವಾಯುದಾಳಿಯನ್ನು ಭಾರತ ಇಂದು ಮುಂದುವರಿಸುವ ಮೂಲಕ ಸೇನಾ ಕಾರ್ಯಾಚರಣೆಯನ್ನು ಮತ್ತೆ ಬಿರುಸುಗೊಳಿಸಿತು.

ಈ ನಡುವೆ ಪಾಕಿಸ್ತಾನದ ವಿದೇಶಾಂಗ ಸಚಿವ ಸರ್ತಾಜ್ ಅಜೀಜ್ ಅವರ ಉದ್ದೇಶಿತ ಭಾರತ ಭೇಟಿ ಸಂದರ್ಭದಲ್ಲಿ ಕಾರ್ಗಿಲ್‌ನಲ್ಲಿನ ಅತಿಕ್ರಮಣವು ಚರ್ಚೆಯ ಪ್ರಮುಖ ವಿಷಯವಾಗಲಿದೆ ಎಂದು ವಿದೇಶಾಂಗ ಕಾರ್ಯದರ್ಶಿ ಕೆ.ರಘುನಾಥ್ ಅವರು ಟಿ.ವಿ. ಚಾನೆಲ್‌ವೊಂದಕ್ಕೆ ಇಂದು ರಾತ್ರಿ ತಿಳಿಸಿದ್ದಾರೆ.

• ಗೋವಾದಲ್ಲಿ ಕಾಂಗ್ರೆಸ್‌ಗೆ ಬಹುಮತ

ಪಣಜಿ, ಜೂನ್ 6 (ಪಿಟಿಐ, ಯುಎನ್‌ಐ)– ಗೋವಾ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ನಿಚ್ಚಳ ಬಹುಮತ ಪಡೆದು ಮತ್ತೆ ಅಧಿಕಾರಕ್ಕೆ ಬಂದಿದೆ. ರಾಜಕೀಯ ಅಭದ್ರತೆಯ ನೆಲೆವೀಡಾಗಿದ್ದ ಈ ರಾಜ್ಯಕ್ಕೆ ಕೊನೆಗೂ ರಾಜಕೀಯ ಸ್ಥಿರತೆ ಮರಳಿದಂತೆ ಆಗಿದೆ.

10 ವರ್ಷಗಳಲ್ಲಿ 9 ಮುಖ್ಯಮಂತ್ರಿಗಳನ್ನು ಕಂಡ ಗೋವಾದಲ್ಲಿ ಕಳೆದ 4 ತಿಂಗಳುಗಳಿಂದ ರಾಷ್ಟ್ರಪತಿ ಆಳ್ವಿಕೆಯಿತ್ತು.

50 ವರ್ಷಗಳ ಹಿಂದೆ

ಶುಕ್ರವಾರ, 7-6-1974

• ಕೂಗು ಕೈಮೀರುವ ಮುನ್ನ ಕೇಂದ್ರದಿಂದ ನಿರ್ದಿಷ್ಟ ನೀತಿಗೆ ಕರ್ನಾಟಕ ರಾಜ್ಯದ ಸಲಹೆ

ಬೆಂಗಳೂರು, ಜೂನ್ 6 – ಸ್ಥಳೀಯರಿಗೆ ಉದ್ಯೋಗ ಎಂಬ ಆಗ್ರಹ ನೆರೆರಾಜ್ಯಗಳಲ್ಲಿ ಕೆಟ್ಟ ರೂಪ ತಾಳುತ್ತಿರುವುದನ್ನು ಕಂಡು ಕಳವಳಗೊಂಡಿರುವ ಕರ್ನಾಟಕವು, 'ಈ ದಿಸೆಯಲ್ಲಿ ಕೇಂದ್ರ ಸರ್ಕಾರವೇ ಒಂದು ನಿರ್ದಿಷ್ಟ ನೀತಿ ರೂಪಿಸಿ ಎಲ್ಲ ರಾಜ್ಯಗಳು ಅದಕ್ಕೆ ಬದ್ಧವಾಗಿರುವಂತೆ ಮಾಡುವ ವ್ಯವಸ್ಥೆ ಮಾಡಬೇಕು' ಎಂದು ಸಲಹೆ ಮಾಡಲಿದೆ.

ಅಂಥ ಒಂದು ನೀತಿಯನ್ನು ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಅಥವಾ ರಾಷ್ಟ್ರೀಯ ಐಕ್ಯ ಮಂಡಳಿ ತಯಾರಿಸಬೇಕು, ಈ ಕಾರ್ಯದಲ್ಲಿ ಪ್ರಧಾನಿಯವರೇ ಮುತುವರ್ಜಿ ವಹಿಸಿ ಕೆಲಸ ಮಾಡಬೇಕು ಎಂಬುದು ರಾಜ್ಯ ಸರ್ಕಾರದ ಆಶಯವಾಗಿದೆ.

• ಕ್ವಿಂಟಲ್ ಗೋಧಿಗೆ 150 ರೂ. ಗರಿಷ್ಠ ಬೆಲೆ: ಕೇಂದ್ರ ಸುಗ್ರೀವಾಜ್ಞೆ

ನವದೆಹಲಿ, ಜೂನ್ 6– ಅತ್ಯಗತ್ಯ ವಸ್ತುಗಳ ಕಾಯ್ದೆಯಂತೆ ಕ್ವಿಂಟಲ್ ಗೋಧಿಗೆ 150 ರೂಪಾಯಿ ಗರಿಷ್ಠ ಮಾರಾಟದ ಬೆಲೆ ನಿಗದಿ ಮಾಡಿ ಕೇಂದ್ರ ಸರ್ಕಾರವು ಇಂದು ಸುಗ್ರೀವಾಜ್ಞೆ ಹೊರಡಿಸಿತು.

ಆಹಾರ ಕೊರತೆಯಿರುವ ರಾಜ್ಯಗಳಲ್ಲಿ ಗೋಧಿ ಮಾರಾಟ ಬೆಲೆಯನ್ನು ಸೂಕ್ತವಾದ ಮಟ್ಟಕ್ಕೆ ಸೀಮಿತಗೊಳಿಸಲು ಕೈಗೊಂಡ ಈ ಕ್ರಮವು ಈಗಿಂದೀಗಲೇ ಜಾರಿಗೆ ಬರುತ್ತದೆ.

ಸರ್ಕಾರ ನಿಗದಿ ಮಾಡಿದ ಗರಿಷ್ಠ ಮಾರಾಟದ ಬೆಲೆಯಲ್ಲೇ ಎಲ್ಲ ಸಾಗಾಣಿಕೆ ವೆಚ್ಚ ಮತ್ತು ತೆರಿಗೆಗಳೂ ಸೇರಿವೆ.

ಪರೀಕ್ಷೆಯ ಹೊರತಾಗಿ ಕಲಿಕಾ ಸಾಧನೆಯನ್ನು ಗುರುತಿಸುವ ಚಿಂತನೆಗಳು ಮೂಡಿಬರಬೇಕಿದೆ

ಕಲಿಕಾ ಪರಿಕಲ್ಪನೆ: ಹೆಚ್ಚಬೇಕಿದೆ ಅರಿವು

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಮಕ್ಕಳು ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು ಎನ್ನುವುದು ಪರೀಕ್ಷಾ ಪದ್ಧತಿ ಇರುವ ಶಿಕ್ಷಣ ವ್ಯವಸ್ಥೆಯಲ್ಲಿ ಸರ್ವೇಸಾಧಾರಣವಾದ ಅನಿಸಿಕೆಯಾಗಿರುತ್ತದೆ. ಆದರೆ ಇಂತಹ ವ್ಯವಸ್ಥೆಯಲ್ಲಿ ಕಲಿಕೆಗೆ ಯಾವ ಮಹತ್ವವೂ ಇರುವುದಿಲ್ಲ. ವೆಬ್ ಕ್ಯಾಮೆರಾ ಹಾಕಿ ಪರೀಕ್ಷೆ ನಡೆಸಬೇಕಾದ ಸ್ಥಿತಿಯೇ ಅದಕ್ಕೆ ನಿದರ್ಶನ. ಪರೀಕ್ಷೆಯಲ್ಲಿ ನಕಲು ತಡೆಗಟ್ಟುವುದು ವೆಬ್ ಕ್ಯಾಮೆರಾ ಅಳವಡಿಕೆಯ ಉದ್ದೇಶ. ಪರೀಕ್ಷೆಯಲ್ಲಿ ನಕಲು ನಡೆಯುತ್ತದೆ ಎಂದಾದರೆ, ಕಲಿಕೆ ನಡೆದಿಲ್ಲ ಎಂದೇ ಅರ್ಥ. ಕಲಿಕೆಯು ನೈತಿಕ ಪ್ರಜ್ಞೆ, ಜೀವನಮೌಲ್ಯಗಳ ಅರಿವು, ಕಾನೂನು ಪಾಲನೆಯ ಎಚ್ಚರದೊಂದಿಗೆ ನಡೆದಾಗ ಮಾತ್ರ ಅದು ಕಲಿಕೆ ಎನಿಸಿಕೊಳ್ಳುತ್ತದೆ.

ನಕಲು ಮಾಡಬಾರದು ಎಂಬ ಅರಿವು ವಿದ್ಯಾರ್ಥಿಗೆ ಬಂದಿಲ್ಲ ಎಂದರೆ, ಹತ್ತು ವರ್ಷಗಳ ಕಾಲ ಅವನಿಗೆ ಪಾಠ ಮಾಡಿದ್ದು ನಿರರ್ಥಕ ಎಂದಾಯಿತು. ಎರಡನೆಯದಾಗಿ, ನಕಲು ನಡೆಯುತ್ತದೆ ಎಂದಾದರೆ, ಅದಕ್ಕೆ ಶಿಕ್ಷಕರು ಮೌನ ಸಮ್ಮತಿಯನ್ನಾದರೂ ಕೊಟ್ಟಿರಲೇಬೇಕಲ್ಲವೆ? ಶಿಕ್ಷಕರು ಎರಡೆರಡು ಪದವಿ ಪಡೆದವರು! ಅಂದರೆ ಪದವಿಯ ತನಕ ಕಲಿತರೂ ನೈತಿಕತೆಯ ಪ್ರಜ್ಞೆ, ಕಾನೂನಿನ ಎಚ್ಚರವನ್ನು ಬೆಳೆಸಿಕೊಳ್ಳಲು ಅವರಿಗೆ ಸಾಧ್ಯವಾಗಿಲ್ಲ ಎಂದಾಯಿತು. ಹಾಗಾದರೆ ನಿಜವಾದ ಸಮಸ್ಯೆ ಇರುವುದು ಎಲ್ಲಿ? ಸಮಸ್ಯೆ ಇರುವುದು ಕಲಿಕಾ ಪ್ರಕ್ರಿಯೆಯಲ್ಲಿಯೇ ವಿನಾ ಪರೀಕ್ಷೆಯಲ್ಲಿ ಅಲ್ಲ. ಅಂದರೆ ಸರಿಪಡಿಸಬೇಕಾದದ್ದು ಕೂಡ ಕಲಿಕಾ ಪ್ರಕ್ರಿಯೆಯನ್ನೇ ವಿನಾ ಪರೀಕ್ಷೆಯನ್ನಲ್ಲ.

ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದನ್ನೇ ಕಲಿಕಾ ಸಾಧನೆ ಎಂದು ಯಾವಾಗ ಸಾರ್ವತ್ರಿಕವಾಗಿ ಭಾವಿಸಲಾಗುತ್ತದೆಯೋ ಅಲ್ಲಿ ಪರೀಕ್ಷೆಯಲ್ಲಿ ಹೇಗಾದರೂ ಉತ್ತೀರ್ಣರಾದರೆ ಸಾಕು ಎಂಬ ಮನಃಸ್ಥಿತಿ ರೂಪುಗೊಳ್ಳುತ್ತದೆ. ಅದು ಕಲಿಕೆಯನ್ನು ಸೋಲಿಸುತ್ತದೆ. ಕಲಿಕೆಯ ಮೂಲಭೂತ ವ್ಯಾಖ್ಯಾನವೇ ವಿದ್ಯಾರ್ಥಿಗಳ ವರ್ತನೆಯಲ್ಲಿ ಸಕಾರಾತ್ಮಕ ಪರಿವರ್ತನೆಯನ್ನು ತರುವುದು. ಆದರೆ ಪರೀಕ್ಷೆ ಸಂದರ್ಭದಲ್ಲಿ ವೆಬ್ ಕ್ಯಾಮೆರಾ ಹಾಕಬೇಕಾದ ಪರಿಸ್ಥಿತಿಯು ವಿದ್ಯಾರ್ಥಿಗಳಲ್ಲಿ ಸಕಾರಾತ್ಮಕ ಪರಿವರ್ತನೆ ಆಗಿಲ್ಲದಿರುವುದನ್ನು ಸೂಚಿಸುತ್ತದೆ. ಆದ್ದರಿಂದ ಸಾರ್ವತ್ರಿಕ ನೆಲೆಯಲ್ಲಿ ಕಲಿಕಾ ಸಾಧನೆಯನ್ನು ಪರೀಕ್ಷೆಯ ಹೊರತಾಗಿ ಗುರುತಿಸುವ ಚಿಂತನೆಗಳು ಮೂಡಿಬರಬೇಕಾದ ಅಗತ್ಯವಿದೆ. ಸದ್ಯಕ್ಕೆ ಕಲಿಕಾ ಸಾಧನೆಯನ್ನು ಅಳೆಯಲು 'ನಿರಂತರ ವ್ಯಾಪಕ ಮೌಲ್ಯಮಾಪನ' ಎಂಬ ವ್ಯವಸ್ಥೆಯೊಂದಿದೆ. ಇದರ ಮೂಲಕ ವಿದ್ಯಾರ್ಥಿಗಳ ಕಲಿಕಾ ಸಾಧನೆಯನ್ನು ನಿರಂತರವಾಗಿ ಅಳೆಯಲಾಗುತ್ತದೆ. ಪಠ್ಯವಸ್ತು ಮತ್ತು ಅದರ ಆಚೆಗಿನ ವರ್ತನೆಗಳನ್ನು ಒಳಗೊಂಡೇ ವಿದ್ಯಾರ್ಥಿಯ ಮೌಲ್ಯಮಾಪನ ಮಾಡಲಾಗುತ್ತದೆ. ಒಂಬತ್ತನೇ ತರಗತಿಯವರೆಗೂ ಇಂತಹ ಮೌಲ್ಯಮಾಪನಕ್ಕೇ ಮಹತ್ವವಿರುವುದು.

ಮೌಲ್ಯಮಾಪನದ ಜೊತೆಗೆ ಶಾಲಾ ಮಟ್ಟದಲ್ಲಿ ಪರೀಕ್ಷೆ ಇರುತ್ತದೆ. ಆದರೆ ಪರೀಕ್ಷೆಯೇ ಉತ್ತೀರ್ಣತೆಯ ಅಂತಿಮ ಮಾನದಂಡವಲ್ಲ. ಮೌಲ್ಯಮಾಪನದಲ್ಲಿ ವಿದ್ಯಾರ್ಥಿಯು ತೋರಿಸುವ ದಕ್ಷತೆಯ ಆಧಾರದಲ್ಲಿ ಉತ್ತೀರ್ಣಗೊಳಿಸಬಹುದು. ಹೀಗೆ ಒಂಬತ್ತು ವರ್ಷಗಳ ಕಾಲ ಕಲಿಕೆಯನ್ನು ಮೌಲ್ಯಮಾಪನಕ್ಕೆ ಒಳಪಡಿಸಿಯೂ ಹತ್ತನೇ ವರ್ಷದ ಪರೀಕ್ಷೆಯಲ್ಲಿ ಅಕ್ರಮ ನಡೆಯುವ ಸಂಭವ ಇದೆ ಎಂದಾದರೆ ಅದನ್ನು ಹೇಗೆ ಅರ್ಥೈಸುವುದು? ಅಷ್ಟು ವರ್ಷಗಳ ಕಾಲ ಇಂತಹ ವಿಧಾನದಲ್ಲಿ ಮೌಲ್ಯಮಾಪನ ನಡೆದಿಲ್ಲ ಅಥವಾ ಮೌಲ್ಯಮಾಪನ ಮಾಡಿದ ವಿಧಾನವೇ ದೋಷಪೂರ್ಣವಾಗಿತ್ತು ಎಂದು ಅರ್ಥವಾಗುತ್ತದೆ. ಪುನಃ, ಅದಕ್ಕೆ ಕಾರಣ ಇಡೀ ಸಾಮಾಜಿಕ ಮನೋಧರ್ಮದಲ್ಲಿ ಕಲಿಕೆ ಮತ್ತು ಮೌಲ್ಯಮಾಪನದ ಪರಿಗಣನೆಯೇ ಇಲ್ಲದಿರುವುದು.

'ಉತ್ತೀರ್ಣರಾದರೇ?' ಎನ್ನುವ ಪ್ರಶ್ನೆ ಮಾತ್ರ ಎಲ್ಲರಿಗೂ ಮುಖ್ಯವಾಗುತ್ತದೆ. ಅದುಬಿಟ್ಟರೆ, ಮೌಲ್ಯಮಾಪನಕ್ಕೆ ಒಳಪಡಿಸಿರುವರೇ, ಮೌಲ್ಯಮಾಪನದಲ್ಲಿ ಕಾಣಿಸಿದ ದೋಷಗಳೇನು, ಆ ದೋಷಗಳನ್ನು ಕಲಿಕಾ ಪ್ರಕ್ರಿಯೆಯಲ್ಲಿ ಸರಿಪಡಿಸಿ ಮುಂದಿನ ಮೌಲ್ಯಮಾಪನದ ಹೊತ್ತಿಗೆ ಹೇಗೆ ವಿದ್ಯಾರ್ಥಿಯಲ್ಲಿ ಪರಿವರ್ತನೆಯನ್ನು ತರಲಾಗಿದೆ ಎಂಬುದನ್ನು ಯಾರೂ ಗಮನಿಸುವುದಕ್ಕೇ ಹೋಗುವುದಿಲ್ಲ. ಆದ್ದರಿಂದಲೇ ಒಂಬತ್ತನೇ ತರಗತಿಯ ತನಕ ಉತ್ತೀರ್ಣಗೊಳಿಸುವ ಅಧಿಕಾರವು ಶಿಕ್ಷಕರು, ಮುಖ್ಯೋಪಾಧ್ಯಾಯರು ಮತ್ತು ಆಡಳಿತ ಮಂಡಳಿಯ ಬಳಿ ಇರುತ್ತದೆ ಎಂದು ಎಲ್ಲರಿಗೂ ಅನ್ನಿಸುತ್ತಿರುತ್ತದೆ. ನಿಜವಾಗಿ ಒಂಬತ್ತನೇ ತರಗತಿಯ ತನಕವೂ ವಿದ್ಯಾರ್ಥಿಗಳನ್ನು ಉತ್ತೀರ್ಣಗೊಳಿಸುವ ಅಧಿಕಾರವು ಇವರ ಬಳಿ ಇರುವುದಿಲ್ಲ. ಉತ್ತೀರ್ಣಗೊಳ್ಳುವ ಶಕ್ತಿಯು ವಿದ್ಯಾರ್ಥಿಯ ಬಳಿಯೇ ಇರುತ್ತದೆ. ಕಲಿಕೆ ನಡೆದಿದ್ದಾಗ, ಆ ಕಲಿಕೆಯನ್ನು ಮೌಲ್ಯಮಾಪನ ಮಾಡಿದಾಗ ಬರುವ ಫಲಿತಾಂಶದ ಆಧಾರದಲ್ಲೇ ಉತ್ತೀರ್ಣತೆ ನಡೆಯಬೇಕು.

ಈ ರೀತಿ ಕಲಿಕೆಯ ಮೌಲ್ಯಮಾಪನ ನಡೆಸಿದ್ದರೆ, 'ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ಬರೆಯಲು ಬರುವುದಿಲ್ಲ' ಎನ್ನುವ ದೂರು ಕೇಳಿಬರಲು ಸಾಧ್ಯವಿಲ್ಲ. ಏಕೆಂದರೆ, ಭಾಷಾ ಕೌಶಲಗಳಲ್ಲಿ ಬರೆಯುವ ಸಾಮರ್ಥ್ಯವೂ ಸೇರಿರುತ್ತದೆ. ಪರೀಕ್ಷೆಯಲ್ಲಿ ಅಕ್ರಮ ನಡೆಯಬಹುದು ಎಂಬ ಗುಮಾನಿ ಸಹ ಬರಲು ಸಾಧ್ಯವಿಲ್ಲ. ಏಕೆಂದರೆ ವಿದ್ಯಾರ್ಥಿಗಳ ಕಾರ್ಯನಿರ್ವಹಣಾ ಸಾಮರ್ಥ್ಯ, ವರ್ತನೆಯಲ್ಲಿ ಸಕಾರಾತ್ಮಕತೆ, ಚಟುವಟಿಕೆ ನಡೆಸುವ ಸಾಮರ್ಥ್ಯ ಇವೆಲ್ಲವುಗಳ ಮೌಲ್ಯಮಾಪನವನ್ನೂ ಒಳಗೊಂಡು ಉತ್ತೀರ್ಣರಾಗಬೇಕಿರುತ್ತದೆ. ಹೀಗೆ ಉತ್ತೀರ್ಣರಾದವರು ಹತ್ತನೇ ತರಗತಿಗೆ ಬರುವಾಗ ಸ್ವಯಂ ಶಿಸ್ತನ್ನು ರೂಢಿಸಿಕೊಂಡಿರುವುದಿಲ್ಲವೇ?

ಆದರೆ ವಾಸ್ತವದಲ್ಲಿ ಶಿಕ್ಷಣ ನೀತಿಗಳು ಮತ್ತು ಕಾಲಕಾಲಕ್ಕೆ ಮಾಡಿದ ಶೈಕ್ಷಣಿಕ ವರದಿಗಳ ಆಧಾರದಲ್ಲಿ ನಡೆಸಿದ ಕಲಿಕಾ ಮೌಲ್ಯಮಾಪನದ ಆದೇಶವು ನಿಜಾರ್ಥದಲ್ಲಿ ಅನುಷ್ಠಾನದಲ್ಲೇ ಇಲ್ಲ. ಆಡಳಿತ ಮಂಡಳಿಗಳ ಬಿಗಿ ಹಿಡಿತದಲ್ಲಿರುವ ಖಾಸಗಿ ಶಾಲೆಗಳಲ್ಲಿ ಶಿಕ್ಷಕರಿಗಿರುವ ಸ್ವಾತಂತ್ರ್ಯ ತೀರಾ ಸೀಮಿತವಾಗಿದೆ. ಸರ್ಕಾರಿ ಶಾಲೆಗಳಲ್ಲಿ ಕಲಿಕಾ ಪ್ರಕ್ರಿಯೆ ನಡೆಸುವ ವಿಚಾರದಲ್ಲಿ ಶಿಕ್ಷಕರಿಗೆ ಬಹಳಷ್ಟು ಸ್ವಾತಂತ್ರ್ಯವಿದೆ. ಆದರೆ ಸಿಬ್ಬಂದಿ ಕೊರತೆ, ವರ್ಗಾವಣೆ ಸಮಸ್ಯೆ, ಇತರ ಕಾರ್ಯಗಳ ಒತ್ತಡಗಳೆಲ್ಲ ಸೇರಿ ಕಲಿಕಾ ಪ್ರಕ್ರಿಯೆ ಮತ್ತು ಮೌಲ್ಯಮಾಪನವನ್ನು ಪರಸ್ಪರ ಸಂಯೋಜಿಸಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ.

ಮುಖ್ಯವಾಗಿ ಕಲಿಕೆಯು ಸಮರ್ಪಕವಾಗಿ ನಡೆದು ಮೌಲ್ಯಮಾಪನಕ್ಕೆ ಒಳಪಡಿಸಬೇಕಾದರೆ, ಶಿಕ್ಷಕರಿಗೆ ತಮ್ಮ ಪ್ರತಿಯೊಬ್ಬ ವಿದ್ಯಾರ್ಥಿಯ ಕೌಟುಂಬಿಕ ಹಿನ್ನೆಲೆ, ವಿದ್ಯಾರ್ಥಿ ಬೆಳೆದುಬಂದ ಕ್ರಮ, ಶಾಲೆಯಲ್ಲಿ ಇಲ್ಲದ ಅವಧಿಯಲ್ಲಿ ವಿದ್ಯಾರ್ಥಿಯ ಚಟುವಟಿಕೆ ಎಲ್ಲದರ ಬಗ್ಗೆಯೂ ತಿಳಿವಳಿಕೆ ಇರಬೇಕಾಗುತ್ತದೆ. ಆ ರೀತಿಯಲ್ಲಿ ಒಬ್ಬ ಶಿಕ್ಷಕ, ಹತ್ತು ವಿದ್ಯಾರ್ಥಿಗಳನ್ನು ನಿರ್ವಹಿಸಬಹುದು. ಬಹಳ ಕಷ್ಟಪಟ್ಟರೆ ಇಪ್ಪತ್ತು ವಿದ್ಯಾರ್ಥಿಗಳನ್ನು ಮಾತ್ರ ನಿರ್ವಹಿಸಲು ಸಾಧ್ಯ. ಶಿಕ್ಷಕರ ಒದಗಣೆ ಮತ್ತು ನಿರ್ವಹಣೆಯಲ್ಲಿರುವ ಅವೈಚಾರಿಕ ಧೋರಣೆಗಳಿಂದಾಗಿ ಶಾಲಾ ಸನ್ನಿವೇಶದಲ್ಲೇ ಕಲಿಕೆ ಮತ್ತು ಮೌಲ್ಯಮಾಪನದ ಪರಿಕಲ್ಪನೆಗಳ ಅರಿವಿನ ಕೊರತೆ ಇದೆ.

ವಿದ್ಯಾರ್ಥಿಗಳು ಅನುತ್ತೀರ್ಣರಾದರೆ ತಮ್ಮನ್ನು ತರಾಟೆಗೆ ತೆಗೆದುಕೊಳ್ಳಲಾಗುತ್ತದೆ ಎನ್ನುವುದು ಎಲ್ಲ ಶಿಕ್ಷಕರಿಗೂ ಅರ್ಥವಾಗಿದೆ. ಹಾಗಾಗದೇ ಇರಬೇಕಾದರೆ ಏನು ಮಾಡಬೇಕು? ವಿದ್ಯಾರ್ಥಿಗಳನ್ನು ಉತ್ತೀರ್ಣಗೊಳಿಸಿದರೆ ಆಯಿತು. ಹತ್ತನೇ ತರಗತಿಯ ಪರೀಕ್ಷೆ ಎದುರಾದಾಗ? ಆಗಲೂ ಶಿಕ್ಷಕರು ಸುರಕ್ಷಿತರಾಗಬೇಕಾದರೆ ವಿದ್ಯಾರ್ಥಿಗಳು ಹೇಗಾದರೂ ಉತ್ತೀರ್ಣರಾಗಬೇಕು. ಶಿಕ್ಷಕರಲ್ಲಿ ಇಷ್ಟೇ ತುಂಬಿಹೋದರೆ ಶಿಕ್ಷಣ ಯಶಸ್ವಿಯಾಗುವುದಿಲ್ಲ ಎಂದು ಸಮಾಜಕ್ಕೆ, ಮುಖ್ಯವಾಗಿ ಪಾಲಕರಿಗೆ ಅರ್ಥವಾಗಬೇಕು. ಆಗ ಅವರ ಬೇಡಿಕೆಯು ಕಲಿಕೆ ಮತ್ತು ಮೌಲ್ಯಮಾಪನದ ಪರವಾಗಿ ಇರುತ್ತದೆ. ಹೀಗಾದಾಗ, ಆಡಳಿತ ವ್ಯವಸ್ಥೆಯು ಯಾವುದೇ ಆಗಿರಲಿ ಪಾಲಕರ ಬೇಡಿಕೆಯನ್ನು ನಿರಾಕರಿಸಲು ಆಗುವುದಿಲ್ಲ. ವಿದ್ಯಾರ್ಥಿಗಳು, ಶಿಕ್ಷಕರು ಅಥವಾ ಇನ್ಯಾರಲ್ಲೇ ಆಗಲಿ ದಂಡನೆಯ ಭಯವೊಂದೇ ಯಶಸ್ಸನ್ನು ತರುತ್ತದೆ ಎಂಬ ಪುರಾತನ ಆಲೋಚನೆಯನ್ನು ಕೈಬಿಡಬೇಕಾಗಿದೆ.

ಆದ್ದರಿಂದ ಕಲಿಕೆಯ ಪರಿಕಲ್ಪನೆ, ಮೌಲ್ಯಮಾಪನದ ಉದ್ದೇಶ, ಅದರ ವಿಧಾನಗಳು, ಅದರಿಂದ ಮಕ್ಕಳಲ್ಲಿ ಆಗುವ ಸಕಾರಾತ್ಮಕ ಪರಿವರ್ತನೆಗಳು ಮತ್ತು ಅದರಿಂದ ವಿದ್ಯಾರ್ಥಿಗಳು ಮತ್ತು ಅವರ ಕುಟುಂಬದ ಭವಿಷ್ಯಕ್ಕೆ ಆಗುವ ಉಪಯೋಗಗಳ ಬಗ್ಗೆ ಪಾಲಕರೂ ಸೇರಿದಂತೆ ಒಟ್ಟೂ ಸಮಾಜದಲ್ಲಿ ಅರಿವು ಹೆಚ್ಚಾಗುವ ಕಾರ್ಯ ಮೊದಲು ಆಗಬೇಕಾಗಿದೆ. ಈ ವಿಚಾರಗಳ ಕುರಿತು ಎಸ್‌ಡಿಎಂಸಿ ಸಭೆಗಳು, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ವ್ಯವಸ್ಥಿತವಾದ ಶೈಕ್ಷಣಿಕ ಸಂವಾದಗಳು ನಡೆಯುವಂತೆ ನೋಡಿಕೊಳ್ಳಬೇಕಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸ್ವಯಂಸೇವಾ ಸಂಸ್ಥೆಗಳು, ಇದೆಲ್ಲವನ್ನೂ ತಿಳಿದಿರುವ ಶಿಕ್ಷಕರು, ಶಿಕ್ಷಣ ಚಿಂತಕರು, ಮಾಧ್ಯಮಗಳು ಈ ದಿಸೆಯಲ್ಲಿ ತೊಡಗಿಕೊಳ್ಳಬೇಕಾದ ಅಗತ್ಯವಿದೆ.

ಚುರುಮುರಿ



ಒಂದು ಸಿಂಹದ ಕತೆ

• ಬಿ.ಎನ್.ಮಲ್ಲೇಶ್

ಹತ್ತು ವರ್ಷ ಭರ್ಜರಿ ಬೇಟೆಯಾಡಿದ ಕಾಡಿನ ರಾಜ ಸಿಂಹ ಯಾಕೋ ಮೆತ್ತಗಾದಂತಿತ್ತು. ಅದರ ರತ್ನಖಚಿತ ಚಿನ್ನದ ಸಿಂಹಾಸನದ ಮೇಲೆ ಇತರ ಪ್ರಾಣಿಗಳಿಗೆ ಕಣ್ಣು. ಒಂದು ದಿನ ಎಲ್ಲ ಪ್ರಾಣಿಗಳ ಸಭೆ ಕರೆದ ಸಿಂಹರಾಜ 'ನಾನಿನ್ನು ಬೇಟೆಯಾಡಲು ಹೋಗುವುದಿಲ್ಲ. ನೀವೇ ನನಗೆ ಆಹಾರ ತಂದುಕೊಡಬೇಕು' ಎಂದು ಆದೇಶಿಸಿತು.

ಸಿಂಹ ಮೆತ್ತಗಾಗಿರುವುದನ್ನು ಅರಿತ ಹುಲಿ 'ಆಯಿತು, ಆದರೆ ನಿನ್ನ ಸಿಂಹಾಸನದ ಒಂದು ಕಾಲು ನನ್ನದು' ಎಂದಿತು. ಚಿರತೆ ಏನು ಕಮ್ಮಿ? 'ನನಗೂ ನಿನ್ನ ಸಿಂಹಾಸನದ ಒಂದು ಕಾಲು ಬೇಕು' ಎಂದಿತು.

ಇದೇ ಒಳ್ಳೆ ಸಮಯ ಎಂದುಕೊಂಡ ಬೆಕ್ಕು 'ನಾನೂ ಹುಲಿ ಜಾತಿಯವನೇ, ನನಗೂ ಒಂದು ಕಾಲು ಬೇಕು' ಎಂದು ಬೇಡಿಕೆ ಇಟ್ಟಿತು. 'ಅಲ್ಲಯ್ಯಾ, ಎಲ್ಲರೂ ಒಂದೊಂದು ಕಾಲು ಕೇಳಿದರೆ ಹೇಗೆ? ನಾನು ಒಂಟಿ ಕಾಲಲ್ಲಿ ಕೂರಲು ಸಾಧ್ಯವೆ?' ಸಿಂಹ ಗರಂ ಆಯಿತು.

'ಬೇಡ ಬಿಡಿ, ನಾನು ಪಕ್ಕದ ಕಾಡಿಗೆ ಹೋಗಿ ಅಲ್ಲಿಯ ಸಿಂಹದ ಜೊತೆ ಸೇರಿಕೊಳ್ಳುತ್ತೇನೆ' ಬೆಕ್ಕು ರೋಫ್ ಹಾಕಿತು.

ಎಂಥ ಕಾಲ ಬಂತಲ್ಲ ಎಂದು ಸಿಂಹ ಒಳಗೇ ಕೊರಗಿತು.

ಅಷ್ಟರಲ್ಲಿ ಅಲ್ಲಿಗೆ ಹಾರಿ ಬಂದ ಹದ್ದು 'ನನಗೇನೂ ಬೇಡ, ನಿನ್ನ ಜೊತೆ ಸಿಂಹಾಸನದ ಮೇಲೆ ಕೂರುತ್ತೇನೆ, ಸ್ವಲ್ಪವೇ ಜಾಗ ಕೊಡು ಸಾಕು' ಎಂದಿತು.

ಹದ್ದಿನ ಮಾತು ಕೇಳಿ, ಊರಿನಿಂದ ತಪ್ಪಿಸಿಕೊಂಡು ಬಂದಿದ್ದ ಎಮ್ಮೆಯೊಂದು ಗಹಗಹಿಸಿ ನಕ್ಕಿತು.

ಸಿಂಹಕ್ಕೆ ಸಿಟ್ಟು ಬಂತು 'ಏಕೆ ನಗುತ್ತಿದ್ದೀ? ಅದೇನು ನಿನ್ನ ಮೂಗಲ್ಲಿ ದಾರ?'

'ಇದು ಮೂಗುದಾರ, ನನ್ನ ಯಜಮಾನ ಕಟ್ಟಿರೋದು. ನನಗೆ ಒಂದೇ ಮೂಗುದಾರ, ರಾಜನಾದ ನಿನಗೆ ಇಷ್ಟೊಂದು ಮೂಗುದಾರವೆ? ಒಂಟಿ ಕಾಲಲ್ಲಿ ನೀನು ಕೂರಲು ಸಾಧ್ಯವೆ, ಮಲಗಲು ಸಾಧ್ಯವೆ? ಅದಕ್ಕೇ ನಗು ಬಂತು' ಎಂದಿತು ಎಮ್ಮೆ. ಸಿಂಹ ಪಿಟಿಕ್ಕನ್ನಲಿಲ್ಲ.

ಸಂಗತ

ಹುತ್ತವಲ್ಲ, ಇದು ಜೈವಿಕ ಕಾರ್ಖಾನೆ!

ಹುತ್ತದ ಬಗೆಗಿನ ತಪ್ಪುಕಲ್ಪನೆಗಳಿಂದ ಆಚೆ ಬಂದರೆ, ಪ್ರಕೃತಿಯ ಈ ಜೈವಿಕ ಕಾರ್ಖಾನೆಯಲ್ಲಿ ನಡೆಯುತ್ತಿರುವ ಪರಿಸರಸ್ನೇಹಿ ಚಟುವಟಿಕೆಗಳ ಅರಿವಾಗುತ್ತದೆ

• ಡಾ. ಮುರಳೀಧರ ಕಿರಣಕೆರೆ

ಜ್ವರದಿಂದ ಬಳಲುತ್ತಿದ್ದ ಹಸುವಿಗೆ ಚಿಕಿತ್ಸೆ ನೀಡಿ ಸ್ವಲ್ಪ ಹಸಿ ಹುಲ್ಲು ಹಾಕುವಂತೆ ಆ ರೈತ ಮಹಿಳೆಗೆ ಹೇಳಿದೆ. 'ತೋಟದಿಂದಲೇ ಕುಯ್ದು ತರ್ಬೇಕು ಸಾ. ಮನೆ ಹತ್ರ ಏನೂ ಬೆಳೆಯಂಗಿಲ್ಲ' ಎಂದಳು ಸಣ್ಣಗೆ. ಮನೆಯ ಆ ಚಿಕ್ಕ ಅಂಗಳದತ್ತ ದೃಷ್ಟಿ ಹರಿಸಿದಾಗ ದಿಗ್ಭ್ರಮೆಯಾಗಿತ್ತು! ಅಲ್ಲೆಲ್ಲಾ ದೊಡ್ಡ ದೊಡ್ಡ ಹುತ್ತಗಳು, ಅವುಗಳನ್ನು ಬಳಸಿ ಹುಲುಸಾಗಿ ಬೆಳೆದ ಕಾಡುಗಿಡಗಳು ಇದ್ದವು.

'ಇದನ್ನೆಲ್ಲಾ ತೆಗೆದು ಕ್ಲೀನ್ ಮಾಡಿ. ಹಾಗೆ ಎಂತಕ್ಕೆ ಬಿಟ್ಟಿದ್ದೀರಿ?' ಅಸಹನೆಯಿಂದ ಕೇಳಿದೆ. 'ಅಯ್ಯೋ! ಅದನ್ನು ಮುಟ್ಟಂಗೆ ಇಲ್ಲ ಸಾ. ಅಲ್ಲಿ ದೇವರ ಹಾವು ಇದೆ. ಈ ಗಿಡಗಳ ದರಗೂ ಪಕ್ಕದ ಬಾವಿಗೆ ಬೀಳ್ತಿದೆ. ಅದನ್ನೂ ಕಡಿಯಂಗಿಲ್ಲ' ಆಕೆಯ ಧ್ವನಿಯಲ್ಲಿ ಬೇಸರ, ಭಯ, ಭಕ್ತಿ ಎಲ್ಲವೂ ತುಂಬಿತ್ತು. 'ಇದು ಗೆದ್ದಲು ಹುತ್ತ. ಹಾವು ವಾಸ ಮಾಡಲ್ಲ. ಒಡೆದು ಹಾಕಿ, ಏನೂ ಆಗಲ್ಲ. ಹಾಗೇ ಬಿಟ್ರೆ ಅಪಾಯ' ಎನ್ನುತ್ತಾ ಧೈರ್ಯ ತುಂಬಲು ಪ್ರಯತ್ನಿಸಿದೆ.

'ಒಂದೆರಡು ಕಡೆ ಕೇಳ್ಸಿದ್ವು ಸಾ. ಮುಟ್ಲೇಬೇಡಿ ಅಂದಿದ್ದಾರೆ' ಆಕೆ ವಿವರಣೆ ಕೊಡುತ್ತಿರುವಾಗಲೇ ಮಗ ತೋಟದಿಂದ ಬಂದ. ವಿದ್ಯಾವಂತನಂತೆ ಕಾಣುತ್ತಿದ್ದ ಅವನ ನಿಲುವು ಇನ್ನೂ ಬಿಗಿಯಾಗಿತ್ತು. 'ಇಲ್ಲಿ ಯಾವಾಗ್ಲೂ ಹಾವು ಓಡಾಡ್ತನೇ ಇರುತ್ತೆ. ನಾವು ಏನೂ ಮೈಲಿಗೆ ಮಾಡಂಗೇ ಇಲ್ಲ' ಎಂದು ಆತ ದೃಢವಾಗಿ ಹೇಳಿದಾಗ ವಿಚಾರ ಮುಂದುವರಿಸುವುದು ವ್ಯರ್ಥವೆಂದು ಸುಮ್ಮನಾದೆ.

ಈ ರೀತಿಯಲ್ಲಿ ಹುತ್ತ, ಸುತ್ತಲೂ ಗಿಡಗಂಟಿಗಳು ಬೆಳೆದಿರುವಾಗ ಹಾವುಗಳು ತಮ್ಮ ಆಹಾರವಾದ ಇಲಿ, ಹೆಗ್ಗಣ, ಹರಣೆ, ಓತಿಗಳನ್ನು ಅರಸಿ ಬರುವುದು ಸ್ವಾಭಾವಿಕ. ಇದು ದೇವರ ಜಾಗ, ಮುಟ್ಟಬಾರದು, ಹಾಗೆಯೇ ಬಿಡಬೇಕೆಂಬ ನಂಬಿಕೆ ತಾಯಿ- ಮಗನ ತಲೆಯಲ್ಲಿ ಗಟ್ಟಿಯಾಗಿ ಕೂತಿರುವಾಗ, ಅವರ ಈ ವರ್ತನೆ ಅದೆಷ್ಟು ಅಪಾಯಕಾರಿ ಎಂದು ಮನದಟ್ಟು ಮಾಡಿಸುವುದು ಸುಲಭಸಾಧ್ಯವಲ್ಲ!

ಹಲವು ಬಗೆಯ ಮೌಢ್ಯ ಮತ್ತು ಕಂದಾಚರಣೆಗಳು ಹುತ್ತವನ್ನು ಗಾಢವಾಗಿ ಸುತ್ತುವರಿದಿವೆ. ವಾಸ್ತವವಾಗಿ ಹುತ್ತಗಳು ಗೆದ್ದಲು ಅಥವಾ ಒರಲೆಗಳಿಂದ ನಿರ್ಮಿತವಾದ ಗೋಪುರದಂತಹ ಆಕೃತಿಗಳು. ಕೀಟ ಜಗತ್ತಿಗೆ ಸೇರಿದ ಗೆದ್ದಲು ಹುಳುಗಳು ಮಣ್ಣು, ನೆಲದಲ್ಲಿನ ಸಾವಯವ ಅಂಶಗಳನ್ನು ತಮ್ಮ ಜೊಲ್ಲು ರಸದೊಂದಿಗೆ ಬೆರೆಸಿ ಗಟ್ಟಿಮುಟ್ಟಾದ, ಗಾಳಿ-ಮಳೆಗೆ ಜಗ್ಗದ ವಿವಿಧ ವಿನ್ಯಾಸದ ಮನೆ ನಿರ್ಮಿಸಿಕೊಳ್ಳುತ್ತವೆ. ವೈವಿಧ್ಯಮಯ ಕೋಣೆಗಳು, ಸುರಂಗಗಳು, ಕಿಂಡಿಗಳು, ಕಿರುದಾರಿಗಳನ್ನುಳ್ಳ ಸಂಕೀರ್ಣ ರಚನೆಯಿದು.

ಗೆದ್ದಲುಗಳನ್ನು ತಿನ್ನಲು ಬರುವ ಇಲಿ, ಹೆಗ್ಗಣ, ಹಾವುರಾಣಿ, ಅಳಿಲುಗಳು ಹುತ್ತದೊಳಗೆ ಹೊಕ್ಕುತ್ತವೆ. ಅವುಗಳನ್ನು ಬೇಟೆಯಾಡಲು ಬರುವ ಹಾವುಗಳು ಹುತ್ತದೊಳಗೆ ಹೋಗಿ ಬರುವುದು ನೈಸರ್ಗಿಕ ವಿದ್ಯಮಾನವೇ ವಿನಾ ಬಹುತೇಕರು ನಂಬುವಂತೆ ಇವು ನಾಗರಹಾವುಗಳ ಆವಾಸಸ್ಥಾನಗಳಲ್ಲ ಅಥವಾ ನಾಗರ ಹುತ್ತವನ್ನೂ ನಿರ್ಮಿಸುವುದಿಲ್ಲ. ಸಂತಾನೋತ್ಪತ್ತಿಯ ಸಮಯದಲ್ಲಿ ಹಾವುಗಳು ಖಾಲಿ ಹುತ್ತಗಳಲ್ಲಿ ಮೊಟ್ಟೆ ಇಡುತ್ತವೆ. ಹುತ್ತಗಳು ವಾತಾನುಕೂಲಿ ವ್ಯವಸ್ಥೆ ಹೊಂದಿರುವುದರಿಂದ ಹಾವುಗಳಂತಹ ಶೀತರಕ್ತದ ಪ್ರಾಣಿಗಳು ಇದರೊಳಗೆ ಸೇರಿಕೊಳ್ಳುವುದು ಸಹಜ.

ಹುತ್ತಗಳಿರುವ ಜಾಗ ನಾಗನಡೆಯೆಂಬ ಮೌಢ್ಯ ನಮ್ಮ ಗ್ರಾಮೀಣರಲ್ಲಷ್ಟೇ ಅಲ್ಲ ನಗರವಾಸಿಗಳಲ್ಲೂ ದಟ್ಟವಾಗಿ ಬೇರೂರಿದೆ. ಪಟ್ಟಣಗಳಲ್ಲಿ ಜಾಗದ ಕೊರತೆ ಇರುವುದರಿಂದ ಇಂತಹ ರಚನೆಗಳು ಇದ್ದಲ್ಲಿ ಅನಿವಾರ್ಯವಾಗಿ ನೆಲಸಮ ಮಾಡಿ ಪ್ರಾಯಶ್ಚಿತ್ತವಾಗಿ ಪೂಜೆ, ಪುನಸ್ಕಾರ ಮಾಡಿಸಿ ಸಮಾಧಾನ ಮಾಡಿಕೊಳ್ಳುವುದುಂಟು. ಮನೆಯಲ್ಲಿ ಸ್ವಾಭಾವಿಕವಾಗಿ ಬರುವ ತೊಂದರೆ, ತಾಪತ್ರಯಗಳಿಗೆ ಹುತ್ತವನ್ನು ನೆಲಸಮ ಮಾಡಿದ್ದೇ ಕಾರಣ ಎಂಬ ಚಿಂತೆ ಹತ್ತಿಸಿಕೊಂಡು ನೆಮ್ಮದಿ ಕಳೆದುಕೊಳ್ಳುವವರ ಸಂಖ್ಯೆಯೂ ಬಹಳಷ್ಟಿದೆ.

ಇನ್ನು ಹಳ್ಳಿಯಲ್ಲಂತೂ ಕೇಳುವುದೇ ಬೇಡ. ಹುತ್ತವನ್ನು ತೆಗೆಯುವುದು ಹೋಗಲಿ ಅದರ ಹತ್ತಿರಕ್ಕೂ ಹೋಗರು. ಮುಟ್ಟಿದರೆ ತೊಂದರೆ ಆಗುವುದೆಂಬ ಭಯ. ಮನೆಯ ಮಣ್ಣಿನ ಗೋಡೆಯಲ್ಲಿ ಬೆಳೆದ ಹುತ್ತಗಳನ್ನು ಹಾಗೆಯೇ ಬಿಟ್ಟು ತಮ್ಮ ವಾಸಕ್ಕೆ ಬೇರೆ ವ್ಯವಸ್ಥೆ ಮಾಡಿಕೊಂಡಿರುವ ನಿದರ್ಶನಗಳೂ ಧಾರಾಳವಾಗಿ ಕಾಣಸಿಗುತ್ತವೆ.

ನಾಗರಪಂಚಮಿಯಂತಹ ಹಬ್ಬಗಳ ಸಂದರ್ಭಗಳಲ್ಲಿ ಹುತ್ತವನ್ನು ಪೂಜಿಸುವುದು, ಹಾಲೆರೆಯುವುದು, ಹಾವುಗಳು ಹಾಲು ಕುಡಿಯುತ್ತವೆಯೆಂಬ ಮೌಢ್ಯವಂತೂ ವ್ಯಾಪಕವಾಗಿದೆ. ಜನರ ಈ ನಂಬಿಕೆಗೆ ನೀರೆರೆದು ಪೋಷಿಸುವ ವಂಚಕರಿಗೆ ಇದೊಂದು ಹಣ ಸುಲಿಯುವ ಹಾದಿ.

ಗೆದ್ದಲುಗಳಲ್ಲಿ 2,600ಕ್ಕೂ ಹೆಚ್ಚು ಪ್ರಮುಖ ಪ್ರಭೇದಗಳಿವೆ. ಗೆದ್ದಲುಗಳು ಒಂದೆಡೆ, ಮನೆಯ ಮರಮಟ್ಟು, ದವಸ ಧಾನ್ಯ ತಿಂದು ದೊಡ್ಡ ಪ್ರಮಾಣದಲ್ಲಿ ನಷ್ಟ ಉಂಟು ಮಾಡಿದರೆ, ಮತ್ತೊಂದೆಡೆ, ಮಣ್ಣಿನ ಫಲವತ್ತತೆ ಹೆಚ್ಚಿಸುವ ರೈತ ಮಿತ್ರರೂ ಹೌದು. ಹುತ್ತಗಳು ಮಣ್ಣೊಳಗೆ ಗಾಳಿಯ ಸಂಚಾರ ಏರ್ಪಡಿಸಿ ಮಣ್ಣಿನ ಆರೋಗ್ಯ ಹೆಚ್ಚಿಸುತ್ತವೆ. ನೆಲದೊಳಗೆ ಪೋಷಕಾಂಶಗಳನ್ನು ಹರಡಿಸುತ್ತವೆ. ಬೀಜಗಳನ್ನು ಭೂಮಿಯೊಳಗೆ ಪ್ರಸಾರ ಮಾಡುತ್ತವೆ. ಅಂತರ್ಜಲಕ್ಕೆ ನೇರ ಸಂಪರ್ಕ ಇರುವುದರಿಂದ ಖಾಲಿ ಹುತ್ತಗಳಿಗೆ ನೀರು ಹರಿಸುವುದರ ಮೂಲಕ ಮಳೆಸಂಗ್ರಹ ಪ್ರಕ್ರಿಯೆಯನ್ನು ಸರಾಗವಾಗಿ ಮಾಡಬಹುದು.

ಹೌದು, ಹುತ್ತವನ್ನು ಸುತ್ತಿಕೊಂಡಿರುವ ಮೌಢ್ಯಗಳು, ತಪ್ಪುಕಲ್ಪನೆಗಳಿಂದ ಆಚೆ ಬಂದಾಗಷ್ಟೇ ಪ್ರಕೃತಿಯ ಈ ಜೈವಿಕ ಕಾರ್ಖಾನೆಯಲ್ಲಿ ನಡೆಯುತ್ತಿರುವ ಪರಿಸರಸ್ನೇಹಿ ಚಟುವಟಿಕೆಗಳ ಅರಿವಾಗುವುದು.

ವಾಚಕರ ವಾಣಿ

ಸಂಸದರಿಗೆ ಕನ್ನಡ ಆದ್ಯತೆಯಾಗಲಿ

ಒಕ್ಕೂಟ ಭಾರತದಲ್ಲಿ ಹದಿನೆಂಟನೇ ಲೋಕಸಭೆ ಅಸ್ತಿತ್ವಕ್ಕೆ ಬರಲಿದೆ. ಕರ್ನಾಟಕದಿಂದ ಆಯ್ಕೆಯಾಗಿರುವ ಎಲ್ಲಾ ಸಂಸದರು ಸಂಸತ್ತಿನಲ್ಲಿ ಧೈರ್ಯ, ಆತ್ಮವಿಶ್ವಾಸದಿಂದ, ಹಿಂದಿ, ಇಂಗ್ಲಿಷ್ ಬಂದರೂ ಕನ್ನಡದಲ್ಲಿಯೇ ಮಾತನಾಡಲಿ. ಅದು ನಮ್ಮ ಸಾಂವಿಧಾನಿಕ ಹಕ್ಕು ಕೂಡ. ಕೆಲವು ಸಂಸದರಿಗೆ ಹಿಂದಿ, ಇಂಗ್ಲಿಷ್ ಭಾಷೆ ಬರದೇ ಇರಬಹುದು ಅಥವಾ ಸರಿಯಾಗಿ ಬರದೆಯೂ ಇರಬಹುದು. ಅದರಿಂದ ಕೀಳರಿಮೆ ಅನುಭವಿಸಬೇಕಾದ ಅಗತ್ಯವಿಲ್ಲ. ಸಂವಿಧಾನದಲ್ಲಿ ಮಾನ್ಯ ಮಾಡಿರುವ ಯಾವುದೇ ಭಾಷೆಯಲ್ಲಿ ಮಾತನಾಡಿದರೂ ಕ್ಷಣಾರ್ಧದಲ್ಲಿ ಅನುವಾದ ಆಗುವ ವ್ಯವಸ್ಥೆಯು ಹೊಸ ಸಂಸತ್ ಭವನದಲ್ಲಿದೆ.

ನಮ್ಮ ಸಂಸದರು ನಾಡು ನುಡಿಯ ಪರವಾಗಿ ಧ್ವನಿ ಎತ್ತಬೇಕು. ಇದೇ 16ರಂದು ಒಕ್ಕೂಟ ಭಾರತದಾದ್ಯಂತ ಯುಪಿಎಸ್‌ಸಿ ಪೂರ್ವಭಾವಿ ಪರೀಕ್ಷೆ ನಡೆಯುತ್ತಿದೆ. ಅದು ಹಿಂದಿ, ಇಂಗ್ಲಿಷ್ ಮಾಧ್ಯಮದಲ್ಲಿ ಮಾತ್ರ ಇರಲಿದೆ. ಇಂತಹ ವಿಷಯಗಳ ವಿರುದ್ಧ ದನಿ ಎತ್ತುವುದು ಅವರ ಆದ್ಯತೆಯಾಗಬೇಕು. ರಾಜಕೀಯ ಪಕ್ಷಗಳ ಕನ್ನಡ ಪ್ರೀತಿಯು ಚುನಾವಣೆಯಲ್ಲಿ ಮತ ಸೆಳೆಯುವುದಕ್ಕಷ್ಟೇ ಸೀಮಿತವಾಗಿದೆ. ಅದು ತಪ್ಪಬೇಕು. ಅಂತೆಯೇ ಕೇಂದ್ರ ಸರ್ಕಾರ ಎಂದು ಹೇಳುವ ಬದಲು ಒಕ್ಕೂಟ ಸರ್ಕಾರ ಎಂದೇ ಹೇಳಬೇಕು. ಏಕೆಂದರೆ, ಭಾರತದ ಸಂವಿಧಾನದಲ್ಲಿ ಕೇಂದ್ರ ಸರ್ಕಾರ ಎಂದು ಇಲ್ಲ, ಬದಲಾಗಿ ಒಕ್ಕೂಟ ಭಾರತ ಎಂದೇ ಇದೆ.

ಗಿರೀಶ್ ಮತ್ತೇರ, ಯರಗಟ್ಟಿಹಳ್ಳಿ, ಚನ್ನಗಿರಿ

ಜೈಲಿನಿಂದಲೇ ಸ್ಪರ್ಧೆ ಸರಿಯೇ?

ಕಠಿಣ ಕಾಯ್ದೆಗಳ ಅಡಿ ಬಂಧನಕ್ಕೊಳಗಾಗಿ ಜೈಲಿನಲ್ಲಿದ್ದರೂ ಪ್ರಸಕ್ತ ಲೋಕಸಭಾ ಚುನಾವಣೆಯಲ್ಲಿ ಆಯ್ಕೆ ಆಗಿರುವ ಕಾಶ್ಮೀರದ ಎಂಜಿನಿಯರ್ ರಶೀದ್ ಹಾಗೂ ಪಂಜಾಬ್‌ನ ಅಮೃತ್‌ಪಾಲ್ ಸಿಂಗ್ ಅವರು ಲೋಕಸಭೆಗೆ ಹಾಜರಾಗಿ ಪ್ರಮಾಣವಚನ ಸ್ವೀಕರಿಸಬಹುದಾದರೂ ಕಲಾಪಗಳಲ್ಲಿ ಭಾಗವಹಿಸಲು ಅವಕಾಶವಿಲ್ಲ ಎಂದು ಕಾನೂನು ತಜ್ಞರು ಹೇಳಿದ್ದಾರೆ (ಪ್ರ.ವಾ., ಜೂನ್ 6). ನ್ಯಾಯಾಲಯವು ತಪ್ಪಿತಸ್ಥರೆಂದು ಘೋಷಿಸಿ ಕನಿಷ್ಠ ಎರಡು ವರ್ಷಗಳ ಶಿಕ್ಷೆಗೆ ಗುರಿಪಡಿಸಿದರೆ ಮಾತ್ರ ಅವರು ಲೋಕಸಭಾ ಸದಸ್ಯತ್ವ ಕಳೆದುಕೊಳ್ಳುತ್ತಾರೆ ಎಂದು ಕಾನೂನು ಹೇಳುತ್ತದೆ. ಆದರೆ ದೋಷಿತರು ಎಂಬ ಕಾರಣದಿಂದಲೇ ಅವರನ್ನು ಪೊಲೀಸರು ಬಂಧಿಸಿರುತ್ತಾರೆ. ಹೀಗಿರುವಾಗ, ಗಂಭೀರ ಆರೋಪ ಹೊತ್ತ ವ್ಯಕ್ತಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡುವುದು ಎಷ್ಟು ಸರಿ? ಇಂತಹ ಆಪಾದನೆ ಹೊತ್ತವರನ್ನು ಜನ ತಾನೇ ಅದು ಹೇಗೆ ಮತ ಹಾಕಿ ಗೆಲ್ಲಿಸುತ್ತಾರೆ?

ಒಂದು ವೇಳೆ ಆಪಾದನೆ ಸಾಬೀತಾಗಿ ಅವರು ಎರಡು ವರ್ಷದ ಜೈಲು ಶಿಕ್ಷೆಗೆ ಗುರಿಯಾದರೆ ಸದಸ್ಯತ್ವಕ್ಕೆ ಅನರ್ಹರಾಗುತ್ತಾರೆ ಎನ್ನುವುದೇನೋ ಸರಿ. ರಶೀದ್ ಐದು ವರ್ಷಗಳಿಂದಲೂ ಜೈಲಿನಲ್ಲಿಯೇ ಇದ್ದಾರೆ. ತಪ್ಪಿತಸ್ಥರಲ್ಲದಿದ್ದರೂ ಜೈಲಿನಲ್ಲಿ ಇದ್ದಾರೆಯೋ ಅಥವಾ ತಪ್ಪಿತಸ್ಥರಾಗಿ ಜೈಲಿನಲ್ಲಿ ಇರುವರೋ ಎಂಬುದು ತಿಳಿಯುವುದಿಲ್ಲ. ಇಂತಹ ವಿಷಯಗಳ ಬಗ್ಗೆ ಸರಿಯಾದ ಕಾನೂನು ರೂಪಿಸಬೇಕಾದ ಅಗತ್ಯ ಇದೆ.

ಮುಳ್ಳೂರು ಪ್ರಕಾಶ್, ಮೈಸೂರು

ಕಲ್ಯಾಣ ಕರ್ನಾಟಕ: ಅಭಿವೃದ್ಧಿಗೆ ವೇಗ ತುಂಬಿ

ಕಲ್ಯಾಣ ಕರ್ನಾಟಕ ವ್ಯಾಪ್ತಿಯ ಬೀದರ್, ಕಲಬುರಗಿ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಲೋಕಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಬಹುಮತ ಪಡೆದು ಆಯ್ಕೆಯಾಗಿದ್ದಾರೆ. ಇದರಿಂದ, ಕಲ್ಯಾಣ ಕರ್ನಾಟಕವು ಕಾಂಗ್ರೆಸ್‌ನ ಕೈ ಹಿಡಿದಿದೆ ಎಂದೇ ಹೇಳಬಹುದು. ಈ ಪ್ರದೇಶವು 'ಹಿಂದುಳಿದ ಪ್ರದೇಶ' ಎಂಬ ಹಣೆಪಟ್ಟಿ ಅಂಟಿಸಿಕೊಂಡಿದೆ. ಇದನ್ನು ಕಳಚಲು ಇನ್ನು ಮೇಲಾದರೂ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಕಾಳಜಿ ತೋರಿಸಿ ಈ ಪ್ರದೇಶದ ಅಭಿವೃದ್ಧಿಗೆ ಮುಂದಾಗಬೇಕು. ಇಲ್ಲಿನ ಶಾಸಕರು, ಮಂತ್ರಿಗಳು, ಸಂಸದರು, ಪ್ರಾಮಾಣಿಕ ಅಧಿಕಾರಿಗಳು ಒಟ್ಟಾಗಿ ನಿಂತರೆ ಈ ಕಾರ್ಯ ಸಾಧ್ಯ.

10 ಮತ್ತು 12ನೇ ತರಗತಿಗಳ ಫಲಿತಾಂಶದಲ್ಲಿ ನಿರಂತರವಾಗಿ ಈ ಭಾಗದ ಸಾಧನೆ ಕಳಪೆ ಎಂದೇ ಹೇಳಬಹುದು. ಈ ಕಳಂಕ ತಪ್ಪಬೇಕಾದರೆ ಶಾಲಾ, ಕಾಲೇಜುಗಳನ್ನು ಸುಸಜ್ಜಿತಗೊಳಿಸಬೇಕು. ಬೋಧನೆಯಲ್ಲಿ ಸುಧಾರಣೆ ತರಬೇಕು. ಪದವಿ ಓದುವವರ ಪ್ರಮಾಣ ಹೆಚ್ಚಾಗುವಂತೆ ಮಾಡಬೇಕು. ಇನ್ನೂ ಬೇಸಾಯವನ್ನೇ ನಂಬಿಕೊಂಡಿರುವ ಈ ಪ್ರದೇಶದ ಬಡರೈತರ ಪ್ರಗತಿಗಾಗಿ ಶ್ರಮಿಸಬೇಕು. ನೀರಾವರಿ, ಉದ್ಯೋಗ, ರಸ್ತೆ, ಸಾರಿಗೆಯಂತಹ ವ್ಯವಸ್ಥೆಯನ್ನು ಸುಧಾರಿಸಿ, ಹಿಂದುಳಿದ ಜಿಲ್ಲೆಗಳು ಎಂಬ ಹಣೆಪಟ್ಟಿಯನ್ನು ತೊಲಗಿಸಬೇಕು.

ನಂದೀಶ್ವರ ದಂಡೆ, ಹೊಸಪೇಟೆ

ಪುರುಷನ ಅಡುಗೆ ಅಧ್ಯಾಯ: ಬೇಕು ಪ್ರೋತ್ಸಾಹ

ಮಕ್ಕಳಲ್ಲಿ ಲಿಂಗ ಸಮಾನತೆಯ ಮನೋಭಾವವನ್ನು ಬೆಳೆಸುವ ಉದ್ದೇಶದಿಂದ ಕೇರಳ ಸರ್ಕಾರವು ಪುರುಷರು ಅಡುಗೆ ಮಾಡುವ ಹಾಗೂ ಅಡುಗೆ ಕೋಣೆಯಲ್ಲಿ ಕೆಲಸ ಮಾಡುವಂತಹ ದೃಶ್ಯಸಹಿತ ಪಾಠವನ್ನು ಪಠ್ಯಪುಸ್ತಕಗಳಲ್ಲಿ ಪರಿಚಯಿಸಿರುವುದರ ಬಗ್ಗೆ ವರದಿಯಾಗಿದೆ (ಪ್ರ.ವಾ., ಜೂನ್ 5). ಅಡುಗೆಯಂಥ ಒಂದು ಉತ್ತಮ ಕಲೆಯನ್ನು ಬರೀ ಹೆಂಗಸರಿಗೆ ಸೀಮಿತಗೊಳಿಸಿರುವುದು, ಅಡುಗೆ ಮಾಡುವ ಗಂಡಸರನ್ನು ಕೀಳಾಗಿ ಕಾಣುವುದು ಯಾಕೆ ಎಂಬುದು ಅರ್ಥವಾಗದ ಒಗಟು. ಹಿಂದೆ ಗಂಡಸರು ಸೊಗಸಾಗಿ ಅಡುಗೆ ಮಾಡುತ್ತಿದ್ದರು ಎಂಬುದಕ್ಕೆ, ರುಚಿಕಟ್ಟಾದ ಭೋಜನಕ್ಕೆ 'ನಳಪಾಕ' ಎಂಬ ಪದ ಪ್ರಯೋಗ ಬಳಕೆಯಲ್ಲಿರುವುದೇ ನಿದರ್ಶನ. ಪಾಂಡವರು ವಿರಾಟರಾಜನ ಅರಮನೆಯಲ್ಲಿ ಅಜ್ಞಾತವಾಸ ಮಾಡುತ್ತಿದ್ದ ಸಂದರ್ಭದಲ್ಲಿ, ಭೀಮ ಆರಿಸಿಕೊಂಡದ್ದು ಬಾಣಸಿಗ ಕೆಲಸವನ್ನು. ಅಷ್ಟು ದೂರ ಯಾಕೆ, ಇಂದಿನ ಹೋಟೆಲ್‌ಗಳಲ್ಲಿ, ಕಲ್ಯಾಣಮಂಟಪಗಳಲ್ಲಿ, ದೊಡ್ಡ ದೊಡ್ಡ ಕಾರ್ಯಕ್ರಮಗಳಲ್ಲಿ, ನಿತ್ಯ ದಾಸೋಹ ನೀಡುವ ಮಠಗಳಲ್ಲಿ, ಹಾಸ್ಟೆಲ್ಲುಗಳಲ್ಲಿ ಅಡುಗೆ ಕಾಯಕದಲ್ಲಿ ತೊಡಗಿರುವವರು ಗಂಡಸರೇ ವಿನಾ ಹೆಂಗಸರಲ್ಲ. ಆದರೆ ಮನೆಯಲ್ಲಿ ಗಂಡಸರು ಅಡುಗೆ ಮನೆಗೆ ಹೋದರೆ ಅಂಥವರನ್ನು 'ಹೆಣ್ಣಿಗ' ಎಂದು ಹೆಂಗಸರು ಮತ್ತು ಗಂಡಸರು ಕೂಡಿಯೇ ಹಂಗಿಸುತ್ತಾರೆ!

ಶಾಲೆಯ ಪಠ್ಯಕ್ರಮದಲ್ಲಿ ಗಂಡಸರು ಅಡುಗೆ ಮಾಡುವುದನ್ನು ಅಳವಡಿಸುವುದರ ಜೊತೆಗೆ, ಮನೆಯಲ್ಲಿ ಅಡುಗೆ ಮಾಡುವ ಗಂಡಸರನ್ನು ಹೀಗಳೆಯದೇ ಪ್ರೋತ್ಸಾಹಿಸಬೇಕಿದೆ.

ಸಿ. ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಹಸ್ರ ಸರೋವರದ ಹಾದಿಯ ಸಾವಿನ ಚಾರಣ

ಸಹಸ್ರ ಸರೋವರಕ್ಕೆ ಚಾರಣ ಮಾಡುವ ಸಾಹಸ ಮಾಡುವವರ ಸಂಖ್ಯೆ ಕಡಿಮೆಯೇ. ಕೇದಾರನಾಥ ಮತ್ತು ಗಂಗೋತ್ರಿಗೆ ಕೈಗೊಳ್ಳುವ ಯಾತ್ರೆಯ ಹಾದಿಯ ನಟ್ಟನಡುವೆ ಇರುವ ಸಹಸ್ರ ಪರ್ವತ ಶ್ರೇಣಿಯಲ್ಲಿ ನಡೆಸುವ ಚಾರಣವಿದು. ಇಲ್ಲಿಗೆ ಈಚೆಗೆ ಬೆಂಗಳೂರಿನ 22 ಮಂದಿಯ ತಂಡ ಚಾರಣ ಕೈಗೊಂಡಿತ್ತು. ಆದರೆ ವಿಪರೀತ ಹಿಮಪಾತ ಮತ್ತು ಹಿಮಗಾಳಿಯ ಕಾರಣದಿಂದ ಈ ತಂಡದಲ್ಲಿದ್ದ ಒಂಬತ್ತು ಮಂದಿ ಮೃತಪಟ್ಟಿದ್ದಾರೆ. ಉಳಿದ 13 ಮಂದಿಯನ್ನು ರಕ್ಷಿಸಲಾಗಿದೆ. ಮೃತದೇಹಗಳನ್ನೂ ಅಲ್ಲಿಂದ ತರಲಾಗಿದೆ. ಜನಪ್ರಿಯವಲ್ಲದ ಈ ಚಾರಣದಲ್ಲಿ ಅಪಾಯದ ಸಾಧ್ಯತೆ ಹೆಚ್ಚೇ ಇರುತ್ತದೆ. ಅಂತಹ ಅಪಾಯಕ್ಕೆ ಈ ತಂಡ ಸಿಲುಕಿದೆ. ಸಣ್ಣ, ಮಧ್ಯಮ ಮತ್ತು ದೊಡ್ಡ ಸರೋವರಗಳೂ ಸೇರಿ ಒಟ್ಟು ಏಳು ಸರೋವರಗಳಿವೆ. 'ದೇವತೆಗಳ ಸರೋವರ' ಎಂದೇ ಖ್ಯಾತವಾಗಿರುವ ಈ ಪ್ರದೇಶವು ಚಾರಣಿಗರಿಗೆ 'ಮೃತ್ಯುಕೂಪ'ವಾಗಿ ಪರಿಣಮಿಸಿದೆ



ಆಧಾರ: ಉತ್ತರಾಖಂಡ ಪ್ರವಾಸೋದ್ಯಮ ಇಲಾಖೆ, ಪಿಟಿಐ ನಕ್ಷೆ ಕೃಪೆ: ಗೂಗಲ್ ಅರ್ಥ್

ಜೂನ್‌ನಲ್ಲಿ ಹಿಮಪಾತದ ಅಪಾಯ

ಕ್ಯಾರ್ಕಿ ಪರ್ವತದಿಂದ ಇನ್ನಷ್ಟು ಎತ್ತರಕ್ಕೆ ಏರಿದರೆ ಲಂಬಾ ಸರೋವರ, ಅಲ್ಲಿಂದ ಸಹಸ್ರ ಸರೋವರದತ್ತ ಹಾದಿ ಸಾಗುತ್ತದೆ. ಆದರೆ ಜೂನ್ ಮೊದಲ ವಾರದಲ್ಲೇ ಇಲ್ಲಿ ಹಿಮಪಾತ ಆರಂಭವಾಗುತ್ತದೆ. ಈ ತಂಡವೂ ಹಿಮಪಾತ ಆರಂಭವಾಗುವ ಸಮಯದಲ್ಲೇ ಚಾರಣ ಕೈಗೊಂಡಿದೆ. 'ಸಹಸ್ರ ಸರೋವರವನ್ನು ನೋಡಿಕೊಂಡು ಲಂಬಾ ಸರೋವರದತ್ತ ವಾಪಸಾಗುವಾಗ ಹಿಮಗಾಳಿ ಆರಂಭವಾಯಿತು. ಅನಂತರ ಹಿಮಪಾತ ಆರಂಭವಾಯಿತು' ಎಂದು ಚಾರಣಿಗರೊಬ್ಬರು ಮಾಧ್ಯಮಗಳ ಜತೆಗೆ ಮಾಹಿತಿ ಹಂಚಿಕೊಂಡಿದ್ದಾರೆ. ರಕ್ಷಣಾ ಕಾರ್ಯಾಚರಣೆ ನಡೆಸಿದ್ದ ವಾಯುಪಡೆಯು ಸಹ ಹಿಮಗಾಳಿ ತೀವ್ರವಾಗಿತ್ತು ಎಂದು ವಿಡಿಯೊ ಮತ್ತು ಚಿತ್ರಗಳನ್ನು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ.

ಏಳು ದಿನ, ಆರು ರಾತ್ರಿಗಳ ಚಾರಣ

ಮೊದಲನೇ ದಿನ: ಬಟವಾರೀಯಿಂದ ಮಲ್ಲಾ ಪ್ರದೇಶದವರೆಗೆ ಚಾರಣ. ಇಲ್ಲಿ ಈ ನದಿಯನ್ನು ದಾಟಬೇಕಿದೆ. ಈ ಬಳಿಕ ಸಿಲ್ಲಾ ಗ್ರಾಮ ಸಿಗುತ್ತದೆ. ಇದು ಚಾರಣದಲ್ಲಿ ಸಿಗುವ ಕೊನೆಯ ಹಳ್ಳಿ. ಇಲ್ಲಿಂದ ಪರ್ವತದ ಅರಣ್ಯ ಪ್ರದೇಶಗಳನ್ನು ದಾಟಿಕೊಂಡು, 4-5 ಗಂಟೆಗಳ ಬಳಿಕ ಗಾಯ್ರಿ ಸಿಗುತ್ತದೆ. ಇಲ್ಲಿಂದ ಮುಂದೆ ಸುಮಾರು ಕಿ.ಮೀಗಳ ವರೆಗೆ ಎಲ್ಲಿಯೂ ಕುಡಿಯುವ ನೀರು ಕೂಡ ಸಿಗುವುದಿಲ್ಲ. ಇಲ್ಲಿಯೇ ರಾತ್ರಿ ಕಳೆಯಬೇಕಾಗುತ್ತದೆ

ಎರಡನೇ ದಿನ: ಒಂದು ತಾಸಿನ ಅರಣ್ಯದಾರಿ. ಇಲ್ಲಿಂದ ಚಾರಣವು ಕಷ್ಟವಾಗುತ್ತಾ ಸಾಗುತ್ತದೆ. ತುಸು ದೂರದ ಸರಿದ ನಂತರ ಹುಲ್ಲುಗಾವಲು ಪ್ರದೇಶ ಸಿಗುತ್ತದೆ. ಕುಶ್ ಕಲ್ಯಾಣ್ ಪರ್ವತದಲ್ಲೇ ಕ್ಯಾಂಪ್ ಮಾಡಬೇಕು. ಇಲ್ಲಿಂದ ಮುಂದೆ ಕುಡಿಯುವ ನೀರು ಸಿಗುವುದು ಇನ್ನು ಲಂಬಾ ಸರೋವರದಲ್ಲಿಯೇ

ಮೂರನೇ ದಿನ: ಇನ್ನಷ್ಟು ಎತ್ತರೆತ್ತರಕ್ಕೆ ಚಾರಣ ಆರಂಭ. ಒಂದು ಪರ್ವತವನ್ನು ಇಳಿದು ಮತ್ತೊಂದು ಪರ್ವತವನ್ನು ಏರಬೇಕು. 6-7 ತಾಸುಗಳ ಚಾರಣದ ಬಳಿಕ ಕ್ಯಾರ್ಕಿ ಬಗ್ಯಾಲ್ ಪ್ರದೇಶ ಸಿಗುತ್ತದೆ. ಇಲ್ಲಿಯೇ ರಾತ್ರಿ ಕಳೆಯಲಾಗುತ್ತದೆ

ನಾಲ್ಕನೇ ದಿನ: ಕ್ಯಾರ್ಕಿ ಪ್ರದೇಶದಿಂದ ಇನ್ನಷ್ಟು ಎತ್ತರಕ್ಕೆ ಹೋಗಬೇಕು. ಜೂನ್‌ನಿಂದ ಇಲ್ಲಿ ಹಿಮ ಬೀಳಲು ಆರಂಭವಾಗುತ್ತದೆ. ಪಕ್ಕದ ಪರ್ವತಕ್ಕೆ ಏರುವ ದಾರಿಯು ಕಿರಿದಾಗುತ್ತದೆ. ಕೇವಲ ಆರು ಅಡಿ ಅಗಲವಷ್ಟೆ. ಈ ಪರ್ವತದಲ್ಲಿ ಸಣ್ಣ ಸಣ್ಣ ಸರೋವರಗಳು ಸಿಗುತ್ತವೆ. 6 ಕಿ.ಮೀ ದೂರವನ್ನು ಕ್ರಮಿಸಲು 4-5 ತಾಸುಗಳು ಹಿಡಿಯುತ್ತವೆ. ಲಂಬಾ ಸರೋವರದ ಬಳಿಯ ಕ್ಯಾಂಪ್‌ನಲ್ಲಿಯೇ ರಾತ್ರಿ ಕಳೆಯಬೇಕು

ಐದನೇ ದಿನ: ಲಂಬಾ ಸರೋವರದಿಂದ ಸಹಸ್ರ ಸರೋವರಕ್ಕೆ ಚಾರಣ. ಸಹಸ್ರ ಸರೋವರಕ್ಕೆ ತಲುಪುವುದು ಸವಾಲು. ಅಂಕು-ಡೊಂಕು ಮಾದರಿಯಲ್ಲಿ ಚಾರಣ ಇರಲಿದೆ. ಹಿಮಪಾತ ಇರುವುದರಿಂದ ಚಾರಣವು ಇನ್ನಷ್ಟು ತ್ರಾಸದಾಯಕ ವಾಗಲಿದೆ. ಖುಕುಲಿ ಧಾರ್ ಪರ್ವತದಲ್ಲಿ ಸಹಸ್ರ ಸರೋವರ ಇದೆ. ಇಲ್ಲಿಂದ ಸಹಸ್ರ ಪರ್ವತವೂ ಕಾಣುತ್ತದೆ. ಸಹಸ್ರ ಸರೋವರದ ತಟದಲ್ಲಿ ಒಂದೆರಡು ಗಂಟೆ ಕಳೆದ ನಂತರ ಲಂಬಾ ಸರೋವರಕ್ಕೆ ವಾಪಸಾಗಬೇಕಾಗುತ್ತದೆ

ಆರನೇ ದಿನ: ಲಾಂಬಾ ಸರೋವರದಿಂದ ಕುಶ್ ಕಲ್ಯಾಣ್ ಪರ್ವತಕ್ಕೆ ಇಳಿಯಬೇಕು. ಕುಶ್ ಕಲ್ಯಾಣ್ ಪರ್ವತದಲ್ಲಿಯೇ ವಾಸ್ತವ್ಯ

ಏಳನೇ ದಿನ: ಕುಶ್ ಕಲ್ಯಾಣ್ ಪರ್ವತದಿಂದ ಪಿನ್‌ಶ್ವಾರ್ ಪರ್ವತಕ್ಕೆ 10 ಕಿ.ಮೀ.ಗಳ ಚಾರಣ. ಹುಲ್ಲುಗಾವಲು ಪ್ರದೇಶಗಳನ್ನು ದಾಟಿ ಪಿನ್‌ಶ್ವಾರ್ ಪರ್ವತಕ್ಕೆ ಇಳಿಯಬೇಕು. ಇಲ್ಲಿಗೆ ಚಾರಣ ಮುಗಿಯುತ್ತದೆ



ಸಹಸ್ರ ಸರೋವರದ ಸಮೀಪ ಸಿಲುಕಿದ್ದ ಚಾರಣಿಗರನ್ನು ರಕ್ಷಿಸಲು ವಾಯುಪಡೆಯು ಎರಡು ಚೀತಾ ಹೆಲಿಕಾಪ್ಟರ್‌ಗಳನ್ನು ಬಳಸಿತ್ತು. ಚಾರಣಿಗರ ರಕ್ಷಣೆಗೆ ಇಳಿದಿದ್ದ ಹೆಲಿಕಾಪ್ಟರ್‌ನ ಚಿತ್ರವನ್ನು ಹಾರಾಟದಲ್ಲಿದ್ದ ಇನ್ನೊಂದು ಹೆಲಿಕಾಪ್ಟರ್ ಮೂಲಕ ತೆಗೆಯಲಾಗಿತ್ತು. ಸೈನಿಕರು, ಚಾರಣಿಗರು, ಟೆಂಟ್‌ಗಳನ್ನೂ ಚಿತ್ರದಲ್ಲಿ ಕಾಣಬಹುದು
–ವಾಯುಪಡೆ ಚಿತ್ರ

ಅವರಿಗೆ ಹೇಳುವವರು ಯಾರು?

ನುಡಿ ಬೆಳಗು



ಪ್ರೊ.ಎಂ. ಕೃಷ್ಣೇಗೌಡ

ನಾನು ಮೈಸೂರಿನ ಯುವರಾಜಾ ಕಾಲೇಜಿನಲ್ಲಿ ಬಿ.ಎಸ್‌ಸಿ ಓದುತ್ತಿದ್ದಾಗ ಕನ್ನಡದ ಶ್ರೇಷ್ಠ ವಿದ್ವಾಂಸರೂ ಕವಿಗಳೂ ಆಗಿದ್ದ ಪ್ರೊ. ಸುಜನಾ ನನ್ನ ಗುರುಗಳಾಗಿದ್ದರು. ನಾನದೆಷ್ಟು ಬಾರಿ ಅಂದುಕೊಂಡಿದ್ದೇನೆಯೋ- ಅಂಥವರು ಗುರುಗಳಾಗಿ ದೊರೆಯುವುದೇ ಒಂದು ಅದೃಷ್ಟ, ಪುಣ್ಯ.

ತರಗತಿಯಲ್ಲೋ, ಹೊರಗೋ ಅವರು ಆಡುತ್ತಿದ್ದ ಮಾತುಗಳು, ನುಡಿಗಳಾ ಅವು... ಅಲ್ಲ, ಬೆಳಕಿನ ಕಿಡಿಗಳು... ಯಾವ್ಯಾವಾಗಲೋ ಥಟ್ಟನೆ ಸಿಡಿದುಬಿಡುತ್ತಿದ್ದ ನುಡಿಗಳನ್ನು ಹಿಡಿದಿಟ್ಟುಕೊಳ್ಳುತ್ತಿದ್ದೆವು... ಈಗಲೂ ನಾವು ಹಳೆಯ ಗೆಳೆಯರು ಸೇರಿದಾಗ ಅವನ್ನು ನೆನಪಿಸಿಕೊಂಡು ಚಪ್ಪರಿಸುತ್ತೇವೆ. ಅಂಥದೊಂದು ಮಾತಿನ ಉದಾಹರಣೆ, ಈ ಸಂದರ್ಭಕ್ಕೆ-

ಅಂದಿನ ದಿನಗಳಲ್ಲಿ ಕಾಲೇಜಿನ ಚುನಾವಣೆಗಳೆಂದರೆ ಅವುಗಳ ಬಣ್ಣ ಭರಾಟೆಗಳೇ ಬೇರೆ. ಆ ಅಭ್ಯರ್ಥಿಗಳು ಇದೇ ತಮ್ಮ ಜೀವನದ ಪರಮೋದ್ದೇಶವೇನೋ ಎಂಬಂತೆ ಓಡಾಡಿಕೊಂಡು ಚುನಾವಣೆ ನಡೆಸುತ್ತಿದ್ದರು. ಆವತ್ತು ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಯ ಗುಂಪಿನ ಹುಡುಗರು ಕೂಗುತ್ತಾ, ಸಿಳ್ಳೆ, ಕೇಕೆ ಹಾಕುತ್ತಾ, ಗೆದ್ದ ಅಭ್ಯರ್ಥಿಯನ್ನು ಹೆಗಲ ಮೇಲೆ ಹೊತ್ತುಕೊಂಡು ಕುಣಿದಾಡುತ್ತಿದ್ದರು.

ಕೆಳಗಡೆ ಇಂಥ ಕುಣಿತ ಮೆರೆತ ಮೋಜು ಮಸ್ತಿಗಳು ನಡೆಯುತ್ತಿರುವಾಗ ಮೇಷ್ಟರುಗಳು ಕಾಲೇಜಿನ ಮಹಡಿಯ ಮೇಲಿಂದ ಅದನ್ನು ನೋಡುತ್ತಾ ನಿಲ್ಲುತ್ತಿದ್ದರು- ಹಿಂದೆ ಭೂಲೋಕದಲ್ಲೇನಾದರೂ ಇಂಥ 'ಅದ್ಭುತ'ಗಳು ನಡೆದಾಗ ಅದನ್ನು ನೋಡಲು ದೇವತೆಗಳು ಆಕಾಶದಲ್ಲಿ ಬಂದು ನೆರೆದು ನಿಲ್ಲುತ್ತಿದ್ದರಂತಲ್ಲಾ, ಥೇಟ್ ಹಾಗೇ...

ಹುಡುಗರು ತಮ್ಮ ಗೆಳೆಯನ ಚುನಾವಣೆಯ ವಿಜಯೋತ್ಸವ ಮಾಡಲು ಮೈಮೇಲೆ ಬಂದವರಂತೆ ಕುಣಿಯುತ್ತಿದ್ದರಲ್ಲ, ಅದನ್ನು ನೋಡಿ ಸುಜನಾ ಅಂದರು: 'ನೋಡಿ ನೋಡಿ, ಗೆಲುವಿಗೆ ಉನ್ಮಾದ, ಉತ್ಸಾಹ, ಅಹಂಕಾರಗಳಷ್ಟೇ ಗೊತ್ತು. ವಿನಯ, ಔದಾರ್ಯಗಳು ಗೊತ್ತಿರುವುದಿಲ್ಲ. ಗೆದ್ದವನು ವಿನಯ, ಔದಾರ್ಯಗಳನ್ನು ತುಂಬಿಕೊಳ್ಳದಿದ್ದರೆ ಅಹಂಕಾರ ಅವನಿಗೇ ಗೊತ್ತಿಲ್ಲದಂತೆ ಅವನಲ್ಲಿ ತುಂಬಿಕೊಂಡುಬಿಡುತ್ತದೆ. ಅಷ್ಟೇ ಅಲ್ಲ, ಈ ಹುಡುಗರು ಇಲ್ಲಿ ಅವರ ಸಂತೋಷ ತಡೆದುಕೊಳ್ಳಲಾಗದೆ ಕುಣೀತಾ ಇದ್ದಾರೆ. ಏನು ಗೊತ್ತಾ? ಸಣ್ಣ ಸಂತೋಷಗಳನ್ನೂ ತಡೆದುಕೊಳ್ಳಲಾರದವರು ಸಣ್ಣ ದುಃಖಗಳನ್ನೂ ತಡೆದುಕೊಳ್ಳಲಾರರು. ಸೋಲನ್ನು ನಿಭಾಯಿಸುವುದಕ್ಕಿಂತಲೂ ಕಷ್ಟ, ಗೆಲುವನ್ನು ನಿಭಾಯಿಸುವುದು. ಆದರೆ ಈ ಹುಡುಗರಿಗೆ ಹೇಳುವವರು ಯಾರು? ಹೇಗೆ?'

ಹುಡುಗರ ಮಾತಿರಲಿ, ಈಗ ಎಷ್ಟೋ ಜನ ದೊಡ್ಡವರು ಗೆದ್ದಿದ್ದಾರೆ, ಊರೂರಿನಲ್ಲಿ ಪಟಾಕಿಗಳು ಸಿಡಿಯುತ್ತಿವೆ. ಬಾಣ ಬಿರುಸುಗಳು ಆಕಾಶಕ್ಕೆ ಎಗರುತ್ತಿವೆ. ಅವರಿಗೆ ಹೇಳುವವರು ಯಾರು? ಹೇಗೆ? ❖

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

2ನೇ ಆವೃತ್ತಿ

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ಎರಡನೇ ಆವೃತ್ತಿ ಸಮಾರಂಭ ಶೀಘ್ರದಲ್ಲೇ ನಡೆಯಲಿದ್ದು, 19 ವಿಭಾಗಗಳಲ್ಲಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರು ಮತ್ತು ಸಿನಿಮಾಗಳ ಪಟ್ಟಿಯನ್ನು ಈಗಾಗಲೇ ಪ್ರಕಟಿಸಲಾಗಿದೆ. ಇದೀಗ **'ಅತ್ಯುತ್ತಮ ಪೋಷಕ ನಟ'** ವಿಭಾಗದಲ್ಲಿ ನಾಮನಿರ್ದೇಶಿತಗೊಂಡವರ ಪರಿಚಯಿಸುವ ಸಮಯ. ಇನ್ನಷ್ಟು ಮಾಹಿತಿಗಳಿಗಾಗಿ ವೆಬ್‌ಸೈಟ್ ನೋಡಿ. prajavani.net/cinesamman/season2



ರಂಗಾಯಣ ರಘು

'ಕನ್ನಡ ಚಿತ್ರರಂಗದಲ್ಲಿ ಹಾಸ್ಯ, ಪೋಷಕ ನಟನಾಗಿ ಮೂರೂವರೆ ದಶಕಗಳನ್ನು ಪೂರೈಸಿರುವ ರಂಗಾಯಣ ರಘು 'ಟಗರು ಪಲ್ಯ' ಚಿತ್ರದ ನಟನೆಗಾಗಿ ನಾಮನಿರ್ದೇಶನಗೊಂಡಿದ್ದಾರೆ. ಈ ತನಕ 250ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿರುವ ಇವರು, 1988 ರಿಂದ ಬಿ.ವಿ.ಕಾರಂತ ಅವರ ರಂಗತಂಡದಲ್ಲಿದ್ದರು. 1995ರಲ್ಲಿ 'ಸುಗ್ಗಿ' ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದರು. 2007ರಲ್ಲಿ 'ದುನಿಯಾ' ಚಿತ್ರದಲ್ಲಿ ಅತ್ಯುತ್ತಮ ನಟನೆಗಾಗಿ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿಯನ್ನು ಪಡೆದಿದ್ದಾರೆ. ಕನ್ನಡದ ಈಗಿನ ಎಲ್ಲ ಪ್ರಮುಖ ನಟನರೊಂದಿಗೆ ಹಾಸ್ಯ ನಟನಾಗಿ ಗುರುತಿಸಿಕೊಂಡಿದ್ದಾರೆ. 'ರಂಗ ಸಮುದ್ರ', 'ಶಾಖಾಹಾರಿ' ಮೊದಲಾದ ಚಿತ್ರಗಳಲ್ಲಿ ಇವರೇ ಕಥಾನಾಯಕನಾಗಿಯೂ ಅಭಿನಯಿಸಿ ಗಮನ ಸೆಳೆದಿದ್ದಾರೆ.

ಕಿರುತೆರೆ ಜನಪ್ರಿಯ ನಿರ್ದೇಶಕ ರಮೇಶ್ ಇಂದಿರಾ 'ಸಪ್ತಸಾಗರದಾಚೆ ಎಲ್ಲೋ ಸೈಡ್-ಎ' ಚಿತ್ರದ ನಟನೆಗಾಗಿ ನಾಮನಿರ್ದೇಶನಗೊಂಡಿದ್ದಾರೆ. 'ನಮ್ಮಮ್ಮ ಶಾರದೆ', 'ದೇವಿ', 'ಮಹಾದೇವಿ', 'ಯಾರೇ ನೀ ಮೋಹಿನಿ' ಮೊದಲಾದ ಜನಪ್ರಿಯ ಧಾರಾವಾಹಿಗಳನ್ನು ನೀಡಿರುವ ಇವರು ಬರಹಗಾರನಾಗಿಯೂ ಗುರುತಿಸಿಕೊಂಡಿದ್ದಾರೆ. ಶೃತಿ ನಾಯ್ಡು ಚಿತ್ರ ಪ್ರೊಡಕ್ಷನ್ ಮೂಲಕ ಧಾರಾವಾಹಿ ನಿರ್ಮಾಣದ ಜೊತೆಗೆ ನಟನೆಯಲ್ಲಿಯೂ ತೊಡಗಿಸಿಕೊಂಡಿದ್ದಾರೆ. 'ಪ್ರೀಮಿಯರ್ ಪದ್ಮಿನಿ' ಸಿನಿಮಾವನ್ನು ನಿರ್ದೇಶನ ಮಾಡುವ ಮೂಲಕ ಸ್ಯಾಂಡಲ್‌ವುಡ್ ಪ್ರವೇಶಿಸಿದರು. 'ಕೆಜಿಎಫ್ ಚಾಪ್ಟರ್-1'ರಲ್ಲಿ ಖಳನಾಯಕನಾಗಿ ಗಮನ ಸೆಳೆದಿದ್ದರು.

ರಮೇಶ್ ಇಂದಿರಾ

ನಾಗಭೂಷಣ್

'ಕೌಸಲ್ಯ ಸುಪ್ರಜಾ ರಾಮ' ಚಿತ್ರದ ನಟನೆಗಾಗಿ ನಾಗಭೂಷಣ ನಾಮನಿರ್ದೇಶನಗೊಂಡಿದ್ದಾರೆ. ಮೈಮ್ ರಮೇಶ್ ಅವರ ಹವ್ಯಾಸಿ ರಂಗಭೂಮಿ ತಂಡದಿಂದ ಬಂದ ಇವರು ಹಾಸ್ಯನಟನಾಗಿ ಗುರುತಿಸಿಕೊಂಡಿದ್ದಾರೆ. ನಟನೆಗಾಗಿ ಸರ್ಕಾರಿ ಕೆಲಸ ತ್ಯಜಿಸಿದರು. 2016ರಲ್ಲಿ ಸ್ನೇಹಿತರೊಂದಿಗೆ ಕರ್ನಾಟಕ ಎಂಟರ್‌ಟೈನ್‌ಮೆಂಟ್ ಬೋರ್ಡ್ ಎಂಬ ಯೂಟ್ಯೂಬ್ ಚಾನೆಲ್ ಪ್ರಾರಂಭಿಸಿ ಸಾಕಷ್ಟು ಹಾಸ್ಯ ಕಾರ್ಯಕ್ರಮಗಳನ್ನು ನೀಡಿದ್ದಾರೆ. 'ಬದ್ಮಾಶ್' ಚಿತ್ರದಲ್ಲಿ ಪೋಷಕ ನಟನಾಗಿ ಚಿತ್ರರಂಗ ಪ್ರವೇಶಿಸಿದ ಇವರು 'ಸಂಕಷ್ಟಕರ ಗಣಪತಿ' ಚಿತ್ರದಲ್ಲಿ ನಾಯಕನ ಸ್ನೇಹಿತನಾಗಿ ನಟಿಸಿದರು. 'ಹನಿಮೂನ್' ಎಂಬ ವೆಬ್ ಸರಣಿಗೆ ಕಥೆ ಬರೆದು, ಸಂಜನಾ ಆನಂದ್ ಅವರೊಂದಿಗೆ ನಟಿಸಿದರು. ಹಾಸ್ಯಮಯ 'ಇಕ್ಕಟ್' ಚಿತ್ರದೊಂದಿಗೆ ನಾಯಕರಾದರು. ನಟ ಧನಂಜಯ ಅವರ ಆಪ್ತ ಸ್ನೇಹಿತರಾಗಿರುವ ಇವರು 'ಬಡವ ರಾಸ್ಕಲ್'ನಲ್ಲಿ ಕಾಣಿಸಿಕೊಂಡರು. 'ಟಗರು ಪಲ್ಯ' ಇವರು ನಾಯಕನಾಗಿ ಚಿತ್ರಮಂದಿರದಲ್ಲಿ ಬಿಡುಗಡೆಗೊಂಡ ಮೊದಲ ಚಿತ್ರ. ಸಾಕಷ್ಟು ಸಿನಿಮಾಗಳಲ್ಲಿ ಪೋಷಕ ನಟನಾಗಿ ಕಾಣಿಸಿಕೊಂಡಿರುವ ಇವರು ಸದ್ಯ 'ವಿದ್ಯಾಪತಿ' ಚಿತ್ರದಲ್ಲಿ ನಾಯಕನಾಗಿ, 'ಅಣ್ಣ From Mexico' ಚಿತ್ರದಲ್ಲಿ ಪೋಷಕ ನಟನಾಗಿ ನಟಿಸುತ್ತಿದ್ದಾರೆ.

ನಟ ಜೆ.ಪಿ.ತುಮ್ಮಿನಾಡು 'ಸ್ವಾತಿ ಮುತ್ತಿನ ಮಳೆ ಹನಿಯೇ' ಚಿತ್ರದ ನಟನೆಗಾಗಿ ನಾಮನಿರ್ದೇಶನಗೊಂಡಿದ್ದಾರೆ. ತುಳು ರಂಗಭೂಮಿ ನಟರಾಗಿರುವ ಇವರು, ಶಾರದಾ ಆರ್ಟ್ಸ್ ಮಂಜೇಶ್ವರ ರಂಗತಂಡದೊಂದಿಗೆ 2011ರಲ್ಲಿ ನಟನೆ ಪ್ರಾರಂಭಿಸಿದರು. ಇದೇ ತಂಡದಲ್ಲಿ ನಿರ್ದೇಶಕ, ಬರಹಗಾರರೂ ಆಗಿದ್ದಾರೆ. ತುಳುವಿನಲ್ಲಿ 'ರಂಗ್' ಮೂಲಕ ಚಿತ್ರರಂಗ ಪ್ರವೇಶಿಸಿದರು. 'ಕಟಪಾಡಿ ಕಟ್ಟಪ್ಪ' ಎಂಬ ತುಳು ಚಿತ್ರವನ್ನು ನಿರ್ದೇಶಿಸಿದ್ದಾರೆ. 'ಒಂದು ಮೊಟ್ಟೆಯ ಕಥೆ' ಕನ್ನಡದಲ್ಲಿ ಇವರ ಮೊದಲ ಚಿತ್ರ. 'ಗರುಡ ಗಮನ ವೃಷಭ ವಾಹನ', 'ಕಥಾಸಂಗಮ', 'ಸಪ್ತಸಾಗರದಾಚೆ ಎಲ್ಲೋ' ಚಿತ್ರಗಳಲ್ಲಿ ಪೋಷಕ ನಟನಾಗಿ ಗಮನ ಸೆಳೆದಿದ್ದಾರೆ. ಸದ್ಯ ಕನ್ನಡ ಸಿನಿಮಾವೊಂದರ ನಿರ್ದೇಶನದ ತಯಾರಿಯಲ್ಲಿದ್ದು, ತುಳು ಚಿತ್ರದಲ್ಲಿ ನಟಿಸುತ್ತಿದ್ದಾರೆ.

ಜೆ.ಪಿ.ತುಮ್ಮಿನಾಡು

ಪೂರ್ಣಚಂದ್ರ ಮೈಸೂರು

'ಡೇರ್ ಡೆವಿಲ್ ಮುಸ್ತಾಫಾ' ಚಿತ್ರದ ನಟನೆಗಾಗಿ ಪೂರ್ಣಚಂದ್ರ ಮೈಸೂರು ನಾಮನಿರ್ದೇಶನಗೊಂಡಿದ್ದಾರೆ. ಕಿರುಚಿತ್ರಗಳಿಂದ ತಮ್ಮ ನಟನಾ ವೃತ್ತಿಯನ್ನು ಪ್ರಾರಂಭಿಸಿದ ಇವರು 'ಟಗರು', 'ಪಾಪ್‌ಕಾರ್ನ್ ಮಂಕಿ ಟೈಗರ್', 'ಬ್ಯಾಡ್ ಮ್ಯಾನರ್ಸ್', ಟಗರು ಪಲ್ಯ ಸೇರಿದಂತೆ ಹಲವು ಸಿನಿಮಾಗಳಲ್ಲಿ ನಟಿಸಿದ್ದಾರೆ. 'ಆರ್ಕೆಸ್ಟ್ರಾ ಮೈಸೂರು' ಚಿತ್ರದ ಮೂಲಕ ನಾಯಕನಾದರು. ಈಗ ಅವರು 'ಮರ್ಯಾದೆ ಪ್ರಶ್ನೆ', 'ನಿಮಿತ್ತ ಮಾತ್ರ', 'ಫ್ಯಾಮಿಲಿ ಡ್ರಾಮಾ' ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ.

ನಟ ವಿಜಯ್ ಶೋಭರಾಜ್ ಪಾವೂರು 'ಡೇರ್ ಡೆವಿಲ್ ಮುಸ್ತಾಫಾ' ಚಿತ್ರದಲ್ಲಿ ತಮ್ಮ ನಟನೆಗಾಗಿ ನಾಮನಿರ್ದೇಶನಗೊಂಡಿದ್ದಾರೆ. ತುಳು ರಂಗಭೂಮಿಯಿಂದ ಬಂದ ಇವರು ಕನ್ನಡ ಕಿರುತೆರೆ ಜಗತ್ತಿನಲ್ಲಿ ಜನಪ್ರಿಯ. ದೇವದಾಸ್ ಕಾಪಿಕಾಡ್ ಅವರ ತಂಡದಲ್ಲಿ ಇದ್ದ ವಿಜಯ್ ಅನೇಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ. 'ಏಸ', 'ಡಿಕೆ ಬೋಸ್' ಎಂಬ ತುಳು ಚಿತ್ರಗಳಲ್ಲಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಸದ್ಯ ಧಾರಾವಾಹಿ, ಸಿನಿಮಾಗಳ ನಟನೆಯಲ್ಲಿ ಮಗ್ನರಾಗಿದ್ದಾರೆ.

ವಿಜಯ್ ಶೋಭರಾಜ್

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಜೂನ್ 7, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ಪ್ರತಿಪದ್ ಗಂ. 16-46 ನಕ್ಷತ್ರ: ಮೃಗಶಿರ ಗಂ. 19-43 ಯೋಗ: ಶೂಲ ಗಂ. 20-04 ಕರಣ: ಕಿಂಸ್ತುಘ್ನ ಗಂ. 5-23, ವೃಷಭ ಮಾಸದ ನೇ 24 ದಿನ, ಮಳೆನಕ್ಷತ್ರ: ರೋಹಿಣಿ 4.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-07 ಸೂರ್ಯಾಸ್ತ : 06-52
ಮುಸ್ಲಿಂ ದಿನಾಂಕ : 29 ಜುಲ್ಹಾಯದ್
ಅದೃಷ್ಟ ಸಂಖ್ಯೆ : 5, 10

ಮೇಷ: ವಸ್ತ್ರ ವಿನ್ಯಾಸ ಸಲಹೆಗಾರರಿಗೆ ಪ್ರತಿಷ್ಠಿತ ಗಾರ್ಮೆಂಟ್ ಸಂಸ್ಥೆಯೊಂದರಲ್ಲಿ ಉದ್ಯೋಗ ಸಿಗುವ ಕುರುಹುಗಳು ಸಿಗುತ್ತವೆ. ಕಾಲು ನೋವು ಅಥವಾ ಬೆನ್ನು ನೋವು ಕಾಣಿಸಿದವರಿಗೆ ವೈದ್ಯರ ದರ್ಶನ ಅಗತ್ಯವೆನಿಸಲಿದೆ.

ವೃಷಭ: ಆತುರದಲ್ಲಿ ವಿದ್ಯಾಭ್ಯಾಸ ಹಾಗು ವೃತ್ತಿಯ ಬಗ್ಗೆ ತೆಗೆದುಕೊಳ್ಳುವ ನಿರ್ಧಾರಗಳಿಂದ ಪಶ್ಚಾತಾಪ ಪಡಬೇಕಾಗುವುದು. ದನ ಕರುಗಳ ಅಥವಾ ಮನೆಯಲ್ಲಿ ಸಾಕಿರುವ ಪ್ರಾಣಿಗಳ ಆರೋಗ್ಯ ತಪಾಸಣೆ ಮಾಡಿಸಿ.

ಮಿಥುನ: ಎಲೆಕ್ಟ್ರಿಕಲ್ ಕಂಟ್ರಾಕ್ಟರ್‌ಗಳಿಗೆ ಉತ್ತಮ ಅವಕಾಶಗಳು ಸಿಗಲಿವೆ. ಅದೇ ರೀತಿ ಗ್ರಾಹಕರಿಂದ ದೂರುಗಳನ್ನು ಕೇಳುವ ಸಂಭವವೂ ಇದೆ. ತಾಯಿಯವರ ಆರೋಗ್ಯ ಸುಧಾರಿಸಿ ನೆಮ್ಮದಿ ಉಂಟಾಗಲಿದೆ.

ಕರ್ಕಾಟಕ: ಸಲಹೆ ಸೂಚನೆಗಳನ್ನು ಮೇಲಧಿಕಾರಿಗಳು ಯಾವುದೇ ವ್ಯತ್ಯಾಸವಿಲ್ಲದೆ ಜಾರಿಗೆ ತಂದದ್ದಕ್ಕೆ ಸಂತೋಷವಾಗಲಿದೆ. ಕಾಲಿನ ನೋವು ನಿವಾರಿಸಿಕೊಳ್ಳಲು ಸೂಕ್ತ ವ್ಯಾಯಾಮ, ತೈಲ ಲೇಪನದಂತಹ ಪರಿಹಾರ ತಿಳಿದುಕೊಳ್ಳುವಿರಿ.

ಸಿಂಹ: ಔಷಧಿ, ರಸಗೊಬ್ಬರ ಮತ್ತು ಕೀಟ ನಾಶಕಗಳಂಥ ರಾಸಾಯನಿಕ ವಸ್ತುಗಳನ್ನು ತಯಾರು ಮಾಡುವವರಿಗೆ ಹೊಸ ಪ್ರಯೋಗವು ಉತ್ತಮ ಫಲಿತಾಂಶ ನೀಡಲಿದೆ. ಕಷ್ಟಪಟ್ಟು ದುಡಿದ ಹಣ ಕೈಯಲ್ಲಿ ನಿಲ್ಲುವುದು.

ಕನ್ಯಾ: ಹವ್ಯಾಸಿ ಛಾಯಾಗ್ರಾಹಕರಿಗೆ ಪ್ರಶಸ್ತಿ ಲಭಿಸುವುದು ಅಥವಾ ಸಮಾಜದಲ್ಲಿ ಹೆಸರು ಲಭಿಸುವುದರ ಜತೆಗೆ ಬೇಡಿಕೆ ಹೆಚ್ಚಾಗಲಿದೆ. ದೂರ ಸಂಚಾರದಲ್ಲಿ ಕಾರ್ಯಾನುಕೂಲ ತೋರಿಬಂದು ಮಾನಸಿಕ ನೆಮ್ಮದಿ ತರಲಿದೆ.

ತುಲಾ: ಭೂಮಿ ಅಥವಾ ವಾಹನ ಖರೀದಿಯಲ್ಲಿ ಮೋಸ ಹೋಗುವ ಅದರಲ್ಲೂ ದಾಖಲೆಗಳ ವಿಚಾರದಲ್ಲಿ ವ್ಯತ್ಯಾಸ ಆಗಬಹುದು. ಮನಸ್ಸಿಗೆ ಅಸಮಾಧಾನ ಆಗುವಂತಹ ಹಲವು ಘಟನೆಯು ನಡೆಯಲಿದೆ.

ವೃಶ್ಚಿಕ: ಪಿತ್ರಾರ್ಜಿತವಾದ ಕೃಷಿ ಪ್ರದೇಶ ಅಥವ ಗೃಹ ಮಾರಾಟವು ನಿಮ್ಮ ಹಿರಿಯರ ಮನಸ್ಸನ್ನು ನೋವಿಸಲಿದೆ. ತೀಕ್ಷ್ಣ ಮಾತುಗಳು ಬೇರೆಯವರ ದುಃಖಕ್ಕೆ ಕಾರಣವಾಗದಂತೆ ಗಮನಿಸುವುದು ಮುಖ್ಯ.

ಧನು: ಮನೆಯಲ್ಲಿನ ಯುದ್ಧದ ವಾತಾವರಣವನ್ನು ಮನೆಯ ಯಜಮಾನತಿಯ ಸ್ಥಾನದಲ್ಲಿ ನಿಂತು ತಿಳಿಗೊಳಿಸಬೇಕಾದುದು ಕರ್ತವ್ಯವಾಗಿರುತ್ತದೆ. ಗೋ ಉತ್ಪನ್ನಗಳ ಮಾರಾಟವು ಲಾಭದಾಯಕ.

ಮಕರ: ಮನರಂಜನೆಗಾಗಿ ಅಥವ ಕ್ಷಣಿಕ ಸುಖದ ಅನುಭವಕ್ಕಾಗಿ ದುಂದುವೆಚ್ಚ ಮಾಡಿ ಮುಂದಿನ ದಿನಗಳಲ್ಲಿ ಕೊರಗುವಂತೆ ಮಾಡಿಕೊಳ್ಳದಿರಿ. ಗಾರ್ಮೆಂಟ್ಸ್ ಕೆಲಸಗಾರರಿಗೆ ವೇತನ ಹೆಚ್ಚುವುದರಿಂದ ಸಂತಸವಿರುವುದು.

ಕುಂಭ: ರಬ್ಬರ್, ಪ್ಲಾಸ್ಟಿಕ್ ವಸ್ತುಗಳ ತಯಾರಿಕೆಯ ವ್ಯವಹಾರದಲ್ಲಿರುವವರು ಏಳಿಗೆ ಕಂಡು ನೆಮ್ಮದಿಯನ್ನು ಕಾಣುವರು. ಹೆಸರಾಂತ ಶಿಕ್ಷಣ ಸಂಸ್ಥೆಯಲ್ಲಿ ಕಡಿಮೆ ಪ್ರಯತ್ನದಿಂದಲೇ ಅಧ್ಯಾಪಕ ವೃತ್ತಿ ದೊರೆಯುವ ಸಂಭವವಿದೆ.

ಮೀನ: ಸ್ನೇಹಪರ ಸ್ವಭಾವದಿಂದಾಗಿ ಕಾರ್ಯಕ್ಷೇತ್ರದಲ್ಲಿ ವೈಯಕ್ತಿಕ ಸ್ಥಾನಮಾನಗಳು ಲಭಿಸುವುದು. ಎಲ್ಲವನ್ನು ಮಾಡಬಲ್ಲೆನೆಂಬ ಹುಮ್ಮಸ್ಸು ಬಂದಿದೆ. ಸುಲಭವಾಗಿ ಕೆಲಸ ಪೂರೈಸುವಿರಿ.

ಪದಬಂಧ 5704

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ವಾಗ್ದೇವಿಯ ಇನ್ನೊಂದು ಹೆಸರು (4)
3.ಅಂತರಂಗವನ್ನು ನಿಯಾಮಿಸತಕ್ಕ ಪರಮಾತ್ಮ (4)
4.ಮಿಡಿ ಧರಿಸಿದವಳ ಸ್ಪಂದನ! (3)
5.ವರ ಪಡೆದುಕೊಂಡಿರುವ ಬೇಡ ಇಲ್ಲಿದ್ದಾನೆ (4)
7.ಬೆಳ್ಳಿ ಇಲ್ಲಿದೆ (3)
9.ನಾಲ್ಕು ಆಶ್ರಮಗಳಲ್ಲಿ ಮೂರನೆಯದು (4)
10.ಹಲ ಹಿಡಿದು ನಿಂತಿರುವ ಈತ ನಿಶ್ಯಕ್ತ! (4)
11.ಮಗನಿಗೆ ಇದು ತುಂಬಾ ಸಲೀಸು (3)
13.ಅತ್ಯಂತ ಚಲುವಾದುದು ಮರದಲ್ಲಿದೆ (4)
15.ರುಮಾಲನ್ನು ಧರಿಸಿದವನು ತಂದು ಕೊಟ್ಟ ಹೂವು (3)
16.ಮಾತುಕತೆಯಾಡುವಾಗ ಬಂದಿರುವ ಅಮಲು! (4)
17.ಕಣದಲ್ಲಿ ಹಾಕಿರುವ ಲಗಾಮು (4)

ಮೇಲಿಂದ ಕೆಳಕ್ಕೆ

1.ವಸತಿ ಹತ್ತಿರವಿರುವ ಮಂತ್ರಿ (3)
2.ತೀರದ ಹತ್ತಿರ ತೋರಿಸಿದ ಅಜ್ಞಾನ (3)
3.ಅಂತರಂಗದಲ್ಲಿರುವ ವ್ಯತ್ಯಾಸ ಗೊತ್ತಾಯಿತೇ? (3)
6.ಈ ರೀತಿ ಕೋಮಲವಾಗಿರು! (5)
8.ಶೀರ್ಷಿಕೆಯನ್ನು ಹೀಗೆ ಕೊಡಿ! (5)
12.ಮತ್ತೆ ಮತ್ತೆ ತೋರುತ್ತಿರುವ ಪ್ರೀತಿ (3)
13.ಕರುವಿಗೆ ತೋರಿಸುತ್ತಿರುವ ದಯೆ (3)
14.ಮರದ ಹತ್ತಿರ ಕಾಯುತ್ತಿರುವ ನಲ್ಲ (3)



5703ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಳಪ 3.ಬಸದಿ
5.ಲವಲವಿಕೆ 7.ರತಿ
9.ತೀರ 10.ಹಂದರ
11.ಪಿಕ 12.ನರ
14.ತಲವಿನ್ಯಾಸ 16.ಹರಕೆ
17.ನಯನ

ಮೇಲಿಂದ ಕೆಳಕ್ಕೆ:
1.ಬಡಿವಾರ 2.ಪತ್ತಲ
3.ಬಯಕೆ 4.ದಿನಕರ
6.ವಿಚಾರ 8.ತಿರುಕ
9.ತೀರ್ಮಾನ 10.ಹಂಬಲ
11.ಪಿತಾಮಹ 13.ರಸಾಯನ
14.ತಡಿಕೆ 15.ಸನ್ಮಾನ

ಸುಡೊಕು 6089

9	2			5		8	4	
			3		9			1
	4			1			5	7
	3	2		9		7		6
			1		2		9	
7	9			3		2	1	
3	1		9		5		7	
				8		1	6	9
	6	9			1		3	8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6088 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

ಷೇರುಪೇಟೆ ವಹಿವಾಟು 692

ಹಿಂದಿನ ಅಂತ್ಯ	74,382
ಇಂದಿನ ಅಂತ್ಯ	75,074

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,620
ಇಂದಿನ ಅಂತ್ಯ	22,821
▲	201
ದಿನದ ಗರಿಷ್ಠ	22,910

ವಿನಿಮಯ ದರ

$ ಡಾಲರ್	83.53
£ ಪೌಂಡ್	106.80
€ ಯುರೊ	90.86
¥ ಯೆನ್ (100ಕ್ಕೆ)	53

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹505
12 ಕ್ಕೆ	₹70
ಮೈಸೂರು	
100ಕ್ಕೆ	₹510

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1480 (1480)
ಸೋಯಾ (ರಿಫೈನ್ಡ್)	₹955 (950)
ಸೂರ್ಯಕಾಂತಿ (ರಿಫೈನ್ಡ್)	₹970 (965)
ಪಾಮೋಲಿನ್	₹910 (900)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹8100-9200
ಮಧುಗಿರಿ	₹8000-9000
ತುರುವೇಕೆರೆ	₹8529-9000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹191
ಆರ್‌ಎಸ್‌ಎಸ್-5	₹184
ಗುಡ್ ಲಾಟ್	₹174

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹312-505
ದ್ವಿತಳಿ (ಬಿ.ವಿ)	₹360-625

ಷೇರುಪೇಟೆ ಮಹಾಪತನ ಇ.ಡಿ ತನಿಖೆಗೆ ಆಗ್ರಹ

ನವದೆಹಲಿ (ಪಿಟಿಐ): ದೇಶದ ಷೇರುಪೇಟೆಗಳು ಮಂಗಳವಾರದ ವಹಿವಾಟಿನಲ್ಲಿ ಮಹಾಪತನ ಕಂಡಿದ್ದು, ಇದರ ಹಿಂದಿರುವ ನೈಜ ಕಾರಣವನ್ನು ಪತ್ತೆ ಹಚ್ಚಲು ಜಾರಿ ನಿರ್ದೇಶನಾಲಯದಿಂದ ತನಿಖೆ ನಡೆಸಬೇಕಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯದ ಕಾರ್ಯದರ್ಶಿಯಾಗಿದ್ದ ನಿವೃತ್ತ ಐಎಎಸ್ ಅಧಿಕಾರಿ ಇ.ಎ.ಎಸ್. ಶರ್ಮಾ ಒತ್ತಾಯಿಸಿದ್ದಾರೆ.

ಈ ಕುರಿತು ಕೇಂದ್ರ ಹಣಕಾಸು ವ್ಯವಹಾರಗಳ ಕಾರ್ಯದರ್ಶಿ ಅಜಯ್ ಸೇಠ್ ಅವರಿಗೆ ಪತ್ರ ಬರೆದಿದ್ದಾರೆ.

'ಜೂನ್ 3 ಮತ್ತು 4ರಂದು ಮಾರುಕಟ್ಟೆಯಲ್ಲಿನ ಏರಿಳಿತಕ್ಕೆ ಸಂಬಂಧಿಸಿದಂತೆ ಭಾರತೀಯ ಷೇರು ನಿಯಂತ್ರಣ ಮಂಡಳಿಯು ಯಾವ ಕ್ರಮಕೈಗೊಂಡಿದೆ ಅಥವಾ ಇದರ ಹಿಂದಿನ ನೈಜ ಕಾರಣವನ್ನು ಪತ್ತೆಹಚ್ಚಲು ತನಿಖೆ ಆರಂಭಿಸಿದೆಯೇ ಎಂಬ ಬಗ್ಗೆ ತಿಳಿಯಬೇಕಿದೆ. ಹಾಗಾಗಿ, ಇ.ಡಿಯಿಂದ ತನಿಖೆ ನಡೆಸಬೇಕಿದೆ' ಎಂದು ಕೋರಿದ್ದಾರೆ.

'ಸೂಚ್ಯಂಕಗಳ ಏರಿಳಿತದಿಂದ ಸಣ್ಣ ಮತ್ತು ಮಧ್ಯಮ ಹೂಡಿಕೆದಾರರ ಹಣ ಕರಗಿ ಹೋಗಿದೆ. ಷೇರುಪೇಟೆಯ ಲಾಭಕೋರರು ಇದರ ಲಾಭ ಪಡೆದಿದ್ದಾರೆ. ಇಂದಿಗೂ ಮಾರುಕಟ್ಟೆಗಳು ಚೇತರಿಕೆ ಸ್ಥಿತಿಯಲ್ಲಿವೆ' ಎಂದು ಹೇಳಿದ್ದಾರೆ.

ಮೂರನೇ ಅವಧಿಗೆ ಮೋದಿ ಪ್ರಧಾನಿ: ಷೇರುಪೇಟೆಗೆ ಬಲ

ಎರಡನೇ ದಿನವೂ ಗೂಳಿ ಓಟ



ಮುಂಬೈ (ಪಿಟಿಐ): ಕೇಂದ್ರದಲ್ಲಿ ಮೂರನೇ ಅವಧಿಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವು ಅಧಿಕಾರದ ಗದ್ದುಗೆ ಹಿಡಿಯುವುದು ಖಚಿತವಾಗುತ್ತಿದ್ದಂತೆ, ದೇಶದ ಷೇರುಪೇಟೆಗಳಲ್ಲಿ ಸತತ ಎರಡನೇ ದಿನವಾದ ಗುರುವಾರವೂ ಗೂಳಿ ಓಟ ಮುಂದುವರಿಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಮತ್ತು ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಶೇ 1ರಷ್ಟು ಏರಿಕೆ ಕಂಡಿವೆ.

ಸೆನ್ಸೆಕ್ಸ್ ಮತ್ತೆ 75 ಸಾವಿರ ಗಡಿ ದಾಟಿದೆ. 692 ಅಂಶ ಏರಿಕೆ (ಶೇ 0.93ರಷ್ಟು) ಕಂಡು ಅಂತಿಮವಾಗಿ 75,074 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು. ವಹಿವಾಟಿನ ಒಂದು ಸಂದರ್ಭದಲ್ಲಿ 915 ಅಂಶ ಏರಿಕೆ ಕಂಡಿತ್ತು.

ನಿಫ್ಟಿ 201 ಅಂಶ ಏರಿಕೆ (ಶೇ 0.89ರಷ್ಟು) ಕಂಡು, 22,821 ಅಂಶಗಳಲ್ಲಿ ಸ್ಥಿರಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಟೆಕ್ ಮಹೀಂದ್ರ, ಎಚ್‌ಸಿಎಲ್ ಟೆಕ್ನಾಲಜೀಸ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎನ್‌ಟಿಪಿಸಿ, ಇನ್ಫೊಸಿಸ್, ಎಲ್ ಆ್ಯಂಡ್ ಟಿ, ಟಿಸಿಎಸ್ ಮತ್ತು ವಿಪ್ರೊ ಕಂಪನಿಯ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಅದಾನಿ ಸಮೂಹದ 10 ಕಂಪನಿಗಳ ಪೈಕಿ ಒಂಬತ್ತು ಕಂಪನಿಗಳ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಹಿಂದುಸ್ತಾನ್ ಯೂನಿಲಿವರ್, ಏಷ್ಯನ್ ಪೇಂಟ್ಸ್, ಮಹೀಂದ್ರ ಆ್ಯಂಡ್ ಮಹೀಂದ್ರ, ನೆಸ್ಲೆ ಇಂಡಿಯಾ, ಇಂಡಸ್‌ಇಂಡ್ ಬ್ಯಾಂಕ್ ಮತ್ತು ಸನ್ ಫಾರ್ಮಾ ಕಂಪನಿಯ ಷೇರಿನ ಮೌಲ್ಯದಲ್ಲಿ ಕುಸಿತವಾಗಿದೆ.

ಬಿಎಸ್‌ಇ ಸ್ಮಾಲ್ ಕ್ಯಾಪ್ ಶೇ 3.06ರಷ್ಟು ಹಾಗೂ ಮಿಡ್ ಕ್ಯಾಪ್ ಶೇ 2.28ರಷ್ಟು ಏರಿಕೆ ಕಂಡಿವೆ.

ಬುಧವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಒಟ್ಟು ₹5,656 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

'ಕೇಂದ್ರದಲ್ಲಿ ಎನ್‌ಡಿಎ ಮೈತ್ರಿಕೂಟದ ಸ್ಥಿರ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂಬ ಭರವಸೆ ಮೂಡಿದೆ. ಹಾಗಾಗಿ, ಷೇರುಪೇಟೆಯಲ್ಲಿ ಸಕಾರಾತ್ಮಕ ವಹಿವಾಟು ನಡೆದಿದೆ. ಆದಾಗ್ಯೂ, ಹೊಸ ಸಚಿವ ಸಂಪುಟ ರಚನೆ ಕಸರತ್ತು ಹಾಗೂ ಬಜೆಟ್‌ನಲ್ಲಿ ಹೊಸ ನೀತಿಗಳ ಕುರಿತ ಘೋಷಣೆಗಳ ಬಗ್ಗೆ ತಳಮಳ ಇದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ (ಸಂಶೋಧನಾ ವಿಭಾಗ) ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಸೋಲ್, ಹಾಂಗ್‌ಕಾಂಗ್ ಮಾರುಕಟ್ಟೆ ಏರಿಕೆ ದಾಖಲಿಸಿದರೆ, ಶಾಂಘೈ ಇಳಿಕೆ ಕಂಡಿದೆ. ಯುರೋಪಿಯನ್ ಮಾರುಕಟ್ಟೆಗಳಲ್ಲೂ ಸಕಾರಾತ್ಮಕ ವಹಿವಾಟು ನಡೆದಿದೆ.

ಹೂಡಿಕೆದಾರರ ಸಂಪತ್ತು ₹21 ಲಕ್ಷ ಕೋಟಿ ವೃದ್ಧಿ

ನವದೆಹಲಿ (ಪಿಟಿಐ): ಕಳೆದ ಎರಡು ದಿನಗಳ ವಹಿವಾಟಿನಲ್ಲಿ ಸೆನ್ಸೆಕ್ಸ್ 2,995 ಅಂಶ ಏರಿಕೆ (ಶೇ 4.15ರಷ್ಟು) ಕಂಡಿದ್ದು, ಹೂಡಿಕೆದಾರರ ಸಂಪತ್ತು ₹21 ಲಕ್ಷ ಕೋಟಿ ಹೆಚ್ಚಳವಾಗಿದೆ.

ಲೋಕಸಭಾ ಚುನಾವಣೆಯ ಮತ ಎಣಿಕೆ ದಿನದಂದು ಷೇರುಪೇಟೆಯು ಮಹಾಪತನ ಕಂಡಿದ್ದರಿಂದ ಹೂಡಿಕೆದಾರರ ₹31 ಲಕ್ಷ ಕೋಟಿ ಸಂಪತ್ತು ಕರಗಿತ್ತು. ಬಿಎಸ್‌ಇಯಲ್ಲಿ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಮೌಲ್ಯ ₹413 ಲಕ್ಷ ಕೋಟಿಗೆ ತಲುಪಿದೆ.

ಸುದ್ದಿ 2 ನಿಮಿಷ

ವಿಮಾನ ಇಳಿದಾಣ ಅಭಿವೃದ್ಧಿಗೆ ಒತ್ತು: ಕೇಂದ್ರ ಸರ್ಕಾರ

ಮುಂಬೈ (ಪಿಟಿಐ): ದೇಶದಲ್ಲಿ ವಿಮಾನ ಇಳಿದಾಣಗಳನ್ನು (ಏರ್‌ಸ್ಟ್ರಿಪ್) ಅಭಿವೃದ್ಧಿಪಡಿಸುವ ಮೂಲಕ ದೊಡ್ಡ ಹಾಗೂ ಸಣ್ಣ ವಿಮಾನ ನಿಲ್ದಾಣಗಳಿಗೆ ಸಂಪರ್ಕ ಬಲಪಡಿಸಲು ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯವು ನಿರ್ಧರಿಸಿದೆ.

ಭಾರತದಲ್ಲಿ ನಾಗರಿಕ ವಿಮಾನಯಾನ ಮಾರುಕಟ್ಟೆಯು ಕ್ಷಿಪ್ರಗತಿಯಲ್ಲಿ ಬೆಳವಣಿಗೆ ಕಾಣುತ್ತಿದೆ. ದೇಶೀಯ ಮಾರ್ಗದಲ್ಲಿ ಪ್ರಯಾಣಿಕರ ಸಂಚಾರದಲ್ಲೂ ಏರಿಕೆಯಾಗಿದೆ. ಹಾಗಾಗಿ, ವಿಮಾನಯಾನ ಕಂಪನಿಗಳು ತನ್ನ ವಿಮಾನಗಳ ಸಂಖ್ಯೆ ಮತ್ತು ಕಾರ್ಯಾಚರಣೆಯನ್ನು ವಿಸ್ತರಿಸುತ್ತಿವೆ.

'ದೇಶದಲ್ಲಿ ಕಳೆದ ಹತ್ತು ವರ್ಷದ ಹಿಂದೆ 74 ವಿಮಾನ ನಿಲ್ದಾಣಗಳಿದ್ದವು. ಈಗ ಅವುಗಳ ಸಂಖ್ಯೆ 157 ಕ್ಕೆ ಏರಿದೆ' ಎಂದು ಸಚಿವಾಲಯದ ಕಾರ್ಯದರ್ಶಿ ವುಮ್ಲುನಾಂಗ್ ವುಲ್ನಂ ತಿಳಿಸಿದ್ದಾರೆ.

'ಒಟ್ಟು 453 ವಿಮಾನ ಇಳಿದಾಣಗಳಿದ್ದು, ಈ ಪೈಕಿ 157 ಕಾರ್ಯಾಚರಣೆ ನಡೆಸುತ್ತಿವೆ. ಕೆಲವೆಡೆ ಈ ಹಿಂದೆ ಬಳಕೆ ಯಾಗುತ್ತಿದ್ದ ಹಲವು ಇಳಿದಾಣಗಳು ನಿರುಪಯುಕ್ತವಾಗಿವೆ. ಮತ್ತಷ್ಟು ಇಳಿದಾಣಗಳನ್ನು ಅಭಿವೃದ್ಧಿಪಡಿಸಲು ತೀರ್ಮಾನಿಸಲಾಗಿದೆ' ಎಂದು ಹೇಳಿದ್ದಾರೆ.

ನಾಗರಿಕ ವಿಮಾನಗಳ ಕಾರ್ಯಾಚರಣೆಗಾಗಿ ಸಚಿವಾಲಯ ಮತ್ತು ರಕ್ಷಣೆ ಇಲಾಖೆಯಿಂದ ಜಂಟಿಯಾಗಿ ವಾಯುನೆಲೆಗಳನ್ನು ಅಭಿವೃದ್ಧಿಸಲಾಗುವುದು. ಇಳಿದಾಣಗಳ ಅಭಿವೃದ್ಧಿಯಿಂದಾಗಿ ಟೈರ್ 2 ಮತ್ತು ಟೈರ್ 3 ನಗರಗಳ ನಡುವೆ ವಿಮಾನ ಸಂಪರ್ಕ ಕಲ್ಪಿಸಲು ಸಾಧ್ಯವಾಗಲಿದೆ ಎಂದು ಹೇಳಿದ್ದಾರೆ.

ದೇಶೀಯ ವಿಮಾನ ಪ್ರಯಾಣಿಕರ ಸಂಖ್ಯೆ ಹೆಚ್ಚಳ

ಮುಂಬೈ (ಪಿಟಿಐ): ಮೇ ತಿಂಗಳಿನಲ್ಲಿ ದೇಶೀಯ ವಿಮಾನ ಮಾರ್ಗದಲ್ಲಿ 1.38 ಕೋಟಿ ಪ್ರಯಾಣಿಕರು ಸಂಚರಿಸಿದ್ದು, ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಪ್ರಯಾಣಿಕರ ಸಂಖ್ಯೆಯಲ್ಲಿ ಶೇ 5.1ರಷ್ಟು ಏರಿಕೆಯಾಗಿದೆ.

ಪ್ರಯಾಣಿಕರ ಸಂಖ್ಯೆಯು ಕೊರೊನಾ ಸಾಂಕ್ರಾಮಿಕದ ಅವಧಿಯಲ್ಲಿದ್ದಕ್ಕಿಂತ ಶೇ 14ರಷ್ಟು ಹೆಚ್ಚಳವಾಗಿದೆ ಎಂದು ಕ್ರೆಡಿಟ್ ರೇಟಿಂಗ್ ಏಜೆನ್ಸಿ ಐಸಿಆರ್‌ಎ ಗುರುವಾರ ತಿಳಿಸಿದೆ.

'ಟಿಕೆಟ್ ದರದಲ್ಲಿ ಹೆಚ್ಚಿನ ವ್ಯತ್ಯಾಸವಾಗಿಲ್ಲ. ಹಾಗಾಗಿ, ದೇಶೀಯ ಹಾಗೂ ಅಂತರರಾಷ್ಟ್ರೀಯ ಮಾರ್ಗದಲ್ಲಿನ ಪ್ರಯಾಣಿಕರ ಸಂಖ್ಯೆಯಲ್ಲಿ ಚೇತರಿಕೆ ಕಂಡುಬಂದಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಇದೇ ಪರಿಸ್ಥಿತಿ ಮುಂದುವರಿಯುವ ಸಾಧ್ಯತೆಯಿದೆ' ಎಂದು ಹೇಳಿದೆ.

ವಿಮಾನಯಾನ ಕಂಪನಿಗಳ ಕಾರ್ಯಾಚರಣೆಯಲ್ಲೂ ಶೇ 6ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.

ಬಿಎಚ್‌ಇಎಲ್ ಷೇರಿನ ಮೌಲ್ಯ ಶೇ 9ರಷ್ಟು ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬಿಎಚ್‌ಇಎಲ್ ಷೇರಿನ ಮೌಲ್ಯದಲ್ಲಿ ಶೇ 9ರಷ್ಟು ಏರಿಕೆಯಾಗಿದ್ದು, ಒಂದೇ ದಿನ ಮಾರುಕಟ್ಟೆ ಮೌಲ್ಯಕ್ಕೆ ₹7,973 ಕೋಟಿ ಸೇರ್ಪಡೆಯಾಗಿದೆ. ಒಟ್ಟು ಎಂ–ಕ್ಯಾಪ್ ₹98,853 ಕೋಟಿಗೆ ತಲುಪಿದೆ.

ಅದಾನಿ ಪವರ್ ಲಿಮಿಟೆಡ್ ಛತ್ತೀಸಗಢದಲ್ಲಿ ಉಷ್ಣ ವಿದ್ಯುತ್ ಯೋಜನೆಯನ್ನು ಕೈಗೆತ್ತಿಕೊಂಡಿದ್ದು, ಬಿಎಚ್‌ಇಎಲ್‌ಗೆ ₹3,500 ಕೋಟಿ ಮೌಲ್ಯದ ಆರ್ಡರ್ ನೀಡಿದೆ. ಹಾಗಾಗಿ, ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಬಿಎಸ್‌ಇಯಲ್ಲಿ ಷೇರಿನ ಮೌಲ್ಯದಲ್ಲಿ ಶೇ 8.97ರಷ್ಟು ಏರಿಕೆಯಾಗಿದ್ದು, ಪ್ರತಿ ಷೇರಿನ ಬೆಲೆ ₹278.15ಕ್ಕೆ ತಲುಪಿದೆ. ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯದಲ್ಲಿ ಶೇ 9ರಷ್ಟು ಹೆಚ್ಚಳವಾಗಿದ್ದು, ಪ್ರತಿ ಷೇರಿನ ಬೆಲೆ ₹278.50 ಆಗಿದೆ.

ಬೆಳ್ಳಿ ದರ ₹1,400 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆ ಆಗಿದೆ.

ಪ್ರತಿ 10 ಗ್ರಾಂ ಚಿನ್ನದ ದರ ₹680 ಹೆಚ್ಚಳವಾಗಿದ್ದು, ₹73,500ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹1,400 ಏರಿಕೆಯಾಗಿ ₹93,300ಕ್ಕೆ ಮುಟ್ಟಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,360 ಡಾಲರ್ (ಅಂದಾಜು ₹1.97 ಲಕ್ಷ) ಮತ್ತು 30.30 ಡಾಲರ್‌ನಂತೆ (ಅಂದಾಜು ₹2,530) ಮಾರಾಟ ಆಗಿದೆ.

'ಅಮೆರಿಕದ ಬಾಂಡ್ ಗಳಿಕೆಯಲ್ಲಿ ಇಳಿಕೆಯಾಗಿದೆ. ಯುರೋಪ್‌ನ ಕೇಂದ್ರೀಯ ಬ್ಯಾಂಕ್ ಬಡ್ಡಿದರ ಕಡಿತ ಮಾಡಿದೆ. ಹಾಗಾಗಿ, ಚಿನ್ನದ ಬೆಲೆಯಲ್ಲಿ ಹೆಚ್ಚಳವಾಗಿದೆ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಸೌಮಿಲ್ ಗಾಂಧಿ ಹೇಳಿದ್ದಾರೆ.

ಮುಂಬೈ ಧಾರಣೆ (ಶೇಂಗಾ)
06-6-2024

ಜಾವಾ 70/80(ಹೊಸ)	11100-11200
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1490 (1490)
ಒಂದು ವಾರದ ಡೆಲಿವರಿ	1485 (1485)
ಸೋಯಾ ಕಚ್ಚಾ	915 (912)
ಪಾಮ್ ವಾರದ ಡೆಲಿವರಿ	910(900)
ಸೂರ್ಯಕಾಂತಿ ಎಣ್ಣೆ ಕಚ್ಚಾ	925 (920)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ ₹72,550 (71,700)
ಬೆಳ್ಳಿ ಕೆ.ಜಿ ₹90,500 (88,550)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ಲಾಂಟರ್ ಕಾಫಿ (50 ಕೆಜಿಗೆ)

ಎಪಿ	₹15800
ಎಸಿ	340 on OT
ಆರ್‌ಪಿ	₹14000
ಆರ್‌ಸಿ	395 on OT

ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಯಾನ

'ಸ್ಟಾರ್‌ಲೈನರ್' ಮುನ್ನಡೆಸಿದ ಸುನಿತಾ

ಸುನಿತಾ ವಿಲಿಯಮ್ಸ್

ಹ್ಯೂಸ್ಟನ್ (ಪಿಟಿಐ): ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಯಾನ ಕೈಗೊಂಡಿರುವ ಭಾರತ ಮೂಲದ ಗಗನಯಾತ್ರಿ ಸುನಿತಾ ವಿಲಿಯಮ್ಸ್ ಹಾಗೂ ಅವರ ಸಹಯಾತ್ರಿ ಬಚ್ ವಿಲ್ಮೋರ್ ಅವರು ಗಗನನೌಕೆ 'ಸ್ಟಾರ್‌ಲೈನರ್' ಅನ್ನು ಮುನ್ನಡೆಸುವ ಮೂಲಕ ಗಮನ ಸೆಳೆದಿದ್ದಾರೆ.

ಈ ಮೂಲಕ, ಅವರು ಭೂಕಕ್ಷೆಯಲ್ಲಿಯೂ ಗಗನನೌಕೆಯನ್ನು ಮುನ್ನಡೆಸುವ ಸಾಮರ್ಥ್ಯವನ್ನು ಸಾಬೀತುಪಡಿಸಿದಂತಾಗಿದೆ.

ಬೋಯಿಂಗ್ ಸಂಸ್ಥೆ ನಿರ್ಮಿತ 'ಸ್ಟಾರ್‌ಲೈನರ್', ಸ್ವಯಂಚಾಲಿತ ಗಗನನೌಕೆಯಾಗಿದೆ. ಆದರೆ, ಗಗನಯಾನ ಸಂದರ್ಭದಲ್ಲಿ, ಸುನಿತಾ ಮತ್ತು ವಿಲ್ಮೋರ್ ಅವರು, 'ಹ್ಯಾಂಡ್ ಕಂಟ್ರೋಲರ್' ಬಳಸಿ, ಎರಡು ಗಂಟೆಗಳ ಕಾಲ ಗಗನನೌಕೆ ನಿಯಂತ್ರಿಸುವ ಪ್ರಾತ್ಯಕ್ಷಿಕೆಯನ್ನು ಪೂರೈಸಿದ್ದಾರೆ.

55 ವರ್ಷದ ಸುನಿತಾ ವಿಲಿಯಮ್ಸ್ ಅವರಿಗೆ ಇದು ಮೂರನೇ ಬಾಹ್ಯಾಕಾಶ ಯಾನ. ಇವರು ಈ ಪರೀಕ್ಷಾರ್ಥ ಪ್ರಯೋಗದಲ್ಲಿ ಪೈಲಟ್ ಆಗಿ ಕಾರ್ಯ ನಿರ್ವಹಿಸಿದರೆ, 61 ವರ್ಷದ ವಿಲ್ಮೋರ್ ಅವರು ಈ ಬಾಹ್ಯಾಕಾಶ ಕಾರ್ಯಕ್ರಮದ ಕಮಾಂಡರ್ ಆಗಿದ್ದಾರೆ.

ಈ ಪ್ರಾತ್ಯಕ್ಷಿಕೆಯಲ್ಲಿ, ಗಗನನೌಕೆಯ ಮುಂಭಾಗ ಭೂಮಿಯತ್ತ ಇರುವಂತೆ ಮಾಡಿದ್ದರು. ಸಂವಹನಕ್ಕಾಗಿ ಗಗನನೌಕೆಗೆ ಅಳವಡಿಸಿದ್ದ ಆ್ಯಂಟೆನಾ, ಸಂಬಂಧಪಟ್ಟ ಉಪಗ್ರಹಗಳತ್ತ ಮುಖ ಮಾಡುವಂತೆ ಮಾಡಲು ಇದು ನೆರವಾಗಿತ್ತು. ನಂತರ, ಸೌರಫಲಕಗಳು ಸೂರ್ಯನಿಗೆ ಮುಖ ಮಾಡುವಂತೆ 'ಸ್ಟಾರ್‌ಲೈನರ್' ಮುನ್ನಡೆಸಿದರು. ನೌಕೆಯಲ್ಲಿದ್ದ ಬ್ಯಾಟರಿಗಳಲ್ಲಿ ವಿದ್ಯುತ್ ಸಂಗ್ರಹಕ್ಕೆ ಇದರಿಂದ ಅನುಕೂಲವಾಗಿತ್ತು ಎಂದು ಬೋಯಿಂಗ್ ತಿಳಿಸಿದೆ.

'ಗಗನನೌಕೆಯೊಂದಿಗೆ ನಿರಂತರ ಸಂಪರ್ಕದಲ್ಲಿರುವ ಎಲ್ಲ ಮೂರು ಕಂಪ್ಯೂಟರ್‌ಗಳು ಒಂದು ವೇಳೆ ಏಕಕಾಲದಲ್ಲಿ ಕಾರ್ಯನಿರ್ವಹಣೆ ನಿಲ್ಲಿಸಿದಲ್ಲಿ, ಬಾಹ್ಯಾಕಾಶದಲ್ಲಿ ಗಗನಯಾನಿಗಳ ವರ್ತನೆ ಹೇಗಿರಲಿದೆ? ಗಗನನೌಕೆಯನ್ನು ಹೇಗೆ ನಿಯಂತ್ರಿಸಬಲ್ಲರು ಎಂಬುದನ್ನು ಒರೆಗೆ ಹಚ್ಚುವುದು ಈ ಪರೀಕ್ಷೆಯ ಉದ್ದೇಶವಾಗಿತ್ತು' ಎಂದು ಸಂಸ್ಥೆ ತಿಳಿಸಿದೆ.

ಮಾರುಕಟ್ಟೆ ಧಾರಣೆ (₹ಗಳಲ್ಲಿ)

ಏಲಕ್ಕಿ ಧಾರಣೆ ಸಕಲೇಶಪುರ	
ಕೂಳೆ	1300-1400
ನಡುಗೋಲು	1550-1600
ರಾಶಿ	1700-1800
ರಾಶಿ ಉತ್ತಮ	1800-1900
ಹೆರಕಿದ್ದು	2100-2300
ಹಸಿರು ಸಾಧಾರಣ	2000-2050
ಹಸಿರು ಉತ್ತಮ	2300-2400
ಹಸಿರು ಅತಿ ಉತ್ತಮ	2600-2700
ಕಾಳು ಮೆಣಸು	610
ಅಡಿಕೆ ಬಂಟ್ವಾಳ	
ಕೋಕ	18000-28500
ಹೊಸತು	28500-38000
ಹಳತು	38000-46500
ಕಾರ್ಕಳ	
ಹೊಸತು	25000-38000
ಹಳತು	30000-46500
ಕುಮಟ	
ಹಳೆಚಾಲಿ	34699-38499
ಹೊಸಚಾಲಿ	31889-35639
ಚಿಪ್ಪು	24611-31719
ಕೋಕ	11500-28269
ಸಾಗರ	
ಬಿಳಿಗೋಟು	20501-23001
ಚಾಲಿ	32501-35509
ಕೆಂಪುಗೋಟು	24009-33009
ರಾಶಿ	37001-53518
ಶಿವಮೊಗ್ಗ	
ಬೆಟ್ಟೆ	38009-55399
ಗೊರಬಲು	18169-37969
ರಾಶಿ	26000-53699
ಸರಕು	44009-83986
ಸಿದ್ದಾಪುರ	
ಬಿಳಿಗೋಟು	26899-30299
ಚಾಲಿ	33899-36239
ಕೋಕ	25900-29112
ಕೆಂಪುಗೋಟು	26319-29289
ರಾಶಿ	42399-49899
ತಟ್ಟಿಬೆಟ್ಟೆ	33300-49509
ಶಿರಸಿ	
ಬೆಟ್ಟೆ	35009-44518
ಬಿಳಿಗೋಟು	23811-30899
ಚಾಲಿ	33099-37701
ಕೆಂಪುಗೋಟು	29399-31069
ರಾಶಿ	46859-50199
ಯಲ್ಲಾಪುರ	
ಅಪಿ	62099-62099
ಬಿಳಿಗೋಟು	24699-30499
ಚಾಲಿ	30809-36689
ಕೋಕ	11069-29299
ಕೆಂಪುಗೋಟು	24666-34119
ರಾಶಿ	44189-54509
ತಟ್ಟಿಬೆಟ್ಟೆ	34899-43899

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಶ್ರೀಮತಿ ಟಿ.ಆರ್. ಚಂದ್ರಕಾಂತ
BEL Retired Employee
ಇವರು ದಿ: 28.05.2024ರ ಮಂಗಳವಾರ ದೈವಾಧೀನರಾದರು. ತತ್ಸಂಬಂಧ ಪುಣ್ಯಾಹ ದಿನಾಂಕ:07.06.2024 ಶುಕ್ರವಾರ, ಬೆಳಗ್ಗೆ 9.00 ಗಂಟೆಗೆ ಹಾಗೂ ಸಂಜೆ 6.30 ಕ್ಕೆ ವೈಕುಂಠ ಸಮಾರಾಧನೆಯನ್ನು ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು: ಎಂ.ವಿ. ಗೋವಿಂದರಾಜು ಮತ್ತು ಕುಟುಂಬದವರು

ಸವಿ ನೆನಪು

ಶ್ರೀಮಾನ್ ಕೆ. ಕರಿಯಪ್ಪನವರು
ಮಾಜಿ ಚೇರ್ಮನ್,
ಜಕ್ಕಸಂದ್ರ, ಬೇಗೂರು ಹೋಬಳಿ
ಜನನ : 8-04-1941 ಮರಣ : 7-06-1993
ಸದಾ ಸ್ಮರಿಸುವ
ಪತ್ನಿ, ಮಕ್ಕಳು, ಅಳಿಯಂದಿರು ಮತ್ತು ಕುಟುಂಬ ವರ್ಗದವರು

ಶ್ರದ್ಧಾಂಜಲಿ

ಶ್ರೀಮತಿ ವೆಂಕಟೇಶ್ವರಿ
(ವಿ. ನಾಗೇಂದರ್‌ರವರ ಧರ್ಮಪತ್ನಿ)
(ವಿ. ನಾಗೇಂದರ್ ಜರೀವಾಲ)
ತಾ: 06–06–2024ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ದುಃಖತಪ್ತ ಕುಟುಂಬ ವರ್ಗದವರಿಗೆ ಈ ದೊಡ್ಡನಷ್ಟವನ್ನು ನಿಭಾಯಿಸಲು ಸಾಕಷ್ಟು ಶಕ್ತಿಯನ್ನು ನೀಡಲೆಂದು ದೇವರಲ್ಲಿ ಪ್ರಾರ್ಥಿಸೋಣ.
ಓಂ ಶಾಂತಿ ಸದ್ಗತಿ!
ಇವರ ಅಂತ್ಯಕ್ರಿಯೆಯನ್ನು ತಾ:07-06-2024 ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ಚಾಮರಾಜಪೇಟೆಯ ಟಿ.ಆರ್. ಮಿಲ್‌ನ ರುದ್ರಭೂಮಿಯಲ್ಲಿ ನೆರವೇರಲಿದೆ.
Ph: 7816855777

ಪುಣ್ಯ ಸ್ಮರಣೆ

ಶ್ರೀಯುತ ಹೆಚ್. ತಿಮ್ಮೇಗೌಡ
ಸಂಸ್ಥಾಪಕರು
ರಶ್ಮಿ ಎಜುಕೇಷನಲ್ ಟ್ರಸ್ಟ್ (ರಿ)
ನೀವು ನಮ್ಮನ್ನಗಲಿ ಇಂದಿಗೆ 25 ವರ್ಷಗಳಾಯ್ತು ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲೆಂದು ಸ್ಮರಿಸುತ್ತೇವೆ.
ಶ್ರೀಮತಿ ಗಂಗಮ್ಮ ಡಿ. ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು
ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗ
ವಿದ್ಯಾನಿಕೇತನ ಪಬ್ಲಿಕ್ ಸ್ಕೂಲ್
ಸುಂಕದಕಟ್ಟೆ ಮತ್ತು ಲಕ್ಷ್ಮಣನಗರ ಬೆಂಗಳೂರು – 91

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಚಾಲಕ ಅಗತ್ಯವಿದೆ! ಬೆಂಗಳೂರಿನಲ್ಲಿ ಎವರೆಸ್ಟ್ ಫ್ಲೀಟ್ CNG ಕಾರ್ ಅನ್ನು ಓಡಿಸಿ ಮತ್ತು ತಿಂಗಳಿಗೆ ₹35,000* ಸಂಪಾದಿಸಿ!! +91 9493275000ಗೆ ಕರೆ ಮಾಡಿ

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663542555, 9663563555

WORK FROM Home: ಮನೆಯಲ್ಲಿ ಕುಳಿತು 10,000–20,000 ದುಡಿಯಬಹುದು. ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9845114560
9901641752
*Conditions apply

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟವಸತಿಯಿದೆ. 13,000/- - 17,000/-, 8951315839, 9141634619

ಭವಿಷ್ಯ

Astrology

★ಗುರು.ಶ್ರೀದೇವಾನಂದ★ ರವರಿಂದ ಕುಟುಂಬ ಮತ್ತು ದಾಂಪತ್ಯ ಕಲಹ ದುರ್ನಡತೆ,ದುಷ್ಟಟ ರೋಗ,ಸಾಲ, ಶತ್ರು,ಬಂಜೆತನ.ಲೈಂಗಿಕತೆ ಇನ್ನಿತರ ನಿಮ್ಮ ಯಾವುದೇ ಸ್ತ್ರೀಪುರುಷ ಸರ್ವಮನಇಚ್ಛಾ ವಶೀಕರಣ ಮಾಡಿಕೊಳ್ಳಿ.ಕೇಶರಾಶಿಗೆ ಕೇರಳ ತೈಲ ಲಭ್ಯ:9845005009

★॥ಸ್ತ್ರೀಪುರುಷ ವಶೀಕರಣ॥★ ನಿಮ್ಮ ಯಾವುದೇ ಕಠಿಣ ಗುಪ್ತ ಸಮಸ್ಯೆಗಳಿಗೆ, ಇಷ್ಟಪಟ್ಟವರು ನಿಮ್ಮಂತೆ ಆಗಲು, 1ದಿನದಲ್ಲಿ ಪರಿಹಾರ ಶತಸಿದ್ಧ. 9611968471

ಪ್ರವಾಸ

Travel

7/11 ದಿನಗಳ ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್. 10 ದಿನಗಳ ವಿಯೆಟ್ನಾಂ ಕಾಂಬೋಡಿಯಾ. 9 ದಿನಗಳ ಕಾಶಿ, ಅಯೋಧ್ಯಾ. ಭಟ್ ಟ್ರಾವೆಲ್ಸ್ 9844037295 9844166555

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಇಸ್ರೇಲ್ ದಾಳಿ: 33 ಮಂದಿ ಸಾವು

ಪ್ಯಾಲೆಸ್ಟೀನ್ ನಿರಾಶ್ರಿತರ ಕೇಂದ್ರದ ಮೇಲೆ ಇಸ್ರೇಲ್ ನಡೆಸಿದ ದಾಳಿಯಿಂದಾಗಿ ಮೃತಪಟ್ಟವರನ್ನು ಗುರುತಿಸಲು ಅವರ ಕುಟುಂಬದ ಸದಸ್ಯರು ಆಸ್ಪತ್ರೆಯಲ್ಲಿ ಸೇರಿದ್ದರು — ಎಎಫ್‌ಪಿ ಚಿತ್ರ

ದಿರ್ ಅಲ್-ಬಲಾಹ (ಎಪಿ): ಪ್ಯಾಲೆಸ್ಟೀನ್ ನಿರಾಶ್ರಿತರು ಆಶ್ರಯ ಪಡೆದಿದ್ದ ಕೇಂದ್ರ ಗಾಜಾದಲ್ಲಿನ ಶಾಲೆಯೊಂದರ ಮೇಲೆ ಇಸ್ರೇಲ್ ಗುರುವಾರ ದಾಳಿ ನಡೆಸಿದ್ದು, 23 ಮಹಿಳೆಯರು ಸೇರಿ 33 ಜನ ಮೃತಪಟ್ಟಿದ್ದಾರೆ.

'ವಿಶ್ವಸಂಸ್ಥೆಯ ಗಾಜಾದ ಶಾಲೆಯೊಂದರಲ್ಲಿ ಪ್ಯಾಲೆಸ್ಟೀನ್ ನಿರಾಶ್ರಿತರಿಗಾಗಿ ನಿರಾಶ್ರಿತರ ಕೇಂದ್ರವನ್ನು ನಿರ್ಮಿಸಿತ್ತು. ಇದರ ಮೇಲೆ ಇಸ್ರೇಲ್ ದಾಳಿ ನಡೆಸಿದೆ' ಎಂದು ಗಾಜಾದ ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ.

'ನಾವು ದಾಳಿ ನಡೆಸಿರುವ ಶಾಲೆಯಲ್ಲಿ ಆಶ್ರಯ ಪಡೆದಿದ್ದ ಹಮಾಸ್ ಮತ್ತು ಇಸ್ಲಾಂ ಜಿಹಾದಿ ಬಂಡುಕೋರರು ಇಸ್ರೇಲ್ ಸೇನೆಯ ಮೇಲೆ ದಾಳಿ ನಡೆಸಲು ಸಂಚು ರೂಪಿಸಿದ್ದರು' ಎಂದು ಇಸ್ರೇಲ್ ಸೇನೆ ಆರೋಪಿಸಿದೆ. ಶಾಲೆಯ ಎರಡು ಮತ್ತು ಮೂರನೇ ಅಂತಸ್ತಿನಲ್ಲಿರುವ ತರಗತಿಗಳಲ್ಲಿ ಬಂಡುಕೋರರು ಇದ್ದರು ಎನ್ನುವ ಚಿತ್ರವನ್ನು ಇಸ್ರೇಲ್ ಬಿಡುಗಡೆಗೊಳಿಸಿದೆ.

'ಗುಪ್ತಚರ ಮಾಹಿತಿಯ ಆಧಾರದಲ್ಲಿ ನಾಗರಿಕರಿಗೆ ಹೆಚ್ಚು ಹಾನಿಯಾಗದಂತೆ ದಾಳಿ ನಡೆಸಲಾಗಿದೆ' ಎಂದು ಇಸ್ರೇಲ್ ತಿಳಿಸಿದೆ.

ಮುಗಿದ ನೀತಿ ಸಂಹಿತೆ : ಅಭಿವೃದ್ಧಿಗೆ ದಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆ ಮತ್ತು ವಿಧಾನಪರಿಷತ್ ಚುನಾವಣೆಗಳು ಮುಗಿದು ಫಲಿತಾಂಶ ಪ್ರಕಟವಾಗಿರುವ ಬೆನ್ನಲ್ಲೇ ಚುನಾವಣಾ ನೀತಿ ಸಂಹಿತೆಯೂ ಮುಕ್ತಾಯಗೊಂಡಿದೆ. ಮೂರು ತಿಂಗಳು ನೀತಿ ಸಂಹಿತೆಯ ಅಡ್ಡಿ ಇದ್ದುದರಿಂದ ಅಭಿವೃದ್ಧಿ ಚಟುವಟಿಕೆಗೆ ಗರ ಬಡಿದಿತ್ತು. ಆ ತೆರೆ ಸರಿದು, ಆಡಳಿತ ಚುರುಕಿಗೆ ದಾರಿಯಾಗಲಿದೆ.

ಲೋಕಸಭಾ ಚುನಾವಣೆ ಫಲಿತಾಂಶದ ಬಳಿಕ ವಿಧಾನಪರಿಷತ್ ಚುನಾವಣೆ ಇದ್ದ ಕಾರಣ ಚುನಾವಣಾ ಆಯೋಗವು ನೀತಿ- ಸಂಹಿತೆಯನ್ನು ಜೂ.6 ರವರೆಗೆ ವಿಸ್ತರಿಸಿತ್ತು. ಅದು ಗುರುವಾರ ಸಂಜೆಗೆ ಮುಕ್ತಾಯಗೊಂಡಿದೆ. ಶುಕ್ರವಾರದಿಂದ ಸರ್ಕಾರಿ ಕಾರ್ಯಕ್ರಮಗಳು ಹಾಗೂ ಸಭೆಗಳನ್ನು ನಡೆಸಬಹುದಾಗಿದೆ.

ಲೋಕಸಭಾ ಚುನಾವಣೆಗೆ ಮಾರ್ಚ್ ತಿಂಗಳಲ್ಲೇ ವೇಳಾಪಟ್ಟಿಯನ್ನು ಪ್ರಕಟಿಸಲಾಗಿತ್ತು. ಮಾರ್ಚ್ 20ರಂದು ಅಧಿಸೂಚನೆ ಹೊರಡಿಸಲಾಗಿತ್ತು. ಸುಮಾರು ಮೂರು ತಿಂಗಳ ಕಾಲ ಚುನಾವಣಾ ಪ್ರಕ್ರಿಯೆ ನಡೆಯಿತು. ಇದರಿಂದಾಗಿ ಸರ್ಕಾರಿ ಯಂತ್ರ ಬಹುತೇಕ ಸ್ಥಗಿತಗೊಂಡಂತಾಗಿತ್ತು. ರಾಜ್ಯದಲ್ಲಿ ಬರಗಾಲ ಇದ್ದರೂ ಪರಿಹಾರ ಕಾರ್ಯ ಕೈಗೊಳ್ಳುವುದರ ಸಂಬಂಧ ಸಭೆಯನ್ನೂ ಕೈಗೊಳ್ಳಲು ಸಾಧ್ಯವಾಗಿರಲಿಲ್ಲ.

ಸಚಿವ ಸಂಪುಟ ಸಭೆ, ವಿವಿಧ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯೂ ನಿಂತು ಹೋಗಿತ್ತು. ಫೆಬ್ರುವರಿಯಲ್ಲಿ ಬಜೆಟ್ ಮಂಡಿಸಲಾಗಿದ್ದರೂ ಅದರ ಅನುಷ್ಠಾನಕ್ಕೆ ಆದೇಶವನ್ನು ಹೊರಡಿಸಲು ಸರ್ಕಾರಕ್ಕೆ ಸಾಧ್ಯವಾಗಿರಲಿಲ್ಲ. ವಿವಿಧ ಇಲಾಖೆಗಳ ಅಧಿಕಾರಿಗಳು ರಾಜ್ಯ ಮತ್ತು ಹೊರ ರಾಜ್ಯಗಳಿಗೂ ಚುನಾವಣೆ ಕಾರ್ಯದ ನಿಮಿತ್ತ ಹೋಗಿದ್ದರು. ಈಗ ಎಲ್ಲ ಅಧಿಕಾರಿಗಳು ವಾಪಸ್ ಬಂದಿದ್ದು, ಶುಕ್ರವಾರದಿಂದ ಸರ್ಕಾರ ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ ಮಾಡಲಿದೆ.

ರಾಜ್ಯದಲ್ಲಿ ಚುನಾವಣೆ ಮುಗಿಯುತ್ತಿದ್ದಂತೆಯೇ ಎಲ್ಲ ಇಲಾಖೆಗಳ ಮುಖ್ಯಸ್ಥರ ಸಭೆ ನಡೆಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಬಜೆಟ್‌ನ ಘೋಷಣೆಗಳ ಕುರಿತು ಜೂನ್ 7ರಿಂದಲೇ ಆದೇಶ ಹೊರಡಿಸಲು ಅಗತ್ಯ ತಯಾರಿ ಮಾಡಿಕೊಳ್ಳಿ ಎಂದು ಸೂಚಿಸಿದ್ದರು. ಇನ್ನು ಮುಂದೆ ಆದೇಶಗಳು ಹೊರಬೀಳಲಿವೆ ಎಂದು ಮೂಲಗಳು ಹೇಳಿವೆ.

ಮುಂಗಾರು ಕಾಲಿಡುತ್ತಿರುವುದರಿಂದ ಬೆಂಗಳೂರು ಸೇರಿ ರಾಜ್ಯದ ವಿವಿಧೆಡೆ ಅಗತ್ಯ ಕಾಮಗಾರಿ ಕೈಗೊಳ್ಳಲು ಸಾಧ್ಯವಾಗಿರಲಿಲ್ಲ. ಅವೆಲ್ಲವೂ ಈಗ ಶುರುವಾಗಲಿವೆ.

ಸಚಿವ ನಾಗೇಂದ್ರ ರಾಜೀನಾಮೆ

ಒಂದನೇ ಪುಟದಿಂದ...

ಗುರುವಾರ ಬೆಳಗ್ಗಿನಿಂದ ಯಾರ ಕಣ್ಣಿಗೂ ಬೀಳದ ನಾಗೇಂದ್ರ, ಮಧ್ಯಾಹ್ನ 3 ಗಂಟೆ ಸುಮಾರಿಗೆ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದರು. ಆಗ ಸಂಜೆ ಬಂದು ಭೇಟಿ ಮಾಡುವಂತೆ ನಾಗೇಂದ್ರ ಅವರಿಗೆ ಸಿದ್ದರಾಮಯ್ಯ ಸೂಚಿಸಿದ್ದರು. ಮುಖ್ಯಮಂತ್ರಿ ಅವರನ್ನು ಗುರುವಾರ ರಾತ್ರಿ ಭೇಟಿ ಮಾಡಿದ ನಾಗೇಂದ್ರ, ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದರು.

ರಾಜೀನಾಮೆ ನೀಡುವುದಕ್ಕೂ ಮೊದಲು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಾಗೇಂದ್ರ, 'ಇಡೀ ಪ್ರಕರಣದಲ್ಲಿ ನನ್ನ ಪಾತ್ರ ಇಲ್ಲ. ಯಾರ ಒತ್ತಡವೂ ಇಲ್ಲದೆ, ಸ್ವ ಇಚ್ಛೆಯಿಂದ ರಾಜೀನಾಮೆ ನೀಡಲು ನಿರ್ಧರಿಸಿ, ಮುಖ್ಯಮಂತ್ರಿ ಬಳಿ ಸಮಯ ಕೇಳಿದಾಗ ಸಂಜೆ 7.30ಕ್ಕೆ ಬರಲು ಹೇಳಿದರು. ಯಾರಿಗೂ ಮುಜುಗರ ಆಗಬಾರದೆಂದು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವ ತೀರ್ಮಾನ ತೆಗೆದುಕೊಂಡೆ' ಎಂದರು.

'ಕಳೆದ ಹತ್ತು ದಿನಗಳಿಂದ ಈ ಪ್ರಕರಣವನ್ನು ಮಾಧ್ಯಮಗಳು ಅನೇಕ ರೀತಿಯಲ್ಲಿ ಚಿತ್ರಿಸಿವೆ. ವಿರೋಧ ಪಕ್ಷದವರು ಕಾಂಗ್ರೆಸ್ ಪಕ್ಷದ ಮೇಲೆ ಕೆಸರೆರಚುವ ಕೆಲಸ ಮಾಡಿದ್ದಾರೆ. ಆ ಕಾರಣಕ್ಕೆ ನಾನು ಕೂಡ ಈ ನಿರ್ಧಾರವನ್ನು ಕೈಗೊಳ್ಳಬೇಕಾಯಿತು' ಎಂದು ಹೇಳಿದರು.

'ಈ ಪ್ರಕರಣದಲ್ಲಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಸೇರಿದಂತೆ ಕೆಲವರನ್ನು ವಿಶೇಷ ತನಿಖಾ ತಂಡದವರು ವಶಕ್ಕೆ ತೆಗೆದುಕೊಂಡು ತನಿಖೆ ಮಾಡುತ್ತಿದ್ದಾರೆ. ಪಕ್ಷದ ನಾಯಕರು, ಮುಖ್ಯಮಂತ್ರಿ ಜೊತೆ ಮಾತನಾಡಿದಾಗ, ರಾಜೀನಾಮೆ ನೀಡುವಂತೆ ಯಾರೂ ನನ್ನ ಮೇಲೆ ಒತ್ತಡ ಹಾಕಿಲ್ಲ. ನನ್ನ ಆತ್ಮಸಾಕ್ಷಿಯಾಗಿ, ರಾಜ್ಯದ ಜನತೆಯ ಕೂಡ ದಿಕ್ಕು ತಪ್ಪಬಾರದು, ಮುಖ್ಯಮಂತ್ರಿ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೂ ಮುಜುಗರ ಆಗಬಾರದೆಂದು ರಾಜೀನಾಮೆ ನಿರ್ಧಾರಕ್ಕೆ ಬಂದೆ' ಎಂದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು 'ಈ ಪ್ರಕರಣದ ತನಿಖೆ ನಿಷ್ಪಕ್ಷಪಾತವಾಗಿ ಆಗಬೇಕು. ತನಿಖೆ ನಡೆಯುತ್ತಿದ್ದಾಗ ನಾನು ಸಚಿವ ಸ್ಥಾನದಲ್ಲಿದ್ದರೆ ತೊಂದರೆ ಆಗಬಹುದೆಂದು ಈ ನಿರ್ಧಾರ ತೆಗೆದುಕೊಂಡಿದ್ದೇನೆ' ಎಂದು ಹೇಳಿದರು.

'ಈ ಇಡೀ ಪ್ರಕರಣದಲ್ಲಿ ನಿಮ್ಮ ಅಳಿಯನ ಪಾತ್ರ ಇದೆ' ಎಂಬ ಆರೋಪ ಇದೆಯಲ್ಲ ಎಂಬ ಪ್ರಶ್ನೆಗೆ, 'ಈ ರೀತಿ ಊಹಾಪೋಹ ಹಬ್ಬಿಸುತ್ತಿದ್ದಾರೆ. ರಾಜಕೀಯ ಎಂದ ಮೇಲೆ ಅನೇಕ ಆರೋಪಗಳನ್ನು ಮಾಡುತ್ತಾರೆ' ಎಂದರು.

'ತನಿಖೆಯಲ್ಲಿ ನಿರ್ದೋಷಿ ಎಂದು ಸಾಬೀತಾದರೆ ಸಂಪುಟಕ್ಕೆ ಮತ್ತೆ ಸೇರಿಸಿಕೊಳ್ಳುತ್ತಾರಾ' ಎಂಬ ಪ್ರಶ್ನೆಗೆ, 'ಅದು ಮುಖ್ಯಮಂತ್ರಿ ಮತ್ತು ವರಿಷ್ಠರಿಗೆ ಬಿಟ್ಟಿದ್ದು. ಅವರು ತೀರ್ಮಾನ ಮಾಡಲಿ. ಆ ರೀತಿ ಭರವಸೆಯನ್ನು ಯಾರೂ ನೀಡಿಲ್ಲ' ಎಂದೂ ಹೇಳಿದರು.

ತೈವಾನ್ ಅಧ್ಯಕ್ಷರಿಗೆ ಮೋದಿ ಪ್ರತಿಕ್ರಿಯೆ: ಚೀನಾ ಪ್ರತಿಭಟನೆ

ಬೀಜಿಂಗ್ (ಪಿಟಿಐ): 'ತೈವಾನ್ ಜತೆ ನಿಕಟ ಸಂಬಂಧ ಹೊಂದಲು ಭಾರತ ಎದುರು ನೋಡುತ್ತಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವುದಕ್ಕೆ ಚೀನಾ ಗುರುವಾರ ಪ್ರತಿಭಟನೆ ದಾಖಲಿಸಿದೆ. ಅಲ್ಲದೆ ತೈವಾನ್‌ನ ರಾಜಕೀಯ ಲೆಕ್ಕಾಚಾರಗಳನ್ನು ನವದೆಹಲಿ ವಿರೋಧಿಸಬೇಕು ಎಂದೂ ಅದು ಆಗ್ರಹಿಸಿದೆ.

ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದಕ್ಕಾಗಿ ಮೋದಿ ಅವರಿಗೆ ತೈವಾನ್ ಅಧ್ಯಕ್ಷ ಲಾಯ್ ಚಿಂಗ್-ಟೆ ಅವರು 'ಎಕ್ಸ್'ನಲ್ಲಿ ಅಭಿನಂದನಾ ಸಂದೇಶ ಕಳುಹಿಸಿದ್ದರು. ಅದಕ್ಕೆ ಮೋದಿ ಅವರು ಪ್ರತಿಕ್ರಿಯಿಸಿದ್ದರು.

'ಪ್ರಧಾನಿ ನರೇಂದ್ರ ಮೋದಿ ಅವರು ಚುನಾವಣೆಯಲ್ಲಿ ವಿಜಯ ಸಾಧಿಸಿದ್ದಕ್ಕಾಗಿ ಅಭಿನಂದನೆಗಳು. ತೈವಾನ್ ಮತ್ತು ಭಾರತದ ಪಾಲುದಾರಿಕೆಯನ್ನು ಹೆಚ್ಚಿಸಲು ನಾವು ಎದುರು ನೋಡುತ್ತಿದ್ದೇವೆ. ಇಂಡೋಪೆಸಿಫಿಕ್‌ನಲ್ಲಿ ಶಾಂತಿ, ಸಮೃದ್ಧಿ ನೆಲೆಸಲು, ವ್ಯಾಪಾರ, ತಂತ್ರಜ್ಞಾನ ಮತ್ತು ಇತರ ವಲಯಗಳಲ್ಲಿ ಸಹಯೋಗವನ್ನು ವಿಸ್ತರಿಸಲು ಬಯಸುತ್ತಿರುವುದಾಗಿ' ತೈವಾನ್ ಅಧ್ಯಕ್ಷ ಲಾಯ್ ಚಿಂಗ್-ಟೆ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ್ದ ಮೋದಿ ಅವರು, 'ಅಭಿನಂದಿಸಿದ್ದಕ್ಕೆ ಧನ್ಯವಾದಗಳು. ನಿಕಟ ಸಂಬಂಧದ ಜತೆಗೆ ಪರಸ್ಪರ ಆರ್ಥಿಕ, ತಾಂತ್ರಿಕ ಪಾಲುದಾರಿಕೆಯಲ್ಲಿ ಕೆಲಸ ಮಾಡುವುದನ್ನು ಎದುರು ನೋಡುತ್ತಿದ್ದೇವೆ' ಎಂದು ಹೇಳಿದ್ದರು.

ಈ ಪೋಸ್ಟ್‌ಗಳಿಗೆ ಸಂಬಂಧಿಸಿದಂತೆ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರರಾದ ಮಾವೋ ನಿಂಗ್, 'ಮೊದಲನೆಯದಾಗಿ, ತೈವಾನ್ ಪ್ರದೇಶದಲ್ಲಿ ಯಾವುದೇ ಅಧ್ಯಕ್ಷರು ಇಲ್ಲ. ಅದು ಪೀಪಲ್ ರಿಪಬ್ಲಿಕ್ ಆಫ್ ಚೀನಾದ ಭೂ ಪ್ರದೇಶದ ಬೇರ್ಪಡಿಸಲಾಗದ ಭಾಗ' ಎಂದು ತಿಳಿಸಿದ್ದಾರೆ.

ಕೇಜ್ರಿವಾಲ್ ಅರ್ಜಿ ತಿರಸ್ಕರಿಸುವಾಗ ನ್ಯಾಯಾಲಯದ ಮಾತು

‘ಜೀವಕ್ಕೆ ಕುತ್ತು ತರುವ ಸಮಸ್ಯೆ ಇಲ್ಲ’

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಚುನಾವಣಾ ಪ್ರಚಾರದ ಭಾಗವಾಗಿ ಕೈಗೊಂಡ ಪ್ರವಾಸ ಹಾಗೂ ಅದಕ್ಕೆ ಸಂಬಂಧಿಸಿ ನಡೆಸಿದ ಕಾರ್ಯಕ್ರಮಗಳನ್ನು ಗಮನಿಸಿದರೆ ಅವರು ‘ಜೀವಕ್ಕೆ ಕುತ್ತು ಎದುರಾಗುವಂತಹ’ ಕಾಯಿಲೆಗಳಿಂದ ಬಳಲುತ್ತಿರುವಂತೆ ಕಾಣುತ್ತಿಲ್ಲ ಎಂದು ಅವರಿಗೆ ಮಧ್ಯಂತರ ಜಾಮೀನು ನಿರಾಕರಿಸುವ ಸಂದರ್ಭದಲ್ಲಿ ದೆಹಲಿ ನ್ಯಾಯಾಲಯವೊಂದು ಹೇಳಿದೆ.

ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಆರೋಪಿಯಾಗಿರುವ ಕೇಜ್ರಿವಾಲ್ ಅವರಿಗೆ ವೈದ್ಯಕೀಯ ಕಾರಣಕ್ಕೆ ಮಧ್ಯಂತರ ಜಾಮೀನು ನೀಡಲು ನ್ಯಾಯಾಲಯವು ಬುಧವಾರ ನಿರಾಕರಿಸಿದೆ. ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಕಾವೇರಿ ಬವೇಜಾ ಅವರು ಕೇಜ್ರಿವಾಲ್ ಅವರ ನ್ಯಾಯಾಂಗ ಬಂಧನದ ಅವಧಿಯನ್ನು ಜೂನ್ 19ರವರೆಗೆ ವಿಸ್ತರಿಸಿದ್ದಾರೆ.

‘ಕೇಜ್ರಿವಾಲ್ ಅವರು ತಮಗೆ ಬಾಧಿಸಬಹುದಾದ ಕಾಯಿಲೆಯೊಂದರ ಪತ್ತೆಗೆ ಮಧ್ಯಂತರ ಜಾಮೀನು ಕೇಳಿದ್ದಾರೆ. ಆದರೆ ಬಂಧನದಲ್ಲಿ ಇರುವಾಗಲೇ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಅವಕಾಶ ಇರುವಾಗ, ಮಧ್ಯಂತರ ಜಾಮೀನು ಕೋರಲು ಇದು ಆಧಾರವಾಗಿ ಒದಗಿಬರುವುದಿಲ್ಲ’ ಎಂದು ನ್ಯಾಯಾಧೀಶರು ಹೇಳಿದ್ದಾರೆ.

ಕೇಜ್ರಿವಾಲ್ ಅವರು ಬಂಧನ ದಲ್ಲಿ ಇರುವಾಗ ಅವರ ವೈದ್ಯಕೀಯ ಅಗತ್ಯಗಳ ಬಗ್ಗೆ ಗಮನ ಹರಿಸಬೇಕು ಎಂದು ನ್ಯಾಯಾಧೀಶರು ಜೈಲಿನ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

‘ಎಎಪಿ–ಕಾಂಗ್ರೆಸ್ ಮೈತ್ರಿ ಲೋಕಸಭೆಗೆ ಮಾತ್ರ’

ನವದೆಹಲಿ (ಪಿಟಿಐ): ಎಎಪಿ ಮತ್ತು ಕಾಂಗ್ರೆಸ್ ಜತೆಗಿನ ಮೈತ್ರಿಯು ಲೋಕಸಭೆ ಚುನಾವಣೆಗೆ ಮಾತ್ರ ಸೀಮಿತ ಎಂದು ಎಎಪಿಯ ದೆಹಲಿ ರಾಜ್ಯ ಸಂಚಾಲಕ ಗೋಪಾಲ್ ರಾಯ್ ತಿಳಿಸಿದರು.

ಈ ಮೂಲಕ ಅವರು, ಮುಂದಿನ ವರ್ಷ ದೆಹಲಿ ವಿಧಾನಸಭೆಗೆ ನಡೆಯಲಿರುವ ಚುನಾವಣೆಯಲ್ಲಿ ಎಎಪಿ ಏಕಾಂಗಿಯಾಗಿ ಸ್ಪರ್ಧಿಸಲಿದೆ ಎಂಬ ಸುಳಿವು ನೀಡಿದರು. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಮನೆಯಲ್ಲಿ ಪಕ್ಷದ ಶಾಸಕರು ಮತ್ತು ಹಿರಿಯ ನಾಯಕರ ಸಭೆ ಗುರುವಾರ ನಡೆಯಿತು. ಲೋಕಸಭಾ ಚುನಾವಣೆಯಲ್ಲಿ ಪಕ್ಷವು ‘ಇಂಡಿಯಾ’ ಮೈತ್ರಿಕೂಟಕ್ಕೆ ಪೂರ್ಣ ಬೆಂಬಲ ನೀಡಿದೆ ಎಂದು ಗೋಪಾಲ್ ಪಿಟಿಐಗೆ ಪ್ರತಿಕ್ರಿಯಿಸಿದರು.

ನೀಟ್: ಕೆಲವರಿಗೆ ಹೆಚ್ಚು ಅಂಕ– ಆಕಾಂಕ್ಷಿಗಳ ಅನುಮಾನ

ನವದೆಹಲಿ (ಪಿಟಿಐ): ವೈದ್ಯಕೀಯ ಕೋರ್ಸ್‌ನ ಪ್ರವೇಶಕ್ಕೆ ನಡೆದಿದ್ದ ನೀಟ್ ಪರೀಕ್ಷೆಯಲ್ಲಿ ಕೆಲವರಿಗೆ ಹೆಚ್ಚು ಅಂಕಗಳು ಬಂದಿರುವುದು ಅನುಮಾನಕ್ಕೆ ಎಡೆ-ಮಾಡಿಕೊಟ್ಟಿದೆ ಎಂದು ಹಲವು ನೀಟ್ ಆಕಾಂಕ್ಷಿಗಳು ಆರೋಪಿಸಿದ್ದಾರೆ. ಈ ಕಾರಣದಿಂದಲೇ ಒಂದೇ ಪರೀಕ್ಷಾ ಕೇಂದ್ರದ ಆರು ಅಭ್ಯರ್ಥಿಗಳು ಸೇರಿದಂತೆ 67 ಅಭ್ಯರ್ಥಿಗಳು ಪ್ರಥಮ ರ‍್ಯಾಂಕ್ ಹಂಚಿಕೊಳ್ಳಲು ಸಾಧ್ಯವಾಗಿದೆ ಎಂದು ಅವರು ದೂರಿದ್ದಾರೆ.

ಆದರೆ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು (ಎನ್‌ಟಿಎ) ಈ ಕುರಿತ ಯಾವುದೇ ಅಕ್ರಮಗಳನ್ನು ನಿರಾಕರಿಸಿದೆ. ಎನ್‌ಟಿಎ ಮಂಗಳವಾರ ಸಂಜೆ ನೀಟ್ ಪರೀಕ್ಷೆಯ ಫಲಿತಾಂಶ ಪ್ರಕಟಿಸಿದ್ದು, ಹರಿಯಾಣದ ಒಂದೇ ಪರೀಕ್ಷಾ ಕೇಂದ್ರದ ಆರು ಅಭ್ಯರ್ಥಿಗಳು ಸೇರಿದಂತೆ ದೇಶದಾದ್ಯಂತ 67 ಅಭ್ಯರ್ಥಿಗಳು ಮೊದಲ ರ‍್ಯಾಂಕ್ ಅನ್ನು ಹಂಚಿಕೊಂಡಿದ್ದಾರೆ.

ಎನ್‌ಟಿಎ ಪ್ರತಿಕ್ರಿಯೆ: ಪರೀಕ್ಷಾ ಕೇಂದ್ರದೊಳಗೆ ಪರೀಕ್ಷಾ ಸಮಯದಲ್ಲಿ ಆದ ನಷ್ಟದ ಕುರಿತು ಕೆಲ ಅಭ್ಯರ್ಥಿಗಳು ಸಲ್ಲಿಸಿದ್ದ ಮನವಿಗಳನ್ನು ಪರಿಶೀಲಿಸಲಾಗಿದೆ. ಸುಪ್ರೀಂಕೋರ್ಟ್ ತೀರ್ಪಿನ (2018) ಪ್ರಕಾರ ಅಳವಡಿಸಿಕೊಂಡಿರುವ ಸಾಮಾನ್ಯ ಸೂತ್ರವನ್ನು ಆಧರಿಸಿ ಸಮಯ ನಷ್ಟದ ಪರಿಹಾರವನ್ನು ಅವರಿಗೆ ನೀಡಲಾಗಿದೆ ಎಂದು ಎನ್‌ಟಿಎ ತಿಳಿಸಿದೆ.

ಅಭ್ಯರ್ಥಿಗಳಿಗೆ ಪರೀಕ್ಷಾ ಸಮಯದ ನಷ್ಟವನ್ನು ಖಚಿತಪಡಿಸಿಕೊಂಡು, ಅವರಿಗೆ ಕೃಪಾಂಕದ ಮೂಲಕ ಪರಿಹಾರ ನೀಡಲಾಗಿದೆ. ಈ ಕಾರಣಕ್ಕೆ ಅಂಕಗಳು 718 ಅಥವಾ 719 ಆಗಿರಬಹುದು ಎಂದು ಅದು ತಿಳಿಸಿದೆ.

ಪ್ರಶ್ನೆಪತ್ರಿಕೆಯನ್ನು ಹೊಸ ಎನ್‌ಸಿಇಆರ್‌ಟಿ ಪಠ್ಯ-ಪುಸ್ತಕವನ್ನು ಆಧರಿಸಿ ಸಿದ್ಧಪಡಿಸಲಾಗಿದೆ. ಆದರೆ ಕೆಲ ಅಭ್ಯರ್ಥಿಗಳು ಹಳೆಯ ಎನ್‌ಸಿಇಆರ್‌ಟಿ ಪಠ್ಯಗಳನ್ನು ಅಧ್ಯಯಿಸಿದ್ದಾರೆ. ಈ ಸಂಬಂಧವೂ ಕೆಲ ಅಭ್ಯರ್ಥಿಗಳು ಮನವಿಗಳನ್ನು ಸಲ್ಲಿಸಿದ್ದರು. ಪ್ರಶ್ನೆಯೊಂದಕ್ಕೆ ಎರಡು ಆಯ್ಕೆಗಳಲ್ಲಿ ಒಂದನ್ನು ಗುರುತಿಸಿದ ಎಲ್ಲರಿಗೆ ಐದು ಅಂಕಗಳನ್ನು ಕೃಪಾಂಕವಾಗಿ ಎನ್‌ಟಿಎ ನಿಗದಿಪಡಿಸಿತು. ಈ ಕಾರಣದಿಂದ, ಒಟ್ಟು 44 ಅಭ್ಯರ್ಥಿಗಳ ಅಂಕಗಳು 715ರಿಂದ 720ಕ್ಕೆ ಏರಿಕೆಯಾಗಿದೆ. ಇದರಿಂದ ಮೊದಲ ರ‍್ಯಾಂಕ್ ಪಡೆದವರ ಸಂಖ್ಯೆ ಏರಿಕೆಯಾಗಿದೆ ಎಂದಿದೆ.

ಅವಘಡ

ಬಿಹಾರದ ಲಖೀಸರಾಯಿ ಜಿಲ್ಲೆಯ ಕಿವೂಲ್ ರೈಲು ನಿಲ್ದಾಣದಲ್ಲಿ ರೈಲಿನಲ್ಲಿ ಬೆಂಕಿ ಕಾಣಿಸಿಕೊಂಡಾಗ ಸೇರಿದ್ದ ಜನರು –ಪಿಟಿಐ ಚಿತ್ರ

ವೀಸಾ ಹಗರಣ: ಕಾರ್ತಿ ಚಿದಂಬರಂಗೆ ಜಾಮೀನು

ನವದೆಹಲಿ (ಪಿಟಿಐ): ಚೀನಿ ಪ್ರಜೆಗಳಿಗೆ ವೀಸಾ ಕೊಡಿಸಿದ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕ ಕಾರ್ತಿ ಚಿದಂಬರಂ ಅವರಿಗೆ ದೆಹಲಿ ನ್ಯಾಯಾಲಯ ಗುರುವಾರ ಜಾಮೀನು ಮಂಜೂರು ಮಾಡಿದೆ.

ಇ.ಡಿ ಸಲ್ಲಿಸಿದ್ದ ದೋಷಾರೋಪ ಪಟ್ಟಿಯನ್ನು ಪರಿಗಣನೆಗೆ ತೆಗೆದುಕೊಂಡಿದ್ದ ವಿಶೇಷ ನ್ಯಾಯಾಲಯ ಕಾರ್ತಿ ಅವರಿಗೆ ಸಮನ್ಸ್ ಜಾರಿಗೊಳಿಸಿತ್ತು.

ಇ.ಡಿ ಮತ್ತು ಸಿಬಿಐ ವಿಶೇಷ ನ್ಯಾಯಾಧೀಶರಾದ ಕಾವೇರಿ ಬವೇಜಾ ಅವರು ಆರೋಪಿಗೆ ₹1ಲಕ್ಷದ ವೈಯಕ್ತಿಕ ಬಾಂಡ್ ಹಾಗೂ ಅಷ್ಟೇ ಮೊತ್ತದ ಶ್ಯೂರಿಟಿ ಆಧಾರದ ಜಾಮೀನು ಮಂಜೂರು ಮಾಡಿದರು.

ಆತ್ಮಹತ್ಯೆ ಬೆದರಿಕೆ: ಗುತ್ತಿಗೆದಾರನಿಗೆ ಚೆಕ್ ಹಸ್ತಾಂತರ

ಪಾವಗಡ: ವಿಶ್ವೇಶ್ವರಯ್ಯ ಜಲ ನಿಗಮದ ಅಧಿಕಾರಿಗಳು ಗುತ್ತಿಗೆದಾರ ಸುಜಿತ್ ಅವರಿಗೆ ಗುರುವಾರ ಕಾಮಗಾರಿ ನಿರ್ವಹಿಸಿದ ಹಣದ ಚೆಕ್ ನೀಡಿದ್ದಾರೆ.

ರಸ್ತೆ ಕಾಮಗಾರಿ ಮುಗಿಸಿದ್ದರೂ ಉದ್ದೇಶ ಪೂರ್ವಕವಾಗಿ ಹಣ ಬಿಡುಗಡೆ ಮಾಡುತ್ತಿಲ್ಲ ಎಂದು ಆರೋಪಿಸಿ ಗುತ್ತಿಗೆದಾರ ಸುಜಿತ್ ಆತ್ಮಹತ್ಯೆ ಮಾಡಿ-ಕೊಳ್ಳುವುದಾಗಿ ಹೇಳಿರುವ ವಿಡಿಯೊ ಬುಧವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು.

ಈ ಬಗ್ಗೆ ಗುರುವಾರ ‘ಪ್ರಜಾವಾಣಿ’ಯಲ್ಲಿ ‘ಬಿಲ್ ಬಾಕಿ: ಗುತ್ತಿಗೆದಾರನಿಂದ ಆತ್ಮಹತ್ಯೆ ಬೆದರಿಕೆ’ ಶೀರ್ಷಿಕೆ ಅಡಿ ವರದಿ ಪ್ರಕಟವಾಗಿತ್ತು. ಎಚ್ಚೆತ್ತುಕೊಂಡ ಅಧಿಕಾರಿಗಳು ಬಾಕಿ ಮೊತ್ತದ ಚೆಕ್ ಹಸ್ತಾಂತರಿಸಿದ್ದಾರೆ.

ಅಥಣಿಯಲ್ಲಿ ನಂಬಿಕೆಗೆ ಮೋಸ: ಸತೀಶ ಜಾರಕಿಹೊಳಿ

ಪ್ರಜಾವಾಣಿ ವಾರ್ತೆ

ಅಥಣಿ: ‘ಅಥಣಿ ಕ್ಷೇತ್ರದಲ್ಲಿ ನಮ್ಮ ನಂಬಿಕೆಗೆ ಮೋಸವಾಗಿದೆ. ಮೂಲ ಕಾಂಗ್ರೆಸ್ ಮತದಾರರು ಕೈ ಹಿಡಿದ ಪರಿಣಾಮ ನಮಗೆ ಜಯವಾಗಿದೆ’ ಎಂದು ಸಚಿವ ಸತೀಶ್ ಜಾರಕಿಹೊಳಿ ಅವರು ಪರೋಕ್ಷವಾಗಿ ಶಾಸಕ ಲಕ್ಷ್ಮಣ ಸವದಿ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ಗುರುವಾರ ಅಭಿನಂದನಾ ಸಮಾರಂಭದಲ್ಲಿ ಅವರು, ‘ಈ ಬಾರಿ ಚಿಕ್ಕೋಡಿ ಕ್ಷೇತ್ರದಲ್ಲಿ ಕಾಂಗ್ರೆಸ್ ಪರ ಗಾಳಿ ಬೀಸಿತ್ತು. ಆದರೆ ಕೆಲ ಕ್ಷೇತ್ರ-ಗಳಲ್ಲಿ ನಮ್ಮವರಿಂದ ಮೋಸವಾಗಿದೆ. ಕ್ಷೇತ್ರದ ಅನೇಕ ಕಡೆ ಗೆಲುವಿನ ಗುಲಾಲ್ ಹಾರಿದ್ದರೂ ಅಥಣಿಯಲ್ಲಿ ಇದು ಸಾಧ್ಯ-ವಾಗಲಿಲ್ಲ’ ಎಂದರು.

‘ನಮ್ಮ ನಂಬಿಕೆಗೆ ಅಥಣಿಯಲ್ಲಿ ಮೋಸವಾಗಿದೆ. ಇಲ್ಲಿನ ನಾಯಕರು ಪ್ರಚಾರ ಕಾರ್ಯದಲ್ಲಿ ಉತ್ಸಾಹ ತೋರಿಸಲಿಲ್ಲ. ಕೊನೆ ಪಕ್ಷ ನಮಗೆ ತಿಳಿಸಿದ್ದರೆ ನಾವಾದರೂ ಕೆಲಸ ಮಾಡಿ ಹೆಚ್ಚಿನ ಮತ ಪಡೆಯಲು ಶ್ರಮವಹಿಸಿ ಕೆಲಸ ಮಾಡುತ್ತಿದ್ದೆವು’ ಎಂದು ಸವದಿ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

‘ಕಾಗವಾಡದಲ್ಲಿ ಶಾಸಕ ರಾಜು ಕಾಗೆ ಮತದಾನ ಪೂರ್ವದಲ್ಲಿ ಕ್ಷೇತ್ರದ ಸ್ಥಿತಿಗತಿ ಕುರಿತು ತಿಳಿಸಿದ್ದರು. ಸ್ವಲ್ಪ ಕಷ್ಟ ಎದುರಾಗುತ್ತಿದ್ದಂತೆ ನಮಗೂ ಕ್ಷೇತ್ರವನ್ನು ನೋಡಿಕೊಳ್ಳಲು ತಿಳಿಸಿದ್ದರ ಪರಿಣಾಮ ನಾವು ಚುನಾವಣೆಯಲ್ಲಿ ಹೆಚ್ಚಿನ ಕಾರ್ಯ ಮಾಡಲು ಸಹಕಾರಿಯಾಯಿತು‘ ಎಂದು ಹೇಳಿದರು . ನಾನು ಯಾರನ್ನು ತುಳಿಯುವ ಪ್ರಶ್ನೆಯೇ ಇಲ್ಲ ಎಂದು ಜಾರಕಿಹೊಳಿ ಸ್ಪಷ್ಟಪಡಿಸಿದ್ದಾರೆ

‘ಸತೀಶರಿಂದ ಎಸ್‌ಸಿ ನಾಯಕರ ನಿರ್ನಾಮ’

ಚಿಕ್ಕೋಡಿ: ‘ಸಚಿವ ಸತೀಶ ಜಾರಕಿಹೊಳಿ ಅವರು ಚಿಕ್ಕೋಡಿ ಭಾಗದಲ್ಲಿ ಸಮುದಾಯದ ಮುಖಂಡರನ್ನು ನಿರ್ನಾಮ ಮಾಡುತ್ತಿದ್ದಾರೆ’ ಎಂದು ಕುಡಚಿ ಕಾಂಗ್ರೆಸ್ ಶಾಸಕ ಮಹೇಂದ್ರ ತಮ್ಮಣ್ಣವರ ಆರೋಪಿಸಿದರು.

‘ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪ್ರಿಯಾಂಕಾ ಜಾರಕಿಹೊಳಿ ಪರ ನಾನು ಕೆಲಸ ಮಾಡಿಲ್ಲ ಎಂದು ಹೇಳಿರುವ ಸತೀಶ ಅವರು ಹೈಕಮಾಂಡ್‌ಗೆ ದೂರು ನೀಡುವುದಾಗಿ ತಿಳಿಸಿದ್ದಾರೆ. ಯಾವುದೇ ದೂರಿಗೂ ದಾಖಲೆ ಸಹಿತ ಉತ್ತರಿಸಲು ಸಿದ್ಧ’ ಎಂದು ಅವರು ಗುರುವಾರ ಪತ್ರಿಕಾಗೋಷ್ಠಿ-ಯಲ್ಲಿ ತಿಳಿಸಿದರು.

‘ಬುದ್ಧ, ಬಸವ, ಅಂಬೇಡ್ಕರ್ ತತ್ವಗಳನ್ನು ನಾನು ಪಾಲಿಸುತ್ತೇನೆ. ನಮಗೆ ಬೆಲೆ ಇಲ್ಲದ ಜಾಗದಲ್ಲಿ ಇರಲು ನಾನು ಇಷ್ಟಪಡುವುದಿಲ್ಲ’ ಎಂದರು.

ಮಾಜಿ ಸಂಸದ ಜಿ.ಎಂ.ಸಿದ್ದೇಶ್ವರ ಜತೆ ಕಾರ್ಯಕರ್ತ ಚರ್ಚೆ

‘₹500 ಕೊಟ್ಟಿದ್ರೆ ಗೆಲ್ಲುತ್ತಿದ್ರಿ’

ಪ್ರಜಾವಾಣಿ ವಾರ್ತೆ

ದಾವಣಗೆರೆ: ದಾವಣಗೆರೆ ಕ್ಷೇತ್ರದಲ್ಲಿ ಬಿಜೆಪಿ ಸೋಲಿಗೆ ಹಣ ಹಂಚಿಕೆಯಲ್ಲಿ ಆದ ವ್ಯತ್ಯಾಸಗಳೇ ಕಾರಣ ಎಂದು ಕಾರ್ಯಕರ್ತರೊಬ್ಬರು ಅಭ್ಯರ್ಥಿಯ ಪತಿ, ಮಾಜಿ ಸಂಸದ ಜಿ.ಎಂ.ಸಿದ್ದೇಶ್ವರ ಅವರಿಗೆ ಕರೆ ಮಾಡಿ ಆಕ್ಷೇಪಿಸಿರುವ ಆಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

ಸಿದ್ದೇಶ್ವರ ಅವರು ಕಾರ್ಯಕರ್ತನ ವರ್ತನೆಗೆ ಬೇಸತ್ತು ಮೊಬೈಲ್ ಅನ್ನು ತಮ್ಮ ಪುತ್ರನಿಗೆ ಕೊಟ್ಟಿದ್ದು, ಪುತ್ರ ಸಹ ಮಾತನಾಡಿರುವುದು ಆಡಿಯೊದಲ್ಲಿದೆ.

‘ನೀವು ಮತಕ್ಕೆ ₹300 ಹಂಚಿದ್ದೀರಿ. ₹500 ಕೊಟ್ಟಿದ್ದರೆ ಗೆಲ್ತಿದ್ರಿ’ ಎಂದು ಹೊನ್ನಾಳಿ ತಾಲ್ಲೂಕಿನ ಗ್ರಾಮವೊಂದರ ಕಾರ್ಯಕರ್ತ ಹೇಳಿ ನೋವು ತೋಡಿಕೊಂಡಿದ್ದಾರೆ. ‘ಹಣ ಹಂಚಿಯೂ ಎಂ.ಪಿ.ರೇಣುಕಾಚಾರ್ಯ ಸೋಲಲಿಲ್ಲವೇ? ಎಂಬ ಸಿದ್ದೇಶ್ವರ ಪ್ರಶ್ನೆಗೆ ರೇಣುಕಾಚಾರ್ಯ ಅವರಂತೆ ನೀವು ಸೋಲುವುದಾದರೆ ಟಿಕೆಟ್ ಯಾಕೆ ತೆಗೆದುಕೊಳ್ಳಬೇಕಿತ್ತು’ ಎಂದು ಕಾರ್ಯಕರ್ತ ಮರು ಪ್ರಶ್ನೆ ಮಾಡಿದ್ದಾರೆ.

‘ಪ್ರಧಾನಿ ಮೋದಿ ಅವರೇ 3.50 ಲಕ್ಷ ಮತ ಕಡಿಮೆ ಪಡೆದಿಲ್ಲವೇ?’ ಎಂದು ಸಿದ್ದೇಶ್ವರ ಸಮಜಾಯಿಷಿ ನೀಡಿದಾಗ, ‘ಅವರು ಗೆದ್ದಿದ್ದಾರೆ. ಒಂದು ವೋಟಿನಿಂದ ಗೆದ್ದರೂ ಗೆಲುವೇ. ನಮ್ಮ ಕ್ಷೇತ್ರ ಸೇರಿ ಇನ್ನೂ 10 ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದಿದ್ದರೆ ಮೋದಿ ಸುಲಭವಾಗಿ ಪ್ರಧಾನಿ ಆಗುತ್ತಿದ್ದರು’ ಎಂದು ಕಾರ್ಯಕರ್ತ ತಿರುಗೇಟು ನೀಡಿದ್ದಾರೆ.

ತಂದೆಯಿಂದ ಮೊಬೈಲ್ ತೆಗೆದುಕೊಂಡು ಮಾತನಾಡಿರುವ ಪುತ್ರ ಜಿ.ಎಸ್.ಅನಿತ್‌ಕುಮಾರ್, ‘ನಿಮಗೆ ಹಣ ಕೊಡಲು ನಾವು ಲಂಚ ಹೊಡೆದಿಲ್ಲ. ಲಂಚ ಹೊಡೆಯಲು 4 ಸಲ ನಮ್ಮನ್ನು ಗೆಲ್ಲಿಸಿದ್ರಾ?’ ಎಂದು ಕೇಳಿದ್ದಾರೆ.

‘ಮತ್ತೆ ಟಿಕೆಟ್ ಕೊಳ್ಳಲು ಹಣ ಕೊಟ್ರಾ?, ಹಣ ಕೊಡದಿದ್ದರೆ ನೀವು ಏಕೆ ಸ್ಪರ್ಧಿಸಿದ್ರಿ? ಹಣ ಇರುವ ಬೇರೆಯವರಿಗೆ ಅವಕಾಶ ಕೊಡಬೇಕಿತ್ತು’ ಎಂದು ಕಾರ್ಯಕರ್ತ ಹೇಳಿದ್ದಾರೆ. ‘ನಾವೇನೂ ಟಿಕೆಟ್ ಕೇಳಿರಲಿಲ್ಲ. ಕೇಳದಿದ್ದರೂ ಕೊಟ್ಟಿದ್ದಾರೆ’ ಎಂದಾಗ, ‘ಅದೂ ರೆಕಾರ್ಡ್ ಆಗಲಿ ಬಿಡಿ’ ಎಂದೂ ಹೇಳಿರುವುದು ಚರ್ಚೆಯಾಗುತ್ತಿದೆ.

ಸಂಭಾಷಣೆಯ ಸಾರಾಂಶ

ಕಾರ್ಯಕರ್ತ: ನಾವು ಕರೆ ಮಾಡಿದರೂ ಕಟ್ ಮಾಡ್ತೀರಲ್ಲಣ್ಣ?
ಸಿದ್ದೇಶ್ವರ: ‘ನಾವು ಸೋತು ಸುಣ್ಣವಾಗಿ ದುಡ್ಡು ಖರ್ಚು ಮಾಡಿಕೊಂಡಿರುವ ವ್ಯಥೆಯಲ್ಲಿ ಇದ್ದೇವೆ. ನೀನು ತಮಾಷೆ ಮಾಡುತ್ತಿದ್ದಿಯಲ್ಲಪ್ಪಾ? ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ನಿಲ್ಲು ನಿನಗೆ ಗೊತ್ತಾಗುತ್ತದೆ’
ಕಾರ್ಯಕರ್ತ: ನಮ್ಮ ಬೂತ್‌ನಲ್ಲಿ ತೆಗೆದುನೋಡಿ, 130 ವೋಟ್ ಲೀಡ್ ಇದೆ. ನೀವು ಕಾರ್ಯಕರ್ತರಿಗೆ ಈ ರೀತಿ ಮಾತನಾಡಬಾರದು. ಬಸವರಾಜ ಬೊಮ್ಮಾಯಿ ₹ 100 ಕೊಟ್ಟು ಗೆದ್ದಿಲ್ವಾ? ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದಿದ್ದು 26,000 ಮತಗಳಿಂದ. ಅಷ್ಟು ಪ್ರಮಾಣದ್ದು ಲೀಡ್ ಏನ್ರೀ? ಪ್ರಯತ್ನ ಪಟ್ಟಿದ್ದರೆ ಗೆಲ್ಲಬಹುದಿತ್ತಲ್ಲವೇ?
ಸಿದ್ದೇಶ್ವರ: ಎಲ್ಲರಿಗೂ ಗೊತ್ತು ಅದು ಲೀಡ್ ಅಲ್ಲ. ಗ್ರಹಚಾರ ನೆಟ್ಟಗಿಲ್ಲ ಅಷ್ಟೇ.
ಕಾರ್ಯಕರ್ತ: ಗ್ರಹಚಾರ ಅಲ್ಲ ರೀ, 4 ಬಾರಿ ಚುನಾವಣೆ ಮಾಡಿ ನಿಮ್ಮನ್ನು ಗೆಲ್ಲಿಸಿದ್ದೇವೆ. ಈ ಸಾರಿ ಮೋದಿ ನೋಡಿ ಓಟು ಹಾಕಿದ್ದಾರೆ. ಆದರೆ, ನೀವು ಒಂದು ವೋಟ್‌ಗೆ ₹ 500 ಫಿಕ್ಸ್ ಮಾಡಿದ್ರೆ, ಗೆದ್ದು ಪಟಾಕಿ ಹೊಡೆಯುತ್ತಿದ್ದೆವು.
ಜಿ.ಎಂ.ಸಿದ್ದೇಶ್ವರ: ಸುಮ್ಮನೆ ಮಾತನಾಡುತ್ತಿದ್ದೀಯಾ? ನನ್ನ ಮಗ ಮಾತನಾಡುತ್ತಾನೆ ಮಾತಾಡು.
ಅನಿತ್‌ಕುಮಾರ್: ನಿಮ್ಮೂರಲ್ಲಿ ಎಷ್ಟು ಲೀಡ್ ಕೊಟ್ಟಿದ್ದೀಯಾ ಹೇಳು?
ಕಾರ್ಯಕರ್ತ: 500ರಲ್ಲಿ 150 ವೋಟ್ ಲೀಡ್ ಕೊಟ್ಟಿದ್ದೇನೆ.
ಅನಿತ್‌ಕುಮಾರ್: ಕ್ಯಾಂಡಿಡೇಟ್‌ಅಂದ್ರೆ, ವೋಟ್ ಹಾಕಿಸುವವನು ನಾನಾ?
ಕಾರ್ಯಕರ್ತ: ₹ 300 ಕೊಡುವ ಬದಲು ₹ 500 ಕೊಟ್ಟಿದ್ರೆ ಗೆಲ್ತಿದ್ರಿ.
ಅನಿತ್‌ಕುಮಾರ್: ದುಡ್ಡು ಹೊಡೆಯಬೇಕಾಗಿತ್ತಾ ನಾವು?
ಕಾರ್ಯಕರ್ತ: ನೀವು ಪ್ರಾಂಪ್ಟ್ ಆಗಿ ಇದ್ದೀರಾ, ಪ್ರಾಂಪ್ಟ್ ಇರುವುದಾದರೆ ಚುನಾವಣೆಗೆ ಏಕೆ ಹೋಗಬೇಕಿತ್ತು?
ಅನಿತ್‌ಕುಮಾರ್: ₹ 500 ಕೊಟ್ಟಿದ್ದ್ರೆ ಗೆಲ್ತಿದ್ರಿ ಅಂತೀರಿ. ಆದ್ರೆ, ಪಾರ್ಟಿಯಿಂದ ಫಂಡ್ ಕೊಟ್ಟಿಲ್ಲ.

ಬೇಕು ಅಂತಲೇ ರೆಕಾರ್ಡ್ ಮಾಡಿದ್ದಾರೆ. ಹಣ ಕೊಟ್ಟು ವೋಟು ಪಡೆಯಬೇಕಿತ್ತಾ. ನಾನು ಮಾಡಿದ ಅಭಿವೃದ್ಧಿಗೆ ಬೆಲೆ ಇಲ್ಲವಾ?
ಜಿ.ಎಂ. ಸಿದ್ದೇಶ್ವರ, ಮಾಜಿ ಸಂಸದ

ಜೆಡಿಎಸ್‌ಗೆ 2, ಬಿಜೆಪಿ, ಕಾಂಗ್ರೆಸ್‌ಗೆ ತಲಾ 1 ಕ್ಷೇತ್ರ

ಒಂದನೇ ಪುಟದಿಂದ...

ಮರಿತಿಬ್ಬೇಗೌಡ ಪಕ್ಷ ತೊರೆದರೂ ತನ್ನ ಕ್ಷೇತ್ರ ಉಳಿಸಿಕೊಳ್ಳುವಲ್ಲಿ ಜೆಡಿಎಸ್ ಯಶಸ್ವಿಯಾಗಿದೆ.

ನೈರುತ್ಯ ಶಿಕ್ಷಕರ ಕ್ಷೇತ್ರದಲ್ಲಿ ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಎಸ್.ಎಲ್. ಬೋಜೇಗೌಡ ಪುನರಾಯ್ಕೆ ಬಯಸಿ ಕಣಕ್ಕಿಳಿದಿದ್ದರು. ಅವರು ಕಾಂಗ್ರೆಸ್ ಅಭ್ಯರ್ಥಿ ಕೆ.ಕೆ. ಮಂಜುನಾಥ್ ವಿರುದ್ಧ 5,267 ಮತಗಳಿಂದ ಗೆಲುವು ಸಾಧಿಸಿದರು. ಬೋಜೇಗೌಡ 9,829 ಮತ, ಕಾಂಗ್ರೆಸ್ ಅಭ್ಯರ್ಥಿ ಕೆ.ಕೆ.ಮಂಜುನಾಥ್ ಕುಮಾರ್ 4,562 ಮತ ಪಡೆದರು.

ಬಿಜೆಪಿಯ ಮತ್ತೊಂದು ಭದ್ರಕೋಟೆ ಆದ ಆಗ್ನೇಯ ಶಿಕ್ಷಕರ ಕ್ಷೇತ್ರದಲ್ಲಿ 4 ಬಾರಿ ಗೆಲುವು ಸಾಧಿಸಿದ್ದ ವೈ.ಎ. ನಾರಾಯಣಸ್ವಾಮಿ ಕಾಂಗ್ರೆಸ್‌ನ ಡಿ.ಟಿ. ಶ್ರೀನಿವಾಸ್ ಎದುರು ಹಿನ್ನಡೆ ಕಂಡಿದ್ದರು. ಈಶಾನ್ಯ ಪದವೀಧರ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಹಾಲಿ ಸದಸ್ಯ ಚಂದ್ರಶೇಖರ ಪಾಟೀಲ ಅವರು ಬಿಜೆಪಿ ಅಭ್ಯರ್ಥಿ ಅಮರನಾಥ ಪಾಟೀಲ ಎದುರು ಮುನ್ನಡೆ ಸಾಧಿಸಿದ್ದರು.

ಬಿಜೆಪಿ–ಜೆಡಿಎಸ್ ಮೈತ್ರಿಯಿಂದಾಗಿ ನೈರುತ್ಯ ಶಿಕ್ಷಕರ ಕ್ಷೇತ್ರ ಹಾಗೂ ದಕ್ಷಿಣ ಶಿಕ್ಷಕರ ಕ್ಷೇತ್ರ ಜೆಡಿಎಸ್‌ಗೆ ಬಿಟ್ಟುಕೊಡಲಾಗಿತ್ತು. 2018ರಲ್ಲಿ ನಡೆದಿದ್ದ ಚುನಾವಣೆಯಲ್ಲಿ ಈ ಎರಡೂ ಕ್ಷೇತ್ರಗ-ಳಲ್ಲೂ ಜೆಡಿಎಸ್ ಅಭ್ಯರ್ಥಿಗಳೇ ಗೆಲುವು ಸಾಧಿಸಿದ್ದರು. ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾಗಿದ್ದ ಮರಿತಿಬ್ಬೇಗೌಡ ಚುನಾವಣೆಗೆ ಕೆಲ ದಿನಗಳ ಮೊದಲು ಜೆಡಿಎಸ್‌ಗೆ ರಾಜೀನಾಮೆ ನೀಡಿ, ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕೆ ಇಳಿದಿದ್ದರು. ಈ ಕ್ಷೇತ್ರಗಳಿಗೆ ಜೂನ್ 3 ರಂದು ಮತದಾನ ನಡೆದಿತ್ತು. ಗುರುವಾರ ಮತ ಎಣಿಕೆ ನಡೆಯಿತು.

ಕೇಂದ್ರೀಯ ಮೀಸಲು ಪೊಲೀಸ್ ಪಡೆಯ 85 ವರ್ಷಗಳ ಇತಿಹಾಸದಲ್ಲಿಯೇ ಮೊದಲು

ಸಿಆರ್‌ಪಿಎಫ್: ಅಡುಗೆ ಸಿಬ್ಬಂದಿಗೆ ಬಡ್ತಿ

ನವದೆಹಲಿ (ಪಿಟಿಐ): ಕೇಂದ್ರೀಯ ಮೀಸಲು ಪೊಲೀಸ್ ಪಡೆಯಲ್ಲಿನ (ಸಿಆರ್‌ಪಿಎಫ್) ಅತ್ಯಂತ ಕೆಳಹಂತದ ಹುದ್ದೆಗಳಾದ ಅಡುಗೆಯವರು ಮತ್ತು ನೀರು ನಿರ್ವಾಹಕರುಗಳಿಗೆ (ವಾಟರ್ ಕ್ಯಾರಿಯರ್) ಇದೇ ಮೊದಲ ಬಾರಿಗೆ ಬಡ್ತಿ ನೀಡಲಾಗಿದೆ. ಈ ಹುದ್ದೆಗಳಲ್ಲಿನ 2,600 ಸಿಬ್ಬಂದಿ ಪದೋನ್ನತಿ ಆದೇಶ ಪಡೆದಿದ್ದಾರೆ.

ಸಿಆರ್‌ಪಿಎಫ್‌ನ 85 ವರ್ಷಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಈ ಹುದ್ದೆಯ ಸಿಬ್ಬಂದಿಗೆ ಬಡ್ತಿ ಸಿಕ್ಕಿದೆ.

1939ರಲ್ಲಿ ರಚನೆಯಾದ ಸಿಆರ್‌ಪಿಎಫ್ ಪಡೆಗಳಲ್ಲಿ ಸದ್ಯ 3.25 ಲಕ್ಷ ಪುರುಷ ಮತ್ತು ಮಹಿಳಾ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಿಆರ್‌ಪಿಎಫ್‌ನ ಅಡುಗೆ ಮನೆಗಳು, ಕ್ಯಾಂಟೀನ್‌ಗಳು ಮತ್ತು ಅದಕ್ಕೆ ಸಂಬಂಧಿಸಿದ ಆಡಳಿತಾತ್ಮಕ ಕಾರ್ಯಗಳ ಜಾಲವನ್ನು ನಿರ್ವಹಿಸುವ 12,250 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ.

1,700 ಅಡುಗೆಯವರು ಮತ್ತು 900 ನೀರು ನಿರ್ವಾಹಕ ಸಿಬ್ಬಂದಿಯನ್ನು ಅವರ ಕಾನ್‌ಸ್ಟೆಬಲ್ ಹುದ್ದೆಯಿಂದ ಹೆಡ್ ಕಾನ್‌ಸ್ಟೆಬಲ್ ಶ್ರೇಣಿಗೆ ಬಡ್ತಿ ನೀಡಿ ಬುಧವಾರ ಆದೇಶ ಹೊರಡಿಸಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಬ್ರಿಟಿಷರ ಕಾಲದಲ್ಲಿ 1939ರಲ್ಲಿ ಸಿಆರ್‌ಪಿಎಫ್ ರಚನೆಯಾಗಿದೆ. ಅಂದಿನಿಂದಲೂ ಅಡುಗೆ ಕಾರ್ಯ ನಿರ್ವಹಿಸುವ ಸಿಬ್ಬಂದಿ ಸಿಆರ್‌ಪಿಎಫ್‌ನ ಭಾಗವಾಗಿದ್ದಾರೆ. 2016ರಲ್ಲಿ ಕೇಂದ್ರ ಸರ್ಕಾರ 7ನೇ ವೇತನ ಆಯೋಗ ಜಾರಿಗೊಳಿಸಿದಾಗ ಈ ಸಿಬ್ಬಂದಿಗೆ ಅಡುಗೆಯವರು ಮತ್ತು ನೀರು ನಿರ್ವಾಹಕರು ಎಂಬ ನಿರ್ದಿಷ್ಟ ಕೇಡರ್‌ನ್ನು ಹೆಸರಿಸಿತು ಎಂದು ಅವರು ವಿವರಿಸಿದರು.

ಸಿಆರ್‌ಪಿಎಫ್‌ನಲ್ಲಿ ಈ ಕೆಳ ಶ್ರೇಣಿಯಲ್ಲಿ ನೇಮಕಗೊಂಡವರಿಗೆ ಈ ಮೊದಲು ಯಾವುದೇ ಬಡ್ತಿ ನೀಡಲಾ-ಗುತ್ತಿರಲಿಲ್ಲ. ಸುಮಾರು 30ರಿಂದ 35 ವರ್ಷಗಳವರೆಗೆ ಒಂದೇ ಶ್ರೇಣಿಯಲ್ಲಿ ಸೇವೆ ಸಲ್ಲಿಸಿ, ಅದೇ ಶ್ರೇಣಿಯಲ್ಲಿ ನಿವೃತ್ತ-ರಾಗಬೇಕಿತ್ತು. ಪ್ರತಿ ಸಿಆರ್‌ಪಿಎಫ್ ಬೆಟಾ-ಲಿಯನ್‌ನಲ್ಲಿ ಈ ಕಾರ್ಯ ನಿರ್ವಹಿಸುವ 45 ಸಿಬ್ಬಂದಿ ಇರುತ್ತಾರೆ ಎಂದರು.

ಈ ಸಿಬ್ಬಂದಿಗೆ ಬಡ್ತಿ ನೀಡುವ ಕುರಿತ ಸಿಆರ್‌ಪಿಎಫ್ ಸಿದ್ಧಪಡಿಸಿದ ಪ್ರಸ್ತಾವಕ್ಕೆ ಕೇಂದ್ರ ಗೃಹ ಸಚಿವಾಲಯ ಅನುಮೋದನೆ ನೀಡಿತ್ತು ಎಂದರು.

ಈಗ ಬಡ್ತಿ ಪಡೆದಿರುವ 2,600 ಸಿಬ್ಬಂದಿಯು 1983 ಮತ್ತು 2004ರ ನಡುವೆ ನೇಮಕ ಆದವರು. ಉಳಿದ ಸಿಬ್ಬಂದಿಗೆ ಸೂಕ್ತ ಸಮಯದಲ್ಲಿ ಬಡ್ತಿ ದೊರೆಯುತ್ತದೆ ಎಂದು ಹೇಳಿದರು.

ಸ್ಟೊಯಿನಿಸ್ ಆಲ್‌ರೌಂಡ್ ಆಟ

ಮಿಚೆಲ್ ಸ್ಟಾರ್ಕ್‌ಗೆ 2 ವಿಕೆಟ್: ಆಸ್ಟ್ರೇಲಿಯಾಕ್ಕೆ ಒಮಾನ್ ವಿರುದ್ಧ ಜಯ



36 ಎಸೆತ
67 ರನ್

ಚೆಂಡನ್ನು ಸಿಕ್ಸರ್‌ಗಟ್ಟಿದ ಮಾರ್ಕಸ್ ಸ್ಟೊಯಿನಿಸ್ ಪಿಟಿಐ ಚಿತ್ರ

ಬ್ರಿಜ್‌ಟೌನ್, ಬಾರ್ಬಡೋಸ್ (ಎಎಫ್‌ಪಿ): ಮಾರ್ಕಸ್ ಸ್ಟೊಯಿನಿಸ್ ಅವರ ಅಮೋಘ ಆಲ್‌ರೌಂಡ್ ಪ್ರದರ್ಶನದ ಬಲದಿಂದ ಪ್ರಬಲ ಆಸ್ಟ್ರೇಲಿಯಾ ತಂಡ, 'ಬಿ' ಗುಂಪಿನ ಪಂದ್ಯದಲ್ಲಿ ಗುರುವಾರ ಒಮಾನ್ ತಂಡದ ಮೇಲೆ 39 ರನ್‌ಗಳ ಜಯ ಸಾಧಿಸಿ ಟಿ20 ವಿಶ್ವಕಪ್ ಅಭಿಯಾನ ಆರಂಭಿಸಿತು.

ಸ್ಟೊಯಿನಿಸ್ ಪಂದ್ಯದ ಗತಿಯನ್ನೇ ಬದಲಾಯಿಸುವಂಥ ಆಟವಾಡಿ ಕೇವಲ 36 ಎಸೆತಗಳಲ್ಲಿ ಅಜೇಯ 67 ರನ್ ಬಾರಿಸಿದರು. ಕೆನ್ಸಿಂಗ್‌ಟನ್ ಓವಲ್‌ನಲ್ಲಿ ಆಸ್ಟ್ರೇಲಿಯಾ 5 ವಿಕೆಟ್‌ಗೆ 164 ರನ್ ಗಳಿಸಲು ಅವರ ಈ ಆಟ ನೆರವಾಯಿತು. ನಂತರ ಅವರು 19 ರನ್ನಿಗೆ 3 ವಿಕೆಟ್ ಪಡೆದು ಒಮಾನ್ ತಂಡವನ್ನು 9 ವಿಕೆಟ್‌ಗೆ 125 ರನ್‌ಗಳಿಗೆ ಕಟ್ಟಿಹಾಕಲು ಕಾರಣರಾದರು.

ಸ್ಟೊಯಿನಿಸ್ ಮಿಂಚಿನ ಆಟದಲ್ಲಿ ಆರು ಭರ್ಜರಿ ಸಿಕ್ಸರ್‌ಗಳ ಜೊತೆ ಎರಡು ಬೌಂಡರಿಗಳಿದ್ದವು. ಒಂದು ಹಂತದಲ್ಲಿ ಆಸ್ಟ್ರೇಲಿಯಾ 8.2 ಓವರುಗಳಲ್ಲಿ 3 ವಿಕೆಟ್‌ಗೆ 50 ರನ್ ಗಳಿಸಿ ಪರದಾಡುತಿತ್ತು.

ವೇಗದ ಬೌಲರ್ ಮೆಹ್ರಾನ್ ಖಾನ್ ಇನಿಂಗ್ಸ್‌ನ 9ನೇ ಓವರಿನ ಸತತ ಎಸೆತಗಳಲ್ಲಿ ಮಿಚೆಲ್ ಮಾರ್ಷ್ (14) ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ (0) ಅವರ ವಿಕೆಟ್‌ಗಳನ್ನು ಪಡೆದು ಬಲಿಷ್ಠ ಎದುರಾಳಿಗೆ ಪೆಟ್ಟು ನೀಡಿದ್ದರು.

ಈ ಹಂತದಲ್ಲಿ ಅರ್ಧ ಶತಕದ ಆಟವಾಡಿದ ಡೇವಿಡ್ ವಾರ್ನರ್ (56, 51ಎಸೆತ, 4x6, 6x1) ಮತ್ತು ಸ್ಟೊಯಿನಿಸ್ ನಾಲ್ಕನೇ ವಿಕೆಟ್‌ಗೆ 101 ರನ್ ಸೇರಿಸಿ ತಂಡವನ್ನು ಸುರಕ್ಷಿತ ಮೊತ್ತದತ್ತ ತಲುಪಿಸಿದರು. ಪಂದ್ಯ ಒಮಾನಿಯರ ಕೈಜಾರಿತು. ಮೆಹ್ರಾನ್ ಮಾಡಿದ ಪಂದ್ಯದ 15ನೇ ಓವರಿನಲ್ಲಿ ಸ್ಟೊಯಿನಿಸ್ ನಾಲ್ಕು ಸಿಕ್ಸರ್ ಸಿಡಿಸಿದರು.

19ನೇ ಓವರಿನಲ್ಲಿ ವಾರ್ನರ್ ನಿರ್ಗಮಿಸಿದರು. ಆಸ್ಟ್ರೇಲಿಯಾ ಇನಿಂಗ್ಸ್‌ನ ಅರ್ಧದಷ್ಟು ರನ್‌ಗಳು ಕೊನೆಯ ಆರು ಓವರುಗಳಲ್ಲಿ ಹರಿದುಬಂದವು.

ವಾರ್ನರ್ ಈ ಆಟದ ಮೂಲಕ, ಟಿ20 ಕ್ರಿಕೆಟ್‌ನಲ್ಲಿ 3,155 ರನ್ ಗಳಿಸಿದಂತಾಗಿದೆ. ಅವರು ಆ್ಯರನ್ ಫಿಂಚ್ (3,120) ಅವರನ್ನು ಹಿಂದೆಹಾಕಿ ಆಸ್ಟ್ರೇಲಿಯಾ ಪರ ಈ ಮಾದರಿಯ ಯಶಸ್ವಿ ಬ್ಯಾಟ್ಸ್‌ಮನ್ ಎನಿಸಿದರು.

ನಮೀಬಿಯಾ ವಿರುದ್ಧ ಕಳೆದ ಪಂದ್ಯವನ್ನು ಸೂಪರ್ ಓವರ್‌ನಲ್ಲಿ ಸೋತಿದ್ದ ಒಮಾನ್, ಈ ಪಂದ್ಯದಲ್ಲಿ ಟ್ರಾವಿಸ್ ಹೆಡ್ ಅವರ ವಿಕೆಟ್ ಬೇಗನೇ ಪಡೆದು ಹೋರಾಟಕ್ಕೆ ಅಣಿಯಾದಂತೆ ಕಂಡಿತು. ಮಾರ್ಷ್, ಮ್ಯಾಕ್ಸ್‌ವೆಲ್ ಕೂಡ ಹೆಚ್ಚುಹೊತ್ತು ನಿಲ್ಲಲಿಲ್ಲ. ಆದರೆ ಅನುಭವಿ ಆಸ್ಟ್ರೇಲಿಯಾ ಇದರಿಂದ ವಿಚಲಿತವಾಗಲಿಲ್ಲ.

ಆಸ್ಟ್ರೇಲಿಯಾದ ವೇಗಿ ಮಿಚೆಲ್ ಸ್ಟಾರ್ಕ್, ಸ್ನಾಯು ಸೆಳೆತದಿಂದ ಮೈದಾನದಿಂದ ನಿರ್ಗಮಿಸುವ ಮೊದಲು ಎರಡು ವಿಕೆಟ್‌ಗಳನ್ನು ಬೇಗನೇ ಪಡೆದು ಒಮಾನ್‌ಗೆ ಹೊಡೆತ ನೀಡಿದರು. ಅಯಾನ್ ಖಾನ್ (36, 30ಎಸೆತ) ಕೆಲಮಟ್ಟಿಗೆ ಪ್ರತಿರೋಧ ತೋರಿದರು. ಮೆಹ್ರಾನ್ ಕೂಡ ಬ್ಯಾಟ್ ಬೀಸಿ 27 ರನ್‌ಗಳ ಕೊಡುಗೆ ನೀಡಿದ ಪರಿಣಾಮ ತಂಡ ನೂರರ ಗಡಿ ದಾಟಿತು.

ವೇಗಿ ನಥಾನ್ ಎಲಿಸ್ ಮತ್ತು ಸ್ಪಿನ್ನರ್ ಜಂಪಾ ತಲಾ ಎರಡು ವಿಕೆಟ್‌ಗಳನ್ನು ಪಡೆದರು.

ಸ್ಕೋರುಗಳು: ಆಸ್ಟ್ರೇಲಿಯಾ: 20 ಓವರುಗಳಲ್ಲಿ 5 ವಿಕೆಟ್‌ಗೆ 164 (ವಾರ್ನರ್ 56, ಟ್ರಾವಿಸ್ ಹೆಡ್ 12, ಮಿಚೆಲ್ ಮಾರ್ಷ್ 14; ಸ್ಟೊಯಿನಿಸ್ ಔಟಾಗದೇ 67; ಬಿಲಾಲ್ ಖಾನ್ 36ಕ್ಕೆ1, ಮೆಹ್ರಾನ್ ಖಾನ್ 38ಕ್ಕೆ2); ಒಮಾನ್: 20 ಓವರುಗಳಲ್ಲಿ 9 ವಿಕೆಟ್‌ಗೆ 125 (ಅಕಿಬ್ ಇಲ್ಯಾಸ್ 18, ಅಯಾನ್ ಖಾನ್ 36, ಮೆಹ್ರಾನ್ ಖಾನ್ 27, ಶಕೀಲ್ ಅಹ್ಮದ್ 11; ಮಿಚೆಲ್ ಸ್ಟಾರ್ಕ್ 20ಕ್ಕೆ2, ನಥಾನ್ ಎಲ್ಲಿಸ್ 28ಕ್ಕೆ2, ಮಾರ್ಕಸ್ ಸ್ಟೊಯಿನಿಸ್ 19ಕ್ಕೆ3, ಆ್ಯಡಂ ಜಂಪಾ 24ಕ್ಕೆ2).

ಪಂದ್ಯ ಶ್ರೇಷ್ಠ: ಮಾರ್ಕಸ್ ಸ್ಟೊಯಿನಿಸ್

ಸೂಪರ್ ಓವರ್‌ನಲ್ಲಿ ಬಾಬರ ಬಳಗಕ್ಕೆ ಮುಖಭಂಗ

ಪಾಕ್‌ಗೆ ಅಮೆರಿಕ ಆಘಾತ

ಅಮೆರಿಕದ ಆ್ಯರನ್ ಜೋನ್ಸ್ ಬ್ಯಾಟಿಂಗ್ ವೈಖರಿ. ಎಎಫ್‌ಪಿ ಚಿತ್ರ

ಡಲ್ಲಾಸ್ (ಪಿಟಿಐ): ರೋಚಕವಾಗಿದ್ದ ಪಂದ್ಯದಲ್ಲಿ ಕ್ರಿಕೆಟ್ ಕೂಸು ಆತಿಥೇಯ ಅಮೆರಿಕ ಸೂಪರ್ ಓವರ್‌ನಲ್ಲಿ ಪಾಕಿಸ್ತಾನ ತಂಡಕ್ಕೆ ಸೋಲಿನ ಆಘಾತ ನೀಡಿ ಇತಿಹಾಸ ನಿರ್ಮಿಸಿತು. ವಿಶ್ವಕಪ್ ಎ ಗುಂಪಿನ ಪಂದ್ಯದಲ್ಲಿ ಅಮೆರಿಕ ಎರಡನೇ ಜಯ ದಾಖಲಿಸಿತು.

ಗ್ರ್ಯಾಂಡ್ ಪ್ರಯರಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಅಮೆರಿಕ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.

ಪಾಕಿಸ್ತಾನ ತಂಡ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 159 ರನ್ ಗಳಿಸಿತು. ಇದಕ್ಕೆ ಉತ್ತರವಾಗಿ ಭರ್ಜರಿ ಆಟ ಆರಂಭಿಸಿದ ಅಮೆರಿಕ ನಿಗದಿ ಓವರ್‌ಗಳಲ್ಲೇ ಗೆಲ್ಲುವಂತೆ ಕಂಡಿತು. ನಾಯಕ ಮೊನಾಂಕ್ ಪಟೇಲ್ (50), ಆ್ಯಂಡ್ರಿಸ್ ಗೌಸ್ (35), ಆ್ಯರನ್ ಜೋನ್ಸ್ ಔಟಾಗದೇ 36) ಅವರ ಉಪಯುಕ್ತ ಆಟದ ನೆರವಿನಿಂದ ಗೆಲುವಿನತ್ತ ಹೆಜ್ಜೆ ಇಟ್ಟಿತು. ಕೊನೆ ಓವರ್‌ನಲ್ಲಿ ಗೆಲುವಿಗೆ 15 ರನ್ ಬೇಕಿತ್ತು. ಆದರೆ 14 ರನ್ ಗಳಿಸಿದ್ದರಿಂದ ಪಂದ್ಯ ಸೂಪರ್ ಓವರ್‌ಗೆ ಬೆಳೆಯಿತು.

ಅನುಭವಿ ಎಡಗೈ ವೇಗಿ ಮೊಹಮದ್ ಅಮೀರ್ ಮಾಡಿದ ಸೂಪರ್ ಓವರ್‌ನಲ್ಲಿ ಅಮೆರಿಕ ಒಂದು ವಿಕೆಟ್‌ಗೆ 18 ರನ್ ಗಳಿಸಿತು. ಅಮೀರ್ ಮೂರು ವೈಡ್ ನೀಡಿದ ಜೊತೆಗೆ ಓವರ್ ಥ್ರೋಗಳು ಕೂಡ ಪಾಕಿಸ್ತಾನ ತಂಡಕ್ಕೆ ದುಬಾರಿಯಾದವು. ಉತ್ತರವಾಗಿ ಸೌರಭ್ ನೇತ್ರವಾಲ್ಕರ್ ಅವರು ಮಾಡಿದ ಓವರ್‌ನಲ್ಲಿ ಪಾಕಿಸ್ತಾನ ತಂಡ 13 ರನ್ ಗಳಿಸಲಷ್ಟೇ ಶಕ್ತವಾಯಿತು. ಮೂರನೇ ಎಸೆತದಲ್ಲಿ ನಿತೀಶ್ ಉತ್ತಮ ಕ್ಯಾಚ್ ಹಿಡಿದರು.

ನಾಯಕ ಬಾಬರ್ ಆಜಂ (44;43ಎ, 4x3, 6x2) ಮತ್ತು ಶಾದಾಬ್ ಖಾನ್ (40;25ಎ, 4x1, 6x3) ತಂಡಕ್ಕೆ ಚೇತರಿಕೆ ನೀಡಿದರು.

ಮೂಡಿಗೆರೆ ಮೂಲದ ನಾಸ್ತುಷ್ ಕಂಜಿಗೆ ಮೂರು ವಿಕೆಟ್ ಪಡೆದು ಮಿಂಚಿದರು. ಸೌರಭ್ ಎರಡು ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರ್: ಪಾಕಿಸ್ತಾನ: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 159 (ಬಾಬರ್ ಆಜಂ 44, ಶಾದಾಬ್ ಖಾನ್ 40, ಶಾಹೀನ್ ಶಾ ಆಫ್ರಿದಿ ಔಟಾಗದೇ 23; ನಾಸ್ತುಷ್ ಕೆಂಜಿಗೆ 30ಕ್ಕೆ 3, ಸೌರಭ್ ನೇತ್ರಾಳ್ವಕರ್ 18ಕ್ಕೆ 2) ಅಮೆರಿಕ 20 ಓವರ್‌ಗಳಲ್ಲಿ 3 ವಿಕೆಟ್‌ಗೆ 159 (ಮೊನಾಂಕ್ ಪಟೇಲ್ 50, ಆ್ಯಂಡ್ರಿಸ್ ಗೌಸ್ 35, ಆ್ಯರನ್ ಜೋನ್ಸ್ ಔಟಾಗದೇ 36, ಮೊಹಮದ್ ಅಮೀರ್ 25ಕ್ಕೆ1, ನಸೀಮ್ ಶಾ 26ಕ್ಕೆ1) ಪಂದ್ಯ ಶ್ರೇಷ್ಠ: ಮೊನಾಂಕ್ ಪಟೇಲ್

ಇಂದಿನ ಪಂದ್ಯ
ಕೆನಡಾ Vs ಐರ್ಲೆಂಡ್ (ರಾತ್ರಿ 8)
ಲೈವ್ ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಡಿಡಿ ಸ್ಪೋರ್ಟ್ಸ್, ಹಾಟ್ ಸ್ಟಾರ್

ಯುಗಾಂಡಕ್ಕೆ ಚೊಚ್ಚಲ ಜಯ

ಗಯಾನ (ಎಪಿ): 'ಕ್ರಿಕೆಟ್ ಶಿಶು'ಗಳ ಸೆಣಸಾಟದಲ್ಲಿ ಯುಗಾಂಡ ತಂಡವು ಗುರುವಾರ ಪಾಪುವಾ ನ್ಯೂಗಿನಿ ತಂಡವನ್ನು ಮೂರು ವಿಕೆಟ್‌ಗಳಿಂದ ಮಣಿಸಿತು.

ಟಿ20 ವಿಶ್ವಕಪ್‌ಗೆ ಪದಾರ್ಪಣೆ ಮಾಡಿರುವ ಯುಗಾಂಡಗೆ ಇದು ಚೊಚ್ಚಲ ಗೆಲುವು.

ಇಲ್ಲಿನ ಪ್ರಾವಿಡೆನ್ಸ್ ಕ್ರೀಡಾಂಗಣದಲ್ಲಿ ನಡೆದ 'ಸಿ' ಗುಂಪಿನ ಪಂದ್ಯದಲ್ಲಿ ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ನ್ಯೂಗಿನಿ ತಂಡದ ಬ್ಯಾಟರ್‌ಗಳು ಎದುರಾಳಿ ತಂಡದ ಬೌಲಿಂಗ್ ದಾಳಿಗೆ ತತ್ತರಿಸಿ ಕೊನೆಯ ಓವರಿನ ಮೊದಲ ಎಸೆತದಲ್ಲಿ 77 ರನ್‌ಗಳಿಗೆ ಪತನಗೊಂಡಿತು.

ಅಲ್ಪ ಮೊತ್ತದ ಗುರಿ ತಲುಪಲು ಯುಗಾಂಡ ತಂಡವು ಪ್ರಯಾಸಪಟ್ಟಿತು. ರಿಯಾಜತ್ ಅಲಿ ಶಾ ಗಳಿಸಿದ 33 ರನ್‌ಗಳ ನೆರವಿನಿಂದ ತಂಡವು 10 ಎಸೆತ ಬಾಕಿ ಇರುವಂತೆ 7 ವಿಕೆಟ್‌ಗೆ 78 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರ್: ಪಾಪುವಾ ನ್ಯೂಗಿನಿ: 19.1 ಓವರ್‌ಗಳಲ್ಲಿ 77 (ಹಿರಿ ಹಿರಿ 15; ಅಲ್ಪೇಶ್ ರಾಮ್ಜಾನಿ 17ಕ್ಕೆ 2, ಕಾಸ್ಮಾಸ್ ಕ್ಯೆವುಟಾ 17ಕ್ಕೆ 2, ಜುಮಾ ಮಿಯಾಗಿ 10ಕ್ಕೆ 2, ಫ್ರಾಂಕ್ ನ್ಸುಬುಗಾ 4ಕ್ಕೆ 2); ಯುಗಾಂಡ: 18.2 ಓವರ್‌ಗಳಲ್ಲಿ 7 ವಿಕೆಟ್‌ಗೆ 78 (ರಿಯಾಜತ್ ಅಲಿ ಶಾ 33; ಅಲಿ ನಾವೊ 16ಕ್ಕೆ 2, ನಾರ್ಮನ್ ವನುವಾ 19ಕ್ಕೆ 2). **ಪಂದ್ಯದ ಆಟಗಾರ: ರಿಯಾಜತ್ ಅಲಿ ಶಾ.**

ಬ್ಯಾಡ್ಮಿಂಟನ್: ಕ್ವಾರ್ಟರ್‌ಗೆ ಲಕ್ಷ್ಯ ಸೇನ್

ಜಕಾರ್ತ (ಪಿಟಿಐ): ಭಾರತದ ಲಕ್ಷ್ಯ ಸೇನ್ ಅವರು ಇಂಡೊನೇಷ್ಯಾ ಓಪನ್ ಸೂಪರ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಸೇನ್ ಅವರು 16 ಘಟ್ಟದ ಪಂದ್ಯದಲ್ಲಿ 21-9, 21-15 ರಿಂದ ಜಪಾನ್‌ನ ಕೆಂಟಾ ನಿಶಿಮೊಟೊ ಅವರನ್ನು ಹಿಮ್ಮೆಟ್ಟಿಸಿದರು.

ಸರಬ್ಜೋತ್ ಚಿನ್ನದ ಸಾಧನೆ

ಸರಬ್ಜೋತ್

ಮ್ಯೂನಿಚ್ (ಪಿಟಿಐ): ಭಾರತದ ಸರಬ್ಜೋತ್ ಸಿಂಗ್ ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವಕಪ್ ಪುರುಷರ 10 ಮೀಟರ್ ಏರ್‌ಪಿಸ್ತೂಲ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದರು. ಹಾಲಿ ವಿಶ್ವ ಚಾಂಪಿಯನ್ ಮತ್ತು ನಾಲ್ಕು ಬಾರಿ ಒಲಿಂಪಿಯನ್ ಭಾಗವಹಿಸಿದ್ದ ಈ ಸ್ಪರ್ಧೆಯಲ್ಲಿ ಸಿಂಗ್ ಉತ್ತಮ ಸಾಧನೆ ಮಾಡಿದ್ದಾರೆ.

ಎಂಟು ಸ್ಪರ್ಧಿಗಳ ಫೈನಲ್‌ನಲ್ಲಿ 22 ವರ್ಷದ ಭಾರತದ ಸ್ಪರ್ಧಿ 242.7 ಅಂಕಗಳನ್ನು ಗಳಿಸಿ ತಮ್ಮ ಸಮೀಪದ ಪ್ರತಿಸ್ಪರ್ಧಿ ಚೀನಾದ ಬು ಶುವೈಹಾಂಗ್ ಅವರನ್ನು 0.2 ಅಂಕಗಳಿಂದ ಹಿಂದಿಕ್ಕಿದರು. ಜರ್ಮನಿಯ ರಾಬಿನ್ ವಾಲ್ಟರ್ ಅವರು ಕಂಚಿನ ಪದಕ ಗೆದ್ದರು.

ಸರಬ್ಜೋತ್ ಬುಧವಾರ 588 ಅಂಕಗಳನ್ನು ಗಳಿಸಿ ನಿರ್ಣಾಯಕ ಪಂದ್ಯಕ್ಕೆ ಅರ್ಹತೆ ಪಡೆದಿದ್ದರು. ಫೈನಲ್‌ನಲ್ಲಿ ಹಾಲಿ ವಿಶ್ವ ಚಾಂಪಿಯನ್ ಚೀನಾದ ಬೊವೆನ್ ಜಾಂಗ್ ಮತ್ತು ನಾಲ್ಕು ಬಾರಿ ಒಲಿಂಪಿಯನ್ ಟರ್ಕಿಯ ಯೂಸುಫ್ ಡಿಕೆಕ್, ಬು ಮತ್ತು ವಾಲ್ಟರ್ ಇದ್ದರು.

ಹೋದ ವರ್ಷ ಸರಬ್ಜೋತ್ ಅವರು ಭೋಪಾಲ್‌ನಲ್ಲಿ ಚಿನ್ನದ ಸಾಧನೆ ಮಾಡಿದ್ದರು.

ಕುಸ್ತಿ: ಫೈನಲ್‌ಗೆ ಅಮನ್ ಸೆಹ್ರಾವತ್

ಅಮನ್ ಸೆಹ್ರಾವತ್

ಬುಡಾಪೆಸ್ಟ್ (ಪಿಟಿಐ): ಭಾರತದ ಕುಸ್ತಿಪಟು ಅಮನ್ ಸೆಹ್ರಾವತ್ ಗುರುವಾರ ಬುಡಾಪೆಸ್ಟ್ ರ‍್ಯಾಂಕಿಂಗ್ ಸರಣಿಯ 57 ಕೆ.ಜಿ ಫ್ರೀಸ್ಟೈಲ್ ವಿಭಾಗದಲ್ಲಿ ರಷ್ಯಾ-ಬೆಲಾರಸ್‌ನ ಆರ್ಯನ್ ಸಿಯುಟ್ರಿನ್ ಅವರನ್ನು 14-4 ತಾಂತ್ರಿಕ ಶ್ರೇಷ್ಠತೆ ಆಧಾರದಲ್ಲಿ ಸೋಲಿಸಿ ಫೈನಲ್ ಪ್ರವೇಶಿಸಿದರು.

ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿರುವ ಅಮನ್ ಅವರು ಚಿನ್ನದ ಪದಕಕ್ಕಾಗಿ ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತ ಜಪಾನ್‌ನ ರೇ ಹಿಗುಚಿ ಅವರನ್ನು ಎದುರಿಸಲಿದ್ದಾರೆ.

ಈ ಟೂರ್ನಿಯು ಅಮನ್ ಅವರಿಗೆ ತಮ್ಮ ರ‍್ಯಾಂಕಿಂಗ್ ಸುಧಾರಿಸಲು ಮತ್ತು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಉತ್ತಮ ಡ್ರಾ ಪಡೆಯಲು ಸಹಾಯ ಮಾಡುತ್ತದೆ.

ಅಂಬಿಕಾ ದಾಖಲೆ; ಜ್ಯೋತಿಕಾ, ಅಭಿನ್‌ಗೆ ಚಿನ್ನ

ರಾಜ್ಯ ಅಥ್ಲೆಟಿಕ್ ಕೂಟ: 200 ಮೀಟರ್ಸ್ ಓಟದಲ್ಲಿ ಹಶ್ಮಿತ್, ರೀತುಶ್ರೀಗೆ ಸ್ವರ್ಣ

ಪ್ರಜಾವಾಣಿ ವಾರ್ತೆ

ಅಂಬಿಕಾ

ಅಭಿನ್ ದೇವಾಡಿಗ

ಜ್ಯೋತಿಕಾ

ಉಡುಪಿ: ಮಳೆ ಸುರಿದು ಹಿತಕರವಾಗಿದ್ದ ವಾತಾವರಣದಲ್ಲಿ ಭುಜಬಲ ತೋರಿದ ಮೈಸೂರಿನ ಅಂಬಿಕಾ ವಿ, ಇಲ್ಲಿನ ಅಜ್ಜರಕಾಡು ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ದಾಖಲೆ ಉತ್ತಮಪಡಿಸಿ ನಗೆ ಸೂಸಿದರು.

ಕರ್ನಾಟಕ ಅಥ್ಲೆಟಿಕ್ ಸಂಸ್ಥೆ (ಕೆಎಎ), ಜಿಲ್ಲಾ ಅಥ್ಲೆಟಿಕ್ ಸಂಸ್ಥೆ ಆಶ್ರಯದಲ್ಲಿ ಗುರುವಾರ ಆರಂಭಗೊಂಡ ರಾಜ್ಯ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಮಹಿಳೆಯರ ವಿಭಾಗದ ಶಾಟ್‌ಪಟ್‌ನಲ್ಲಿ ಅವರು 14.70 ಮೀಟರ್ಸ್ ಸಾಧನೆಯೊಂದಿಗೆ ತಮ್ಮದೇ ಹೆಸರಿನಲ್ಲಿದ್ದ ಕೂಟ ದಾಖಲೆ ಮುರಿದರು. ಮೈಸೂರಿನ ವೀನಸ್ ಥ್ರೋವರ್ಸ್‌ನ ಮೋಹನ್ ಕುಮಾರ್ ಬಳಿ ತರಬೇತಿ ಪಡೆಯುತ್ತಿರುವ ಅಂಬಿಕಾ ಕಳೆದ ವರ್ಷ ಬೆಂಗಳೂರಿನಲ್ಲಿ ನಡೆದ ಕೂಟದಲ್ಲಿ 14.04 ದೂರ ಎಸೆದು ದಾಖಲೆ ನಿರ್ಮಿಸಿದ್ದರು.

ಪುರುಷರ 200 ಮೀಟರ್ಸ್ ಓಟದಲ್ಲಿ ಉಡುಪಿಯ ಅಭಿನ್ ದೇವಾಡಿಗ ಚಿನ್ನ ಗೆದ್ದರು. ಬೆಂಗಳೂರಿನ ಜ್ಯೋತಿಕಾ ಮಹಿಳೆಯರ ವಿಭಾಗದ 200 ಮೀಟರ್ಸ್‌ನಲ್ಲಿ ಮೊದಲಿಗರಾದರು. ಯೂತ್ ವಿಭಾಗದ 200 ಮೀಟರ್ಸ್‌ನಲ್ಲಿ ದಕ್ಷಿಣ ಕನ್ನಡದ ಹಶ್ಮಿತ್ ಸಾಲಿಯಾನ್ ಮತ್ತು ರೀತುಶ್ರೀ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ವಿಭಾಗದ ಚಿನ್ನ ತಮ್ಮದಾಗಿಸಿಕೊಂಡರು.

ಮೊದಲ ದಿನದ ಫಲಿತಾಂಶಗಳು (ಚಿನ್ನ ಮಾತ್ರ): ಪುರುಷರ 100 ಮೀ ಓಟ: ಅಭಿನ್ ದೇವಾಡಿಗ (ಉಡುಪಿ)–1. ಕಾಲ: 21.23 ಸೆ; 800 ಮೀ: ತುಷಾರ್ ವಾಸನ್ (ಬೆಂಗಳೂರು)–1. ಕಾಲ: 1ನಿ, 51.1 ಸೆ; 5000 ಮೀ: ಶಿವಾಜಿ ಪಿ (ಉತ್ತರ ಕನ್ನಡ)–1.ಕಾಲ: 14ನಿ 41.6 ಸೆ; 110 ಮೀ ಹರ್ಡಲ್ಸ್: ಸುಶಾಂತ್ ಎಂ.ಡಿ (ಉಡುಪಿ)–1. ಕಾಲ: 15 ಸೆ; ಹೈಜಂಪ್: ಸುದೀಪ್ (ಶಿವಮೊಗ್ಗ)–1. ಎತ್ತರ: 1.80 ಮೀ; ಲಾಂಗ್ ಜಂಪ್: ಸಿದ್ಧಾರ್ಥ ಮೋಹನ್ ನಾಯಕ್ (ಬೆಂಗಳೂರು)–1. ಅಂತರ: 7.28ಮೀ; ಶಾಟ್‌ಪಟ್: ಮೊಹಮ್ಮದ್ ಸಕ್ಲೈನ್ ಅಹ ಮ್ಮದ್ (ಮೈಸೂರು)–1. ದೂರ: 16.10 ಮೀ; ಹ್ಯಾಮರ್ ಥ್ರೋ: ಧೀರಜ್ ಪೂಜಾರಿ (ಬೆಂಗಳೂರು)–1. ದೂರ: 54.90 ಮೀ.

ಮಹಿಳೆಯರು: 200 ಮೀ: ಜ್ಯೋತಿಕಾ (ಬೆಂಗಳೂರು)–1. ಕಾಲ: 24.26 ಸೆ; 800 ಮೀ: ವಿಜಯಕುಮಾರಿ ಜಿ.ಕೆ (ಬೆಂಗಳೂರು)–1.ಕಾಲ: 2ನಿ 11.2 ಸೆ; 5000 ಮೀ: ಕೆ.ಎಂ.ಲಕ್ಷ್ಮಿ (ದಕ್ಷಿಣ ಕನ್ನಡ)–1. ಕಾಲ: 17ನಿ 43.9ಸೆ; 100 ಮೀ ಹರ್ಡಲ್ಸ್: ಅಂಜಲಿ ಸಿ (ದಕ್ಷಿಣ ಕನ್ನಡ)–1. ಕಾಲ: 13.8 ಸೆ; ಲಾಂಗ್‌ಜಂಪ್: ಶ್ರೀದೇವಿಕಾ ವಿ.ಎಸ್ (ದಕ್ಷಿಣ ಕನ್ನಡ)–1. ಅಂತರ: 5.73 ಮೀ; ಜಾವೆಲಿನ್ ಥ್ರೋ: ರಮ್ಯಶ್ರೀ ಜೈನ್ (ದಕ್ಷಿಣ ಕನ್ನಡ)–1. ದೂರ: 51.77ಮೀ; ಶಾಟ್‌ಪಟ್: ಅಂಬಿಕಾ (ಮೈಸೂರು)–1, 14.70 ಮೀ; ಹ್ಯಾಮರ್ ಥ್ರೋ: ಅಮ್ರೀನ್ (ದಕ್ಷಿಣ ಕನ್ನಡ)–1. ದೂರ: 44.90 ಮೀ.

ಫ್ರೆಂಚ್ ಓಪನ್: ಶ್ವಾಂಟೆಕ್, ಜಾಸ್ಮಿನ್ ಫೈನಲ್‌ಗೆ

ಗೆಲುವಿನ ಸಂಭ್ರಮದಲ್ಲಿ ಇಗಾ ಶ್ವಾಂಟೆಕ್ –ಪಿಟಿಐ ಚಿತ್ರ

ಪ್ಯಾರಿಸ್ (ಎಪಿ): ಅಗ್ರ ಶ್ರೇಯಾಂಕದ ಇಗಾ ಶ್ವಾಂಟೆಕ್ ಅವರು ಗುರುವಾರ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ 6-2, 6-4 ಸೆಟ್‌ಗಳಿಂದ ಮೂರನೇ ಶ್ರೇಯಾಂಕದ ಕೊಕೊ ಗಾಫ್ ಅವರನ್ನು ಮಣಿಸಿ ಫೈನಲ್‌ಗೆ ಲಗ್ಗೆ ಹಾಕಿದರು. ಅಲ್ಲದೆ, ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಗೆಲುವಿನ ಸರಣಿಯನ್ನು 20 ಪಂದ್ಯಗಳಿಗೆ ವಿಸ್ತರಿಸಿದರು.

ಪೋಲೆಂಡ್‌ನ 23 ವರ್ಷ ವಯಸ್ಸಿನ ಶ್ವಾಂಟೆಕ್, ಕಳೆದ ಐದು ವರ್ಷಗಳಲ್ಲಿ ಇಲ್ಲಿ ನಾಲ್ಕನೇ ಬಾರಿ ಫೈನಲ್ ಪ್ರವೇಶಿಸಿದರು.

ಒಂದೊಮ್ಮೆ ಶ್ವಾಂಟೆಕ್ ಪ್ರಶಸ್ತಿ ಗೆದ್ದಲ್ಲಿ ಬೆಲ್ಜಿಯಂನ ಜಸ್ಟಿನ್ ಹೆನಿನ್ (2007-09) ಅವರ ಸತತ ಮೂರು ಪ್ರಶಸ್ತಿ ಗೆದ್ದ ದಾಖಲೆಯನ್ನು ಸರಿಗಟ್ಟಿದಂತಾಗುತ್ತದೆ.

ಅಮೆರಿಕ ಓಪನ್ ಚಾಂಪಿಯನ್ ಗಾಫ್ ವಿರುದ್ಧ ಶ್ವಾಂಟೆಕ್ ಗೆಲುವಿನ ದಾಖಲೆಯನ್ನು 11-1ಕ್ಕೆ ಸುಧಾರಿಸಿಲು ಹೆಚ್ಚಿಸಿದರು. 2022ರ ಆವೃತ್ತಿಯ ಫೈನಲ್ ಮತ್ತು ಕಳೆದ ವರ್ಷ ಕ್ವಾರ್ಟರ್ ಫೈನಲ್ ಸೇರಿದಂತೆ ಸತತ ಮೂರು ವರ್ಷ ಕ್ಲೇ ಕೋರ್ಟ್ ಗ್ಲ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಅಮೆರಿಕದ ಆಟಗಾರ್ತಿಯನ್ನು ಶ್ವಾಂಟೆಕ್ ಹಿಮ್ಮೆಟ್ಟಿಸಿದರು.

ಶ್ವಾಂಟೆಕ್ ಶನಿವಾರ ಫೈನಲ್‌ನಲ್ಲಿ 12ನೇ ಶ್ರೇಯಾಂಕದ ಇಟಲಿಯ ಜಾಸ್ಮಿನ್ ಪಾವ್ಲೋನಿ ಅವರನ್ನು ಎದುರಿಸುವರು. ಜಾಸ್ಮಿನ್ ಮತ್ತೊಂದು ಸೆಮಿಫೈನಲ್‌ನಲ್ಲಿ 6-3, 6-1ರಿಂದ ರಷ್ಯಾದ ಮಿರಾ ಆ್ಯಂಡ್ರೀವಾ ಅವರನ್ನು ಮಣಿಸಿದರು.

ರೋಹನ್-ಎಬ್ಡೆನ್ ಜೋಡಿಗೆ ಸೋಲು: ಆಸ್ಟ್ರೇಲಿಯಾ ಓಪನ್ ಚಾಂಪಿಯನ್ ಜೋಡಿಯಾದ ರೋಹನ್ ಬೋಪಣ್ಣ ಮತ್ತು ಮ್ಯಾಥ್ಯು ಎಬ್ಡೆನ್ ಪುರುಷರ ಡಬಲ್ಸ್‌ನ ಸೆಮಿಫೈನಲ್‌ನಲ್ಲಿ ಮುಗ್ಗರಿಸಿದರು.

ಎರಡನೇ ಶ್ರೇಯಾಂಕದ ಭಾರತ- ಆಸ್ಟ್ರೇಲಿಯನ್ ಜೋಡಿಯು 5-7, 6-2, 2-6 ಸೆಟ್‌ಗಳಿಂದ 11ನೇ ಶ್ರೇಯಾಂಕದ ಸಿಮೋನ್ ಬೊಲೆಲ್ಲಿ ಮತ್ತು ಆಂಡ್ರಿಯಾ ವವಸ್ಸೋರಿ ಅವರಿಗೆ ಮಣಿಯಿತು.

ವಿದಾಯ ಪಂದ್ಯವಾಡಿದ ನಾಯಕ ಸುನಿಲ್ ಚೆಟ್ರಿಗೆ ಸಿಗದ ಗೆಲುವಿನ ಕಾಣಿಕೆ

ಕುವೈತ್ ವಿರುದ್ಧ ಪಂದ್ಯ ಗೋಲಿಲ್ಲದೇ ಡ್ರಾ

ಕೋಲ್ಕತ್ತ (ಪಿಟಿಐ): ಫುಟ್‌ಬಾಲ್‌ನ ದಿಗ್ಗಜ ಸುನಿಲ್ ಚೆಟ್ರಿ ಅವರಿಗೆ ಕೊನೆಯ ಅಂತರರಾಷ್ಟ್ರೀಯ ಪಂದ್ಯದಲ್ಲಿ ಗೆಲುವಿನ ಉಡುಗೊರೆಯನ್ನು ನೀಡಲು ಭಾರತದ ಆಟಗಾರರಿಗೆ ಸಾಧ್ಯವಾಗಲಿಲ್ಲ. ಆದರೆ ಕುವೈತ್ ವಿರುದ್ಧ ಗುರುವಾರ ನಡೆದ ವಿಶ್ವಕಪ್ ಅರ್ಹತಾ ಗುಂಪಿನ ಈ ನಿರ್ಣಾಯಕ ಪಂದ್ಯವನ್ನು ಭಾರತ ಗೋಲಿಲ್ಲದೇ ಡ್ರಾ ಮಾಡಿಕೊಂಡು ಸಮಾಧಾನ ಪಟ್ಟಿತು.

ಕುವೈತ್ ವಿರುದ್ಧ ಪಂದ್ಯದಲ್ಲಿ ಭಾರತ ತಂಡದ ನಾಯಕ ಸುನಿಲ್ ಚೆಟ್ರಿ ಅವರು ಚೆಂಡಿನ ಮೇಲೆ ನಿಯಂತ್ರಣ ಸಾಧಿಸಲು ಯತ್ನಿಸಿದರು. ಪಿಟಿಐ ಚಿತ್ರ

39 ವರ್ಷದ ಚೆಟ್ರಿ ಅವರ 19 ವರ್ಷಗಳ ಅಂತರರಾಷ್ಟ್ರೀಯ ಫುಟ್‌ಬಾಲ್ ಪಯಣಕ್ಕೆ ಈ ಪಂದ್ಯದ ಮೂಲಕ ತೆರೆಬಿದ್ದಿತು. ಸಾಲ್ಟ್‌ಲೇಕ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ ಈ ಫಲಿತಾಂಶವು ಅರ್ಹತಾ ಸುತ್ತಿನ ಮೂರನೇ ಹಂತಕ್ಕೆ ತಲುಪುವ ಭಾರತದ ಆಸೆಗೆ ಹಿನ್ನಡೆ ಉಂಟುಮಾಡಿತು.

'ಎ' ಗುಂಪಿನಲ್ಲಿರುವ ಭಾರತ ಇಂದಿನ 'ಡ್ರಾ' ನಂತರ ಒಟ್ಟು ಐದು ಪಾಯಿಂಟ್ಸ್ ಸಂಗ್ರಹಿಸಿದೆ. ಜೂನ್ 11ರಂದು ಭಾರತ ಎರಡನೇ ಸುತ್ತಿನ ತನ್ನ ಕೊನೆಯ ಪಂದ್ಯವನ್ನು ಏಷ್ಯನ್ ಚಾಂಪಿಯನ್ಸ್ ಕತಾರ್ ವಿರುದ್ಧ ಆಡಲಿದೆ. ನಾಲ್ಕು ಪಾಯಿಂಟ್ಸ್ ಕಲೆಹಾಕಿರುವ ಕುವೈತ್ ತಂಡವು ಅದೇ ದಿನ ಇನ್ನೊಂದು ಪಂದ್ಯದಲ್ಲಿ ಅಫ್ಘಾನಿಸ್ತಾನವನ್ನು ಎದುರಿಸಲಿದೆ.

ಚೆಟ್ರಿ 2005ರಲ್ಲಿ ಪಾಕಿಸ್ತಾನ ವಿರುದ್ಧ ಕ್ವೆಟ್ಟಾದಲ್ಲಿ ನಡೆದ ತಮ್ಮ ಪದಾರ್ಪಣೆ ಪಂದ್ಯದಲ್ಲಿ ಗೋಲು ಹೊಡೆದಿದ್ದರು. ಆ ಪಂದ್ಯ 1–1 ಡ್ರಾ ಆಗಿತ್ತು. ಈ ಪಂದ್ಯದಲ್ಲಿ ಅವರಿಗೆ ಗೋಲು ಹೊಡೆಯಲಾಗಲಿಲ್ಲ. ಆದರೆ ಕೊನೆಯ ಪಂದ್ಯವೂ ಡ್ರಾ ಆಯಿತು. ಪಂದ್ಯದ ಮೊದಲಾರ್ಧದಲ್ಲಿ ಇತ್ತಂಡಗಳೂ ಅವಕಾಶಕ್ಕಾಗಿ ಉತ್ತಮ ಪ್ರಯತ್ನ ನಡೆಸಿದವು. ಆದರೆ ಫಿನಿಷಿಂಗ್ ಹಂತದಲ್ಲಿ ಎಡವಿದವು. ನಾಲ್ಕನೇ ನಿಮಿಷ ಇದ್ ಅಲ್ ರಶೀದಿ ಅವರು ಭಾರತದ ಗೋಲಿನತ್ತ ಧಾವಿಸಿ ಮೊಹಮದ್ ದಹಮ್ ಅವರಿಗೆ ಚೆಂಡನ್ನು ಪಾಸ್ ಮಾಡಿದರು. ಆದರೆ ಅವರ ಯತ್ನ ವಿಫಲವಾಯಿತು.

11ನೇ ನಿಮಿಷ ಚೆಟ್ರಿ ಅವರ ಗೋಲು ಯತ್ನವನ್ನು ರಕ್ಷಣೆ ಆಟಗಾರ ಹಸನ್ ಅಲ್ಏೆಝಿ ಉತ್ತಮವಾಗಿ ತಡೆದರು. 47ನೇ ನಿಮಿಷ ಫೈಸಲ್ ಅಲ್ ಹರ್ಬಿ ಯತ್ನವನ್ನು ಗೋಲ್‌ಕೀಪರ್ ಗುರುಪ್ರೀತ್ ಯಶಸ್ವಿಯಾಗಿ ತಡೆದರು. ಕೊನೆಯಲ್ಲಿ ಭಾರತ ಸ್ವಲ್ಪ ಮೇಲುಗೈ ಸಾಧಿಸಿತು. ಒರಟಾಟಕ್ಕೂ ಕೊರತೆಯಿರಲಿಲ್ಲ. ಭಾರತದ ಪರ ಮೊದಲ ಪಂದ್ಯ ಆಡಿದ ಎಡ್ಮಂಡ್ ಮತ್ತು ಸುಲ್ತಾನ್ ಅಲ್ಏೆಝಿ ನಡುವೆ ಜಗಳವಾಯಿತು. ರೆಫ್ರಿ ಇಬ್ಬರಿಗೂ ಹಳದಿ ಕಾರ್ಡ್ ದರ್ಶನ ಮಾಡಿಸಿದರು.

ಮೈದಾನದಲ್ಲಿ ಆವರಿಸಿದ ಶೂನ್ಯಭಾವ

ಕೋಲ್ಕತ್ತ (ಪಿಟಿಐ): ಸಾಲ್ಟ್‌ಲೇಕ್ ಕ್ರೀಡಾಂಗಣದ ಗ್ಯಾಲರಿಗಳೆಲ್ಲ ಗುರುವಾರ ಪ್ರೇಕ್ಷಕರಿಂದ ಭರ್ತಿಯಾಗಿದ್ದವು. ಆದರೆ ಸುನಿಲ್ ಚೆಟ್ರಿ ಅವರ ವಿದಾಯದ ಪಂದ್ಯ ಅದಾಗಿದ್ದ ಕಾರಣ ಅಲ್ಲಿ ಶೂನ್ಯಭಾವ ಆವರಿಸಿತ್ತು. 19 ವರ್ಷಗಳ ಕಾಲ ಭಾರತದ ಫುಟ್‌ಬಾಲ್ ಕ್ಷೇತ್ರದಲ್ಲಿ ತಮ್ಮದೇ ಛಾಪು ಮೂಡಿಸಿದ್ದ ಚೆಟ್ರಿ ಸೂಕ್ತ ಉತ್ತರಾಧಿಕಾರಿ ಕೊರತೆಯ ನಡುವೆಯೇ ನಿವೃತ್ತರಾದರು.

11ನೇ ನಂಬರ್ ಜರ್ಸಿ ತೊಡುತ್ತಿದ್ದ ಭಾರತ ತಂಡದ ಅತಿ ದೀರ್ಘ ಕಾಲದ ನಾಯಕ ಚೆಟ್ರಿ ಸಾಲ್ಟ್‌ಲೇಕ್ ಕ್ರೀಡಾಂಗಣದಲ್ಲಿ ಕುವೈತ್ ವಿರುದ್ಧ ವಿಶ್ವಕಪ್ ಫುಟ್‌ಬಾಲ್ ಅರ್ಹತಾ ಸುತ್ತಿನ ಪಂದ್ಯದಲ್ಲಿ ಕೊನೆಯ ಸಲ ಕ್ರೀಡಾಂಗಣಕ್ಕಿಳಿದರು. ಸುಮಾರು 59 ಸಾವಿರ ಪ್ರೇಕ್ಷಕರು ಪಂದ್ಯ ವೀಕ್ಷಿಸಿದರು.

ಟೀಮ್ ಬಸ್‌ನಿಂದ ಅವರು ಮೊದಲನೆಯವರಾಗಿ ಇಳಿದರು. ಗೇಟ್‌ನ ಹೊರಗಡೆ ನೀಲಿ ಜರ್ಸಿ ತೊಟ್ಟ ಜನಸಾಗರವೇ ಹರಿದಿತ್ತು. ಅಭಿಮಾನಿಗಳು ರಾಷ್ಟ್ರಧ್ವಜಗಳನ್ನು ಬೀಸಿ ಹರ್ಷೋದ್ಗಾರ ಮೊಳಗಿಸಿದರು. ಎಲ್ಲ ರಸ್ತೆಗಳು ಸಾಲ್ಟ್‌ಲೇಕ್‌ಗೆ ಮುಖಮಾಡಿದಂತೆ ಕಂಡವು.

ಪಂದ್ಯ ಆರಂಭಕ್ಕೆ ಮುನ್ನ ಎಐಎಫ್‌ಎಫ್ ಅಧ್ಯಕ್ಷ ಕಲ್ಯಾಣ್ ಚೌಬೆ, ರಾಜ್ಯದ ಕ್ರೀಡಾ ಸಚಿವ ಅರುಪ್ ಭಟ್ಟಾಚಾರ್ಯ ಅವರು ಚೆಟ್ರಿ ಅವರಿಗೆ ಶುಭಹಾರೈಸಿದರು. ಮಮತಾ ಬ್ಯಾನರ್ಜಿ ಅವರೂ ಎಕ್ಸ್‌ನಲ್ಲಿ ಅಭಿನಂದನೆಯ ಪೋಸ್ಟ್ ಹಾಕಿದರು.

39 ವರ್ಷದ ಆಟಗಾರ ಮೈದಾನದಲ್ಲಿ ಯುವಕರನ್ನು ನಾಚಿಸುವಂತೆ ಲವಲವಿಕೆಯಿಂದ ಆಡಿದರು. ಇದು ಅವರಿಗೆ 151ನೇ ಪಂದ್ಯವಾಗಿದ್ದು, ಅವರು 94 ಗೋಲುಗಳನ್ನು ಹೊಡೆದಿದ್ದಾರೆ. ಇವೆರಡೂ ಭಾರತದ ಪರ ದಾಖಲೆ. ಗೋಲು ಗಳಿಕೆಯಲ್ಲಿ ಅವರಿಗೆ ವಿಶ್ವದಲ್ಲಿ ನಾಲ್ಕನೇ ಸ್ಥಾನ. ಪೋರ್ಚುಗಲ್‌ನ ಕ್ರಿಸ್ಟಿಯಾನೊ ರೊನಾಲ್ಡೊ (128), ಇರಾನ್‌ನ ಅಲಿ ದಾಯಿ (108) ಮತ್ತು ಅರ್ಜೆಂಟೀನಾದ ಲಯನೆಲ್ ಮೆಸ್ಸಿ (106) ಅವರು ಮಾತ್ರ ಚೆಟ್ರಿ ಅವರಿಗಿಂತ ಮುಂದಿದ್ದಾರೆ. ಅವರ ಮಾವ ಹಾಗೂ ಮಾಜಿ ಕೋಚ್ ಸುಬ್ರತಾ ಭಟ್ಟಚಾರ್ಯ ಅವರ ಗೈರು ಎದ್ದುಕಂಡಿತು. ಆದರೆ ತಂದೆ ಖರ್ಗ, ತಾಯಿ ಸುಶೀಲಾ, ಪತ್ನಿ ಸೋನಮ್, 9 ತಿಂಗಳ ಮಗು ಧ್ರುವ್, ಭಾವ ಸಾಹೇಬ್ ಭಟ್ಟಾಚಾರ್ಯ ಅವರು ಸ್ಟ್ಯಾಂಡ್‌ನಿಂದ ಹುರಿದುಂಬಿಸಿದರು.